ಜಾಜ್ವಲ್ಯೇತೇ ವಿಷ್ಣುವಾಯೂ ಸ್ಮ ದೇವೌ ವೇದವ್ಯಾಸಾನಂದತೀರ್ಥಾಭಿಧಾನೌ

# ಶ್ರೀವ್ಯಾಸ ಮಧ್ವ

(ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಮಾಸಪತ್ರಿಕೆ)
ಪಾಜಕ, 89/24, 3ನೇ ಅಡ್ಡರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ,
ಬೆಂಗಳೂರು-19. ದೂರವಾಣಿ : (080) 26602802; 26611011

**ಸಂಪಾದಕರು : ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ**

ಸಂಪುಟ -೫ ಸಂಚಿಕೆ -೪ ಶ್ರೀನಂದನ(ಜ್ಯೇಷ್ಠ-ಆಷಾಢ) ಜೂನ್ ೨೦೧೨

## ಶ್ರೀವ್ಯಾಸಸೂಕ್ತಿ

**ಬಾಲೋ ಯುವಾ ಚ ವೃದ್ಧಶ್ಚ ಯತ್ಕರೋತಿ ಶುಭಾಶುಭಮ್ ।**
**ತಸ್ಯಾಂ ತಸ್ಯಾಮವಸ್ಥಾಯಾಂ ತತ್ಫಲಂ ಪ್ರತಿಪದ್ಯತೇ ॥**
**-ಮಹಾಭಾರತ (೧೨/೧೮೧/೧೫)**

ಬಾಲಕ, ಯುವಕ ಹಾಗೂ ವೃದ್ಧ ಇವರು ಯಾವುದೇ ಒಳಿತು ಕೆಡಕುಗಳನ್ನು ಮಾಡಿದರೂ ಅದರ ಫಲವನ್ನು ಆಯಾಯಾ ಅವಸ್ಥೆಯಲ್ಲಿಯೇ ಅನುಭವಿಸುವರು.

## ಶ್ರೀಮಧ್ವಸೂಕ್ತಿ

**ಸ್ಮರಣೋಪಾಸನಂ ಚೈವ ಧ್ಯಾನಾತ್ಮಕಮಿತಿ ದ್ವಿಧಾ ।**
**ಸ್ಮರಣಂ ಸರ್ವದಾ ಯೋಗ್ಯಂ ಧ್ಯಾನೋಪಾಸನಮಾಸನೇ ॥**
**- ಬ್ರಹ್ಮಸೂತ್ರಭಾಷ್ಯ (೪.೧.೮)**

ಉಪಾಸನೆಯು ಸ್ಮರಣೆ ಹಾಗೂ ಧ್ಯಾನ ಎಂಬುದಾಗಿ ಎರಡು ಬಗೆ: ಸ್ಮರಣೆಯನ್ನು ಸದಾ ಮಾಡಬೇಕು ; ಆದರೆ ಧ್ಯಾನವನ್ನು ಆಸನದಲ್ಲಿ ಕುಳಿತೇ ಮಾಡಬೇಕು.

# ವಿಷಯಾನುಕ್ರಮಣಿಕೆ


| | | | |
|---|---|---|---|
| ೧. | ಶ್ರೀವ್ಯಾಸಸೂಕ್ತಿ – ಶ್ರೀಮಧ್ವಸೂಕ್ತಿ | | ೧ |
| ೨. | ಹರಿದಾಸರ ಸೂಕ್ತಿರತ್ನಗಳು | – ಶ್ರೀಪುರಂದರದಾಸರ ಸೂಕ್ತಿರತ್ನಗಳು | ೩ |
| ೩. | ಗಾಯತ್ರೀಭಾಷ್ಯರೂಪಃ ಅಸೌ – ೩೯: | – ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು | ೪ |
| ೪. | ಶ್ರೀಕೃಷ್ಣನಾಮಾರ್ಥಚಂದ್ರಿಕಾ – ೪೨ : | – ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು | ೬ |
| ೫. | ಚಾತುರ್ಮಾಸ್ಯವ್ರತ | – ಶ್ರೀಶ್ರೀವಿಶ್ವಪ್ರಸನ್ನತೀರ್ಥಶ್ರೀಪಾದರು | ೧೪ |
| ೬. | ಸಂಪಾದಕೀಯ – ಯುವ ವರ್ಗದಲ್ಲಿ ಕುಸಿಯುತ್ತಿರುವ ಧರ್ಮಶ್ರದ್ಧೆ | | ೧೫ |
| ೭. | ಉಪಚಾರಾರ್ಪಣೆಯ ಅನುಸಂಧಾನ –ಪಂ.ಶ್ರೀಸಗ್ರಿರಾಘವೇಂದ್ರ ಉಪಾಧ್ಯಾಯ | | ೧೭ |
| ೮. | ಯಂತ್ರೋದ್ಧಾರಕ ಪ್ರಾಣದೇವರು | – ಶ್ರೀಪಿ.ವಿಷ್ಣುತೀರ್ಥ | ೧೯ |
| ೯. | ಚಿಕ್ಕೋಡಿ ಶ್ರೀಭಗವಂತರಾಯರು | – ಶ್ರೀರಾಯಸಂ ತಿರುಮಲರಾವ | ೨೧ |
| ೧೦. | ಚಾತುರ್ಮಾಸ್ಯವ್ರತ | – ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ | ೨೪ |
| ೧೧. | ಶ್ರೀಮದಾಚಾರ್ಯರ ಕಾಲನಿರ್ಣಯದಲ್ಲಿ ಸೂರ್ಯಗ್ರಹಣದ ಪಾತ್ರ | – ಜಯಂತ ವ್ಯಾಸನಕೆರೆ | ೩೦ |
| ೧೨. | ''ಚತುಃಸಹಸ್ರೇ ತ್ರಿಶತೋತ್ತರೇ ಗತೇ ...'' | – ಸುದರ್ಶನ | ೩೬ |
| ೧೩. | ಶ್ರೀವಿಜಯೀಂದ್ರರ ಗ್ರಂಥಗಳು | – ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ | ೩೮ |
| ೧೪. | ತಪ್ತಮುದ್ರಾಧಾರಣೆಯ ಮಹತ್ತ್ವ | – ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ | ೩೯ |
| ೧೫. | ಶ್ರೀಕನಕದಾಸರ ಹರಿಭಕ್ತಿಸಾರ | – ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ | ೪೩ |
| ೧೬. | ಮಾಸದ ವಿಶೇಷಗಳು | | ೪೬ |


*****

## ಚಂದಾ ವಿವರ

ಆಜೀವಚಂದಾ : ರೂ ೫೦೦೦

ಪಂಚವಾರ್ಷಿಕ ಚಂದಾ : ರೂ. ೫೦೦; ಬಿಡಿ ಪ್ರತಿ : ರೂ. ೧೦

ವಿ.ಸೂ.:–

೧) ರೂ.೧೫,೦೦೦ಗಳನ್ನು ನೀಡಿ ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಸದಸ್ಯರಾಗುವವರಿಗೆ ಸರ್ವಮೂಲಗ್ರಂಥಗಳು, ಮಹಾಭಾರತತಾತ್ಪರ್ಯನಿರ್ಣಯ, ಹರಿಕಥಾಮೃತಸಾರ, ಸುಮಧ್ವವಿಜಯ, ಸಂಗ್ರಹರಾಮಾಯಣ ಮೊದಲಾದ ಪ್ರಕಾಶನದ ಎಲ್ಲಾ ಉಪಲಬ್ಧಗ್ರಂಥಗಳೂ ಉಚಿತ.

೨) ಅದರೊಂದಿಗೆ ೫ ವರ್ಷಗಳ ಕಾಲ ಶ್ರೀವ್ಯಾಸಮಧ್ವಮಾಸಪತ್ರಿಕೆಯನ್ನೂ ಸಹ ಉಚಿತವಾಗಿ ನೀಡಲಾಗುವುದು.

# ಹರಿದಾಸರ ಸೂಕ್ತಿರತ್ನಗಳು

(ದಾಸಸಾಹಿತ್ಯ - ವ್ಯಾಸಸಾಹಿತ್ಯದ ಕನ್ನಡ ಆವಿಷ್ಕರಣ. ಕನ್ನಡಕ್ಕೆ ವ್ಯಾಸಪೀಠದ ಭಾಗ್ಯವನ್ನು ನೀಡಿದ ಹಿರಿಮೆ ಹರಿದಾಸಸಾಹಿತ್ಯದ್ದು. ಅದರಿಂದ ಆಯ್ದ ಸೂಕ್ತಿರತ್ನಗಳನ್ನು ಪ್ರತಿತಿಂಗಳೂ ಈ ಅಂಕಣದಲ್ಲಿ ಕ್ರಮವಾಗಿ ನೀಡಲಾಗುವುದು.)

## ಶ್ರೀಪುರಂದರದಾಸರ ಸೂಕ್ತಿರತ್ನಗಳು

ಹೆಂಡತಿ ಮಾಡಿದ ಪಾಪ ಗಂಡನಿಗುಂಟು
ಗಂಡ ಮಾಡಿದ ಪುಣ್ಯ ಹೆಂಡತಿಗುಂಟು
ಹೆಂಡತಿ ಮಾಡಿದ ಪುಣ್ಯ ಗಂಡಗಿಲ್ಲ
ಗಂಡ ಮಾಡಿದ ಪಾಪ ಹೆಂಡತಿಗಿಲ್ಲ
ಜೀವಜೀವರ ಭೇದ ನೀನೆ ಉದ್ಧರಿಸಯ್ಯ ಪುರಂದರವಿಠಲ ॥

******

ಸಂತತಿಯಪ್ಪುದು ರಾಮಾಯಣ ಕೇಳಲು
ಸಕಲಪಾಪ ಪರಿಹರವು ಭಾರತ ಕೇಳಲು
ತಂತುಮಾತ್ರ ವಿಷ್ಣುಪುರಾಣವ ಕೇಳಲು
ತತ್ತ್ವವಿವೇಕವು ಬಾಹೋದು ಅಂತರವರಿತು
ಭಾಗವತ ಕೇಳಲು ಆಹೋದು ಜ್ಞಾನಭಕ್ತಿವೈರಾಗ್ಯವು
ಸಂತತ ಪುರಂದರವಿಠಲನ ಸಂಕೀರ್ತನ ಪಾಡಲು
ಸಕಲವು ಬಾಹೋದು ಸಾಯುಜ್ಯ ॥

******

ಇದೇ ಮುನಿಗಳ ಮನದ ಕೊನೆಯ ಠಾವು
ಇದೇ ಬ್ರಹ್ಮಾದಿಗಳ ಹೃತ್ಕಮಲಪೀಠ
ಇದೇ ಅರಿದ ಸುಜ್ಞಾನಿಗಳಿಗೆ ವೈಕುಂಠವು
ಇದೇ ದ್ವಾರಕವು ಇದೆ ಕ್ಷೀರಾಂಬುಧಿ
ಇದೇ ಪುರಂದರವಿಠಲನ ಮಂದಿರ ॥

******

# ಗಾಯತ್ರೀಭಾಷ್ಯರೂಪಃ ಅಸೌ - ೩೯

## (ಅನುಗ್ರಹಲೇಖನ)

**ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು**
**ಪಲಿಮಾರು ಮಠ, ಉಡುಪಿ.**

ಭಗವಂತನ ಸಾವಿರ ರೂಪಗಳಲ್ಲಿ ಒಂದು ''ಧ್ರುವ'' ಅನ್ನುವ ರೂಪ. ಸಾವಿರ ನಾಮಗಳಲ್ಲೊಂದು ನಾಮ ''ಧ್ರುವ''. ದೇವರೊಬ್ಬನೇ ''ಧ್ರುವ''. ''ಕ್ಷರಃ ಸರ್ವಾಣಿ ಭೂತಾನಿ'' ಬ್ರಹ್ಮಾದಿ ಸ್ತಂಬಪರ್ಯಂತ ಸಕಲ ಪದಾರ್ಥಗಳೂ ಅಧ್ರುವ ಅಂದರೆ ಅನಿತ್ಯ. ಅದಕ್ಕೆಂದೇ ಅಸಾರವೂ ಹೌದು. ಈ ಅನುಸಂಧಾನವು ದೃಢವಾದರೆ ಇದೇ ವಿರಕ್ತಿಯ ಮೂಲ. ಹಾಗಾಗಿ ಧ್ರುವದ ಹಿಂದೆ ಸಾಗುವುದೇ ನಿಜವಾದ ಸಾಧನೆ. ಧ್ರುವನನ್ನು (ಭಗವಂತನನ್ನು) ಧ್ರುವವಾಗಿ - ದೃಢವಾಗಿ ನಂಬಿದರೆ ಮಾತ್ರ ಮೃತ್ಯುವಿನ ದವಡೆಯಿಂದ ಪಾರಾಗಲು ಸಾಧ್ಯ. ಅಮೃತತ್ವದ ಪ್ರಾಪ್ತಿಯಾಗುತ್ತದೆ. ಕಠೋಪನಿಷತ್ತು ಹೇಳಿದ್ದೇ ಇದನ್ನು - ''**ಅನಾದ್ಯನಂತಂ ಮಹತಃ ಪರಂ ಧ್ರುವಂ ನಿಚಾಯ್ಯ ತಂ ಮೃತ್ಯುಮುಖಾತ್ ಪ್ರಮುಚ್ಯತೇ**''. ''**ಧ್ರುವಂ ನಿಚಾಯ್ಯ**'' ಅನ್ನುವುದಕ್ಕೆ ಎರಡು ಮುಖಗಳಿವೆ. ಧ್ರುವ ಅನ್ನುವ ಪದವು ಅನುಸಂಧಾನ, ಅರಿವು ಎಲ್ಲವೂ ಧ್ರುವಾಗಿರಬೇಕು. ಅಧ್ರುವದಿಂದ ಧ್ರುವನಾದ ಭಗವಂತನ ಲೋಕವು ದೊರೆಯದು.

ಎರಡು ರೀತಿಯ ಸಾಧನೆಗಳಿವೆ. ಒಂದು ಶ್ರೇಯಸ್ಸು, ಇನ್ನೊಂದು ಪ್ರೇಯಸ್ಸು. ತತ್ಕಾಲದಲ್ಲಿ ಸುಖ, ಕೊನೆಗೆ ಸಹಿಸಲಾಗದ ದುಃಖವಿತ್ತರೆ ಅದನ್ನು ಪ್ರೇಯಸ್ಸು ಅನ್ನುತ್ತಾರೆ. ಸಕ್ಕರೆ ಖಾಯಿಲೆಯವನು ಸಿಹಿ ಸವಿಯುವಾಗ ಭಾರೀ ಖುಷಿಪಡುತ್ತಾನೆ. ಆದರೆ ದಿನದಿಂದ ದಿನಕ್ಕೆ ದುಃಖ ತಾರಕಕ್ಕೇರುತ್ತದೆ. ಇದು ಪ್ರೇಯಸ್ಸು - ಅಧ್ರುವ. ದುಶ್ಚಟ- ದುರ್ವ್ಯಸನಗಳೆಲ್ಲ ಈ ಪ್ರೇಯಸ್ಸಿನ ಗುಂಪಲ್ಲೇ ಸೇರುತ್ತವೆ. ಪಾಠಬಿಟ್ಟು ಪಟ್ಟಂಗ ಮಾಡುವಾಗ, ಆಟ ಆಡುವಾಗ, ಕೂಡ ಸೇರುವಾಗ ಭಾರೀ ಸುಖವೆನಿಸುತ್ತದೆ. ಪರೀಕ್ಷೆಯಲ್ಲಿ ಅನುತ್ತೀರ್ಣನಾದಾಗ ಆತನ ಮುಂದಿನ ಜೀವನ ಬರ್ಬರ - ಇದು ಪ್ರೇಯಸ್ಸು - ಅಧ್ರುವ.

ದೇವರು ಕೊಟ್ಟದ್ದು ಈ ಸಾಧನ ಶರೀರ. ದೇಹ-ಗೇಹಗಳೆಲ್ಲಾ ಇದಕ್ಕೆ ಪೂರಕ- ವಾಗಬೇಕು. ಶಾಸ್ತ್ರದ ಜ್ಞಾನ - ಧ್ಯಾನಗಳಿಗಾಗಿ ಮುಡುಪಾಗಬೇಕು. ಇದು ಶ್ರೇಯಸ್ಸು - ಧ್ರುವ. ದೇವರ ಗರಿಮೆಯ ಅರಿವೇ ಸುಸ್ಥಿರವಾಗಬೇಕು. ಇದು ಶ್ರೇಯಸ್ಸು, ಪರಿಣಾಮದಲ್ಲಿ ಅಮೃತೋಪಮವಾಗಬೇಕು. ಇದನ್ನೇ ಶ್ರೇಯಸ್ಸು - ಧ್ರುವ ಸಾಧನೆಯೆನ್ನುತ್ತಾರೆ.

ಉತ್ತಾನಪಾದನ ಎರಡನೇ ಹೆಂಡತಿ ''ಸುರುಚಿ'', ಲೋಕದ ಸಂಪತ್ತೆಲ್ಲಾ ತನೆ, ಅಧಿಕಾರವೆಲ್ಲಾ ತನ್ನ ಮಗನಿಗೆ, ಗಂಡನ ತೊಡೆಗಳೂ ತನ್ನ ಮಗುವಿಗೆ ಮೀಸಲು.

ಇನ್ನೊಬ್ಬರಿಗಲ್ಲ, ಮತ್ತೊಬ್ಬರಿಗೆ ಅಂದರೆ ಧ್ರುವನಿಗೆ ದೊರೆಯಬೇಕಾದರೂ ಆತ ತನ್ನ ಒಡಲಲ್ಲೇ ಬೆಳೆಯಬೇಕು ಎಂಬ ಸ್ವಾರ್ಥಪರಾಯಣತೆ. ಈ ಈರ್ಷ್ಯೆ-ಅಸೂಯೆಗಳು, ದ್ವೇಷ-ಸ್ವಾರ್ಥಪರಾಣತೆಗಳು ಸುಖಾಭಾಸಗಳಿಗೆ ಸಾಧಕಗಳು. ಉಳಿದವರಿಗೆ ಸುಖಲೇಶವೂ ಸುಳಿಯಬಾರದು ಅನ್ನುವ ದುಶ್ಚಿಂತನೆಗಳೆಲ್ಲಾ ಪ್ರೇಯಸ್ಸು. ಪ್ರಾರಂಭದಲ್ಲಿ ಸುಖನೀಡಿ ಕೊನೆಗೆ ದುರಂತವೇ ಸರಿ. ಹೊಟ್ಟೆಕಿಚ್ಚಿನ ಅಮ್ಮ-ಮಗು ಇಬ್ಬರೂ ಕಾಡ್ಗಿಚ್ಚಿನಲ್ಲಿ ಸುಟ್ಟುಕರಕಲಾದರು.

ಮತ್ತೊಬ್ಬ ಮಡದಿ ''ಸುನೀತಿ''. ಒಳ್ಳೆಯದರ ಹಿಂದೆ ಇರುವವಳು. ಒಳ್ಳೆಯ ಕಡೆಗೆ ಕೊಂಡೊಯ್ಯುವವಳು. ''ಸು+ನೀತಿ'' - ಭಗವಂತನ ಕಡೆಗೆ ಸಾಗುವವಳು. ಭಗವಂತನ ದಾರಿ ತೋರಿಸುವವಳು. ತನ್ನ ಪ್ರೀತಿಯ ಮಗನನ್ನು ಹುಲಿ-ಹಾವುಗಳ ಆನನವೆಂಬ ದಾರುಣ ಕಾನನಕ್ಕೆ ಕಳುಹಿಸಿದಳು ಸುನೀತಿ. ಧ್ರುವನೂ ಅಷ್ಟೇ ಸಾಧನೆಯಲ್ಲಿ ಧ್ರುವತ್ವವನ್ನು ತಳೆದವ. ಹಾಗಾಗಿ ಧ್ರುವನಾದ ಭಗವಂತನನ್ನು ಕಾಣುವಂತಾಯಿತು. ಸಾಧನೆಯು ಧ್ರುವವಾದರೆ ಫಲವೂ ಧ್ರುವ. ಸಾಧನೆಯ ಮನಸ್ಸನ್ನು ''ಶರೋ ಹ್ಯಾತ್ಮಾ'' ಎಂದು ಬಾಣಕ್ಕೆ ಹೋಲಿಸಿದ್ದಾರೆ ಉಪನಿಷತ್ ಋಷಿಗಳು. ಬಾಣವು ಅಲ್ಲಾಡದೆ ಏಕತಾನವಾಗಿ ಲಕ್ಷ್ಯಮಾತ್ರ ಚಿತ್ತವಾಗಿದ್ದರೆ ಮಾತ್ರ ಹೇಗೆ ಗುರಿಮುಟ್ಟಬಲ್ಲುದೋ, ಅದೇ ರೀತಿ ಸಾಧಕನ ಮನಸ್ಸೂ ಧ್ರುವವಾಗಿರಬೇಕೆಂದು ಚಿಂತನೆಯಲ್ಲಿದೆ. ಧ್ರುವನು ಧ್ರುವನಾದುದರಿಂದಲೇ ಭಗವಂತ ದರ್ಶನ ನೀಡಿ ಅವನನ್ನು ಉತ್ತಾರಣೆ ಮಾಡಿದ ರೀತಿಯನ್ನು ಗಾಯತ್ರೀಮಾತೆ ''ಸವಿತಾ'' ಎಂದಿದ್ದಾಳೆ. ''ಸವಿನಂ ತಾರಯತಿ'' ಸವ ಅಂದರೆ ಧ್ರುವ ಸಾಧನೆಯ ಯಜ್ಞ. ಧ್ರುವಸವ ಮಾಡಿದ ಧ್ರುವನು ''ಸವಿ''; ''ಸವಿ+ತಾ'' ಆತನನ್ನು ರಕ್ಷಿಸಿದ ಭಗವಂತ ಸವಿತಾ; ಇದು ಗಾಯತ್ರಿಯ ಭಾಷ್ಯ.

*****

## ಮಾರ್ಚ್ ರಕ್ಷಾಪುಟ-೩:
## ಶ್ರೀಮುದ್ಗಲಮುನಿ ಪ್ರತಿಷ್ಠಿತ ಶ್ರೀಹನುಮಂತದೇವರು

ಚಿತ್ರ : **ಡಾ॥ಎಸ್.ಹನುಮಂತಜೋಯಿಸ್**, ಶಿವಮೊಗ್ಗ

ದಾವಣಗೆರೆ ಜಿಲ್ಲೆಯ ಚೆನ್ನಗಿರಿ ತಾಲ್ಲೂಕಿನ ಮುದ್ದೇನಹಳ್ಳಿಗ್ರಾಮದ ಪಕ್ಕದ ಬೆಟ್ಟದ ಮೇಲಿನ ದೇವಸ್ಥಾನದಲ್ಲಿರುವ ಮೂರ್ತಿ ಇದಾಗಿದೆ. ನಿರ್ಮಾಣಕಾಲ (ಕೆಳದಿ ಚೆನ್ನಮ್ಮಾಜಿ ಆಳ್ವಿಕೆಯ ಕಾಲ) ಕ್ರಿ.ಶ. ೧೬೭೨-೧೬೯೭ ಎಂದು ಪ್ರತೀತಿ. ಹೆಳವನಕಟ್ಟೆ ಗಿರಿಯಮ್ಮ ಈ ಮೂರ್ತಿಯನ್ನು ಕುರಿತ ಕೃತಿಯೊಂದನ್ನು ರಚಿಸಿರುವರು. ಶ್ರೀರಾಘವೇಂದ್ರಮಠದ ಶ್ರೀವರದೇಂದ್ರತೀರ್ಥರು ಇದನ್ನು ಸಂದರ್ಶಿಸಿದ್ದರೆಂದು ಪ್ರತೀತಿ. ವಿಗ್ರಹದ ಎತ್ತರ ಸುಮಾರು ೫ ಅಡಿ. ಶ್ರೀವೀರಾಂಜನೇಯ ಮೂರ್ತಿ ಎಂದು ಪ್ರಸಿದ್ಧಿ. ಬ್ರಹ್ಮರಥೋತ್ಸವ ಪ್ರತಿ ವರ್ಷ ಚೈತ್ರಶುದ್ಧ ನವಮಿಯಂದು; ಚೆನ್ನಗಿರಿ ಬಸ್ ನಿಲ್ದಾಣದಿಂದ ಸುಮಾರು ೪ ಕಿ.ಮೀ. ದೂರದಲ್ಲಿದೆ.

# ಶ್ರೀಕೃಷ್ಣನಾಮಾರ್ಥಚಂದ್ರಿಕಾ - ೪೨

## (ಅನುಗ್ರಹಲೇಖನ)

**ಪರಮಪೂಜ್ಯ ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು**
**ಭಂಡಾರಕೇರಿಮಠ**

## ಬಲಭದ್ರಪ್ರಿಯಾನುಜಃ

ಬಲಭದ್ರಸ್ಯ = ರೌಹಿಣೇಯಸ್ಯ ಪ್ರಿಯಂ = ಸೇವಾಪರಿಶ್ರಮಾಭಾವರೂಪಂ ಇಷ್ಟಂ ಅನುಸೃತ್ಯ ತಸ್ಯ ಅನುಜತ್ವೇನ ಜಾಯತೇ ಇತಿ ಬಲಭದ್ರಪ್ರಿಯಾನುಜಃ।

''ಸೇವಾಖಿನ್ನೋ ಲಕ್ಷ್ಮಣೋಽಗ್ರೇ ಹರೇರ್ಭೂತ್'' ಇತ್ಯಾಚಾರ್ಯೋಕ್ತದಿಶಾ ರಾಮಾವತಾರೇ ಅನುಜಃ ಸನ್ ಅತ್ಯರ್ಥಂ ಸೇವಾಂ ವಿಧಾಯ ಲಕ್ಷ್ಮಣಃ ಅತಿಪರಿ-ಶ್ರಾಂತೋಽಭೂತ್ । ಅಸ್ಮಿನ್ ಜನ್ಮನ್ಯಪಿ ಅನುಜತ್ವೇ ಮತ್ಸೇವಾನಿಮಿತ್ತಪರಿಶ್ರಮಃ ಸ್ಯಾತ್, ಸ ಚ ಮಾಽಭೂತ್ ಇತಿ ಸ್ವೇಚ್ಛಯೈವ ಭಗವಾನ್ ಸೇವಾಖಿನ್ನಸ್ಯ ಲಕ್ಷ್ಮಣಸ್ಯ ಸೇವಾಪರಿಶ್ರಮಾಭಾವರೂಪಂ ಇಷ್ಟಂ ವಿಧಾತುಂ ತದನುಸೃತ್ಯ ತಜ್ಜನ್ಮಾನುಜಾಯತೇ ಇತಿ ಭಾವಃ।

ಅಥವಾ ಬಲಭದ್ರಸ್ಯ ಪ್ರಿಯಂ = ಸ್ವಕರ್ತೃಕೋಪಕಾರಜನ್ಯಂ ಸುಖಂ ಅನುಸೃತ್ಯ (ತಂ ವಿಧಾತುಮಿತಿ ಯಾವತ್) ಜಾಯತೇ ಇತಿ ಬಲಭದ್ರಪ್ರಿಯಾನುಜಃ।

''ಶಿರಃ ಪ್ರಿಯೇ ಸ್ಥಿತಂ ತಸ್ಯ ಪರೇಯಂ ಪ್ರಿಯನಾಮಕಮ್'' ಇತಿ ವಚನೇನ ಪರ್ಯೈಃ ಪ್ರಾಪ್ಯತ್ವಹೇತುನಾ ಉಪಕಾರಜನ್ಯಸುಖಂ ಪ್ರಿಯಮಿತ್ಯುಚ್ಯತೇ । ಖಂಡಾರ್ಥೇ ಉಪಕಾರಜಪ್ರಿಯಶಬ್ದಿತಸುಖೇ ಇತಿ ಶ್ರೀರಾಘವೇಂದ್ರಸ್ವಾಮಿಪಾದೈಃ ಅಯಮರ್ಥಃ ಸ್ಫುಟೀಕೃತಃ । ಅತಃ ಪ್ರಿಯಶಬ್ದಸ್ಯ ಉಪಕಾರಜನ್ಯಸುಖಮಿತ್ಯರ್ಥಃ ಪ್ರಾಮಾಣಿಕ ಇತಿ ಬೋಧ್ಯಮ್।

ಬಲಭದ್ರಸ್ಯ ಕೃಷ್ಣಕರ್ತೃಕೋಪಕಾರಜನ್ಯಂ ಸುಖಂ ತು ಮಹಾಭಾರತತಾತ್ಪರ್ಯ-ನಿರ್ಣಯೇ ಪ್ರತಿಪಾದಿತಮ್ । ಬ್ರಹ್ಮವರೇಣ ಅವಧ್ಯಸ್ಯ ಜಗದ್ವಿನಾಶೈಕಬುದ್ಧೇಃ ವಿಷವೃಕ್ಷರೂಪಸ್ಯ ಉಗ್ರಾಸುರಸ್ಯ ವಿಷಪ್ರಭಾವೇಣ ಬಲಭದ್ರೋಽಪಿ ರೋಗಪೀಡಿತಃ ಸಂವೃತ್ತಃ । ತದಾ ಭಗವಾನ್ ಶ್ರೀಕೃಷ್ಣಃ ಸ್ವಾಮೃತಕರಸ್ಪರ್ಶಮಾತ್ರೇಣ ರೋಗ-ಸಂತಾಪಾತ್ ತಂ ಮೋಚಯಾಮಾಸ । ಏವಂವಿಧೋಪಕಾರೇಣ ಬಲಭದ್ರಂ ನಂದಯಾಮಾಸ ತಥಾ ಚೋಕ್ತಮ್ –

> **ಧಾತುರ್ವರಾಜ್ಜಗದಭಾವಕೃತೈಕಬುದ್ಧಿ-**
> **ರ್ವಧ್ಯೋ ನ ಕೇನಚಿದಸೌ ತರುರೂಪದೈತ್ಯಃ॥**
> **ಸಂಕರ್ಷಣೇಽಪಿ ತದುದಾರವಿಷಾನುವಿಷ್ಟೇ**

**ಕೃಷ್ಣೋ ನಿಜಸ್ಪರ್ಶತಸ್ತಮಪೇತರೋಗಮ್ ।**
**ಕೃತ್ವಾ ಬಭಂಜ ವಿಷವೃಕ್ಷಮಮುಂ ಬಲೇನ**
**ತಸ್ಯಾನುಗೈಃ ಸಹ ತದಾಕೃತಿಭಿಃ ಸಮಸ್ತೈಃ ॥**

ಇತಿ ತ್ರಯೋದಶೇಽಧ್ಯಾಯೇ (೪೫-೪೬) ।

ಅನ್ಯದಪಿ ಕೃಷ್ಣಕರ್ತೃಕೋಪಕಾರಜನ್ಯಂ ಸುಖಂ ಬಲಭದ್ರೇಣ ಪ್ರಾಪ್ತಮ್ । ಕ್ರೀಡಾಯಾಂ ಬಲಭದ್ರೇಣ ಪರಾಜಿತಃ ಪ್ರಲಂಬಾಸುರಃ ಉಗ್ರರೂಪೇಣ ತಮುಪಾದಾಯ ಅಂಬರ-ಮಾರ್ಗಂ ಜಗಾಮ । ತದಾ ಬಲಭದ್ರೋ ಭಯಪೀಡಿತಃ ಸನ್ ಭಗವಂತಂ ತುಷ್ಟಾವ । ತದಾ ಭಗವಾನ್ ಶ್ರೀಕೃಷ್ಣಃ ''ಅಹಂ ತ್ವಯಿ ಆವಿಷ್ಟೋಽಸ್ಮಿ, ತ್ವಂ ಮಾ ಭೈಷೀಃ'' ಇತ್ಯುಕ್ತ್ವಾ ತಸ್ಯಾಧಿಕಬಲಂ ವ್ಯಂಜಯಾಮಾಸ । ತೇನ ಪೂರಿತಬಲೋ ಬಲೋ ನಿರ್ಭಯಃ ಸನ್ ತಂ ದೈತ್ಯಂ ಮುಷ್ಟಿನಾ ಜಘಾನ । ಏವಂ ಚ ಕೃಷ್ಣಾಭಯಪ್ರದವಚನೇನ ಪೂರಿತಬಲೋ ಬಲಃ ಸ್ವಸ್ಥಃ ಸನ್ ತಂ ದೈತ್ಯಂ ನಿಹತ್ಯ ಸುಖೀ ಸಂವೃತ್ತಃ । ಏವಂ ರೀತ್ಯಾ ಕೃಷ್ಣಕರ್ತೃಕಾನ್ಯೋ-ಪಕಾರೇಣಾಪಿ ಬಲಭದ್ರಃ ಸುಖಂ ಪ್ರಾಪ್ತವಾನ್ ।

ತಸ್ಮಾತ್ ಬಲಭದ್ರಸ್ಯ ಪ್ರಿಯಂ ಉಪಕಾರಜನ್ಯಸುಖಂ ಅನುಸೃತ್ಯ (ತಂ ವಿಧಾತುಮಿತಿ ಯಾವತ್) ತಜ್ಜನ್ಮಾನುಜಾಯತೇ ಭಗವಾನ್ ಶ್ರೀಕೃಷ್ಣಃ ಇತಿ ಸಾಧೂಕ್ತಮ್ । ತಥಾ ಚೋಕ್ತಮ್ -

**ಕೃಷ್ಣಸ್ಯ ಪಕ್ಷಿಷು ಜಯತ್ಸು ಸ ರಾಮಮೇತ್ಯ**
**ಪಾಪಃ ಪರಾಜಿತ ಉವಾಹ ತಮುಗ್ರರೂಪಃ ॥**
**ಭೀತೇನ ರೋಹಿಣಿಸುತೇನ ಹರಿಃ ಸ್ತುತೋಽಸೌ**
**ಸ್ವಾವಿಷ್ಟತಾಮುಪದಿದೇಶ ಬಲಾಭಿಪೂರ್ತ್ಯೈ ।**
**ತೇನೈವ ಪೂರಿತಬಲೋಽಂಬರಚಾರಿಣಂ ತಂ**
**ಪಾಪಂ ಪ್ರಲಂಬಮುರುಮುಷ್ಟಿಹತಂ ಚಕಾರ ॥**
**ತಸ್ಮಿನ್ ಹತೇ ಸುರಗಣಾ ಬಲದೇವನಾಮ**
**ರಾಮಸ್ಯ ಚಕ್ರುರತಿತೃಪ್ತಿಯುತಾ ಹರಿಶ್ಚ ।**

ಇತಿ ತ್ರಯೋದಶೇಽಧ್ಯಾಯೇ (೫೬-೫೭)

ಅಥವಾ ಬಲಭದ್ರಪ್ರಿಯಾನುಜ ಇತ್ಯಸ್ಯ ವಿವರಣಾಂತರಮಪಿ ಸ್ವೀಕರ್ತುಂ ಶಕ್ಯತೇ ।

ಬಲೇನ = ರಾಮಭಕ್ತಿಬಲೇನ, ಸೀತಾನಿತ್ಯಶುಶ್ರೂಷಾಬಲೇನ ಚ ಭದ್ರಪ್ರಿಯಾ = ರಾಮಭದ್ರಸ್ಯ ಪ್ರಿಯಾ ತ್ರಿಜಟಾ । ಸೈವ ಕೃಷ್ಣಾವತಾರೇ ಅನುಜಾ ಸುಭದ್ರಾರೂಪೇಣ ಯಸ್ಯ, ಸ ಚ ಕೃಷ್ಣಃ ''ಬಲಭದ್ರಪ್ರಿಯಾನುಜಃ'' ಇತಿ ಸಾಧೂಕ್ತಃ ।

ತ್ರಿಜಟಾ ರಾಮಭಕ್ತಿಬಲೇನ ಸೀತಾಸೇವಾಬಲೇನ ಚ ರಾಮಭದ್ರಪ್ರಿಯಾ ಸತೀ ತತ್ಪ್ರಸಾದೇನ ಕೃಷ್ಣಾವತಾರೇ ತಸ್ಯ ಅನುಜಾತ್ವೇನ ಸುಭದ್ರಾರೂಪೇಣ ಜಾತಾ ಇತಿ ಮಹಾಭಾರತತಾತ್ಪರ್ಯನಿರ್ಣಯೇ ಉಕ್ತಮ್ ।

**ಜಾತಾ ದೇವಕ್ಯಾಂ ಸಾ ಸುಭದ್ರೇತಿ ನಾಮ್ನಾ**
**ಭದ್ರಾ ರೂಪೇಣಾನಕದುಂದುಭೇಸ್ತಾಮ್ ।**
**ಕೃತ್ವಾ ಪುತ್ರೀಂ ರೋಹಿಣೀ ಸ್ವಾಮರಕ್ಷತ್**
**ಪೂರ್ವಂ ತು ಯಾಽಽಸೀತ್ ತ್ರಿಜಟೈವ ನಾಮ್ನಾ ॥**
**ಬಭೂವ ವಿಷ್ಣೋರ್ಭಗಿನೀ ಪ್ರಿಯಾ ಚ ।**
**ಉಮಾವೇಶಾದ್ರೂಪಗುಣೋಪಪನ್ನಾ**
**ಪದ್ಮೇಕ್ಷಣಾ ಚಂಪಕದಾಮಗೌರೀ ॥** ಇತಿ ವಿಂಶೇಽಧ್ಯಾಯೇ(೩೭-೩೮)

**''ರಾಮಾಯಾಂಜಲಿಮಾಬಧ್ಯ ತ್ರಿಜಟಾ ವಾಕ್ಯಮಬ್ರವೀತ್ ।**
**ಆದರ್ಶಿ ರಾಘವಃ ಕ್ಷೋಣೀಂ ಸಂಗ್ರಸನ್ ರುಧಿರಂ ಪಿಬನ್ ॥''**

ಇತಿ ಸಂಗ್ರಹರಾಮಯಣವಚನಬಲೇನ ತ್ರಿಜಟಾಯಾಃ ರಾಮೇ ಭಕ್ತಿಶ್ಚ ಸಿದ್ಧಾ।

ಅಥವಾ ಬಲಭದ್ರಪ್ರಿಯಾನುಜ ಇತ್ಯಸ್ಯ ವ್ಯಾಖ್ಯಾನಾಂತರಂ ಪ್ರದರ್ಶ್ಯತೇ । ಬಲಯೋಃ ಭದ್ರಃ ಬಲಭದ್ರಃ = ಭೀಮಸೇನಃ । ಬಲಶಬ್ದಿತಯೋಃ ಕೌರವಪಾಂಡವ-ಸೈನ್ಯಯೋಃ ವಿಷ್ಣುಭಕ್ತಿತತ್ತ್ವಜ್ಞಾನಧೈರ್ಯಸ್ಥೈರ್ಯಬಲಶೌರ್ಯಪರಾಕ್ರಮಾದಿಗುಣೈಃ ಅಧಿಕಃ ಭೀಮಸೇನ ಏವ । ಅತ ಏವ ಬಲಯೋಃ (ಉಭಯೋರಪಿ ಸೈನ್ಯಯೋಃ) ಸ ಏವ ಶುಭತ್ವೇನ ಭದ್ರಃ । ಅಥವಾ ಬಲಯೋಃ = ಉಭಯೋಃ ಸೇನಯೋಃ ಭದ್ರಃ = ಪಲಾಯನಶತ್ರುಮುಕ್ತನಾರಾಯಣಾಸ್ತ್ರಾದಿನಮನಾದಿರೂಪಯುದ್ಧಾಧರ್ಮವರ್ಜಿತತ್ವೇನ ಭದ್ರಃ = ಶುಭಃ । ಅತೋ ಭೀಮಃ ಬಲಭದ್ರಶಬ್ದಿತಃ । ತಥಾಚೋಕ್ತಂ ಮಹಾಭಾರತೇ -

**ತತ್ತ್ವಜ್ಞಾನೇ ವಿಷ್ಣುಭಕ್ತೌ ಧೈರ್ಯೇ ಸ್ಥೈರ್ಯೇ ಪರಾಕ್ರಮೇ ।**
**ವೇಗೇ ಚ ಲಾಘವೇ ಚೈವ ಪ್ರಲಾಪಸ್ಯ ಚ ವರ್ಜನೇ ।**
**ಭೀಮಸೇನಸಮೋ ನಾಸ್ತಿ ಸೇನಯೋರುಭಯೋರಪಿ ।**
**ಪಾಂಡಿತ್ಯೇ ಚ ಪಟುತ್ವೇ ಚ ಶೂರತ್ವೇಽಪಿ ಬಲೇಽಪಿ ಚ ॥** ಇತಿ ।

**'ನಾಪಯಾತಿ ಯುಧಃ ಕ್ವಾಪಿ'** ಇತಿ ಮಹಾಭಾರತತಾತ್ಪರ್ಯನಿರ್ಣಯೇ ।

**ನಮಸ್ಕಾರ್ಯಮಪಿ ಹ್ಯಸ್ತ್ರಂ ನ ನಮ್ಯಂ ಜೀವನೇಚ್ಛಯಾ ।**
**ಸಮರೇ ಶತ್ರುಣಾ ಮುಕ್ತಂ ತಸ್ಮಾತ್ ತಂ ನ ಚಕಾರ ಸಃ ॥** ಇತ್ಯಾದಿ ಚ ।

ತಸ್ಯ ಬಲಭದ್ರಶಬ್ದಿತಸ್ಯ ಭೀಮಸೇನಸ್ಯ ಪ್ರಿಯಾ = ದ್ರೌಪದೀ, ತಾಮನುಸೃತ್ಯ ತನ್ಮನೋಽನುಸಾರೇಣ ಇತಿ ಯಾವತ್ । ಜಯತಿ ಮಹಾಭಾರತೇ ಯುದ್ಧೇ ಭೀಮಾದಿಷು ಸ್ಥಿತ್ವಾ ದುರ್ಯೋಧನಾದೀನ್ ಸರ್ವಾನ್ ಶತ್ರೂನ್ ಇತಿ ಬಲಭದ್ರಪ್ರಿಯಾನುಜಃ । ತಥಾ ಚೋಕ್ತಮ್ -

**ಯೇ ವಾ ಮೃಧೇ ಸಮಿತಿಶಾಲಿನ ಆತ್ತಚಾಪಾಃ**
**ಕಾಂಬೋಜಮತ್ಸ್ಯಕುರುಸೃಂಜಯಕೈಕಯಾರ್ಣಾಃ ।**
**ಯಾಸ್ಯಂತ್ಯದರ್ಶನಮಿತಾ ಬಲಪಾರ್ಥಭೀಮ-**
**ವ್ಯಾಜಾಹ್ವಯೇನ ಹರಿಣಾ ನಿಲಯಂ ತದೀಯಮ್ ॥**

ಯುದ್ಧೇ ದುರ್ಯೋಧನಾದೀನಾಂ ಭೀಮಾದಿಕರ್ತೃಕಹನನಂ ಸಭಾಯಾಂ ಉಕ್ತೇನ **''ಭೀಮೋ ದುರ್ಯೋಧನಂ ಹಂತಾ ಕರ್ಣಂ ಹಂತಾ ಧನಂಜಯಃ । ಶಕುನಿಂ ತ್ವಕ್ಷಕಿತವಂ ಸಹದೇವೋ ವಧಿಷ್ಯತಿ''** ಇತಿ ದ್ರೌಪದೀಪ್ರತಿಜ್ಞಾವಾಕ್ಯೇನ ತಸ್ಯಾಃ ಮನೋಽಭೀಷ್ಟಂ ಇತಿ ಸಿದ್ಧಮ್ ।

ತನ್ಮನೋಽಭೀಷ್ಟಾನುಸಾರೇಣ ಭಗವತಾ ''ಭೀಮಹತಾನ್ ದುರ್ಯೋಧನಾ-ದೀನ್ ಆಲಿಂಗ್ಯ ರುದತೀಃ ವಿಮುಕ್ತಕೇಶಾ ಯೋಷಾಃ ದರ್ಶಯೇ'' ಇತಿ ಪ್ರತಿಜ್ಞಾತಮ್ । ಪ್ರತಿಜ್ಞಾತಂ ಕಾರ್ಯಂ ಕೃತಂ ಚ । ತಥಾ ಚೋಕ್ತಮ್ ಮಹಾಭಾರತತಾತ್ಪರ್ಯನಿರ್ಣಯೇ (೨೨.೨೮)-

**ಶ್ರುತ್ವಾ ಸಮಸ್ತಂ ಭಗವಾನ್ ಪ್ರತಿಜ್ಞಾಂ ಚಕಾರ ತೇಷಾಮಖಿಲಾಶ್ಚ ಯೋಷಾಃ ।**
**ಪತೀನ್ ಸಮಾಲಿಂಗ್ಯ ವಿಮುಕ್ತಕೇಶಾಃ ಭೀಮಾಹತಾನ್ ದರ್ಶಯೇ ನಾನ್ಯಥೇತಿ ।**

ಇತಿ ।

ತಥಾಚ ಬಲಭದ್ರಶಬ್ದಿತಸ್ಯ ಭೀಮಸೇನಸ್ಯ ಪ್ರಿಯಾಯಾಃ ದ್ರೌಪದ್ಯಾಃ ಮನೋಽ-ನುಸಾರೇಣ ದುರ್ಯೋಧನಾದೀನ್ ಸರ್ವಾನ್ ಶತ್ರೂನ್ ಭೀಮಾದಿಷು ಸ್ಥಿತ್ವಾ ಜಯತಿ ಇತಿ ಸಾಧೂಕ್ತಮ್ । ತಸ್ಮಾತ್ ಬಲಭದ್ರಪ್ರಿಯಾನುಜ ಇತಿ ಸಾರ್ಥಕಂ ಭಗವತಃ ಕೃಷ್ಣಸ್ಯ ಪುಣ್ಯನಾಮ ।

******

# ಬಲಭದ್ರಪ್ರಿಯಾನುಜಃ

ಬಲಭದ್ರಸ್ಯ = ಬಲರಾಮನಿಗೆ ಪ್ರಿಯಂ = ತನ್ನ ಸೇವಾನಿಮಿತ್ತ ಪರಿಶ್ರಮದ ಅಭಾವರೂಪ ಇಷ್ಟವನ್ನು ಅನು=ಅನುಸರಿಸಿ ಜಾಯತೇ = ಆತನಿಗೆ ಅನುಜನಾಗಿ ಅವತರಿಸುತ್ತಾನೆ. ಇದು ಬಲಭದ್ರಪ್ರಿಯಾನುಜಃ ಎಂಬ ಶಬ್ದದ ಅರ್ಥವಿವರಣೆ.

''ಸೇವಾಖಿನ್ನೋ ಲಕ್ಷ್ಮಣೋಽಗ್ರೇ ಹರೇರ್ಭೂತ್'' ಎಂಬ ಆಚಾರ್ಯವಚನದಲ್ಲಿ ಪ್ರತಿಪಾದಿಸಿರುವಂತೆ ಶ್ರೀರಾಮಾವತಾರದಲ್ಲಿ ಅನುಜನಾಗಿ ಶ್ರೀರಾಮನ ಮಹಾ-ಸೇವೆಯನ್ನು ಮಾಡಿದ ಲಕ್ಷ್ಮಣನು ಅದರಿಂದ ಪರಿಶ್ರಮದಿಂದ ಪೀಡಿತನಾದನು. ಈ ಜನ್ಮದಲ್ಲೂ ತನಗೆ ತಮ್ಮನಾಗಿ ಜನಿಸಿದರೆ ತನ್ನ ಸೇವಾನಿಮಿತ್ತ ಪರಿಶ್ರಮವು ಆತನಿಗೆ ಪುನಃ ಪ್ರಾಪ್ತವಾದೀತು. ಅದಾಗದಿರಲಿ ಎಂಬ ತನ್ನ ಇಚ್ಛೆಯಿಂದ ದಯಾಮಯನಾದ ಭಗವಾನ್ ಶ್ರೀಕೃಷ್ಣನು ಸೇವಾಖಿನ್ನನಾದ ಲಕ್ಷ್ಮಣನಿಗೆ ಸೇವಾನಿಮಿತ್ತ ಪರಿಶ್ರಮದ ಅಭಾವರೂಪ ಇಷ್ಟವನ್ನು ಅನುಸರಿಸಿ, ಅರ್ಥಾತ್ ಅದನ್ನು ಮಾಡಲು ತಮ್ಮನಾಗಿ ಜನಿಸಿದನು. ಆತನಿಗೆ ಅಣ್ಣನಾಗಿ ಜನಿಸಿದರೆ ಸೇವಾನಿಮಿತ್ತ ಪರಿಶ್ರಮವು ಲಕ್ಷ್ಮಣನಿಗೆ (ಬಲಭದ್ರನಿಗೆ) ಈ ಜನ್ಮದಲ್ಲೂ ಅಪರಿಹಾರ್ಯ ತಾನೆ?

ಅಥಾವಾ, ಬಲಭದ್ರಸ್ಯ = ಬಲರಾಮನಿಗೆ ಪ್ರಿಯಂ = ತನ್ನ ಉಪಕಾರದಿಂದಾಗುವ ಸುಖವನ್ನು ಅನು = ಅನುಸರಿಸಿ (ಅರ್ಥಾತ್ ಅದನ್ನು ಮಾಡಲು) ಅನುಜಾಯತೇ =

ಆತನ ಜನ್ಮವಾದ ಬಳಿಕ ಜನಿಸುತ್ತಾನೆ. ಇದು ''ಬಲಭದ್ರಪ್ರಿಯಾನುಜಃ'' ಎಂಬ ಶಬ್ದದ ಇನ್ನೊಂದು ಮುಖದ ವಿವರಣೆ.

''ಶಿರಃ ಪ್ರಿಯೇ ಸ್ಥಿತಂ ತಸ್ಯ ಪರೇಯಂ ಪ್ರಿಯನಾಮಕಮ್'' ಎಂಬ ವಚನಾ-ನುಸಾರವಾಗಿ ಪರರಿಂದ ಉಂಟಾಗುವ ಪ್ರಯುಕ್ತ ''ಪ್ರಿಯ''ವೆಂದು ಹೇಳಲ್ಪಡುವ ಉಪಕಾರದಿಂದ ಉಂಟಾಗುವ ಸುಖವನ್ನೇ ಇಲ್ಲಿ ಪ್ರಿಯಶಬ್ದದಿಂದ ಸ್ವೀಕರಿಸಬೇಕು.

ಹೀಗಾಗಿ ಬಲಭದ್ರನಿಗೆ ಪ್ರಿಯಂ = ತನ್ನ ಉಪಕಾರದಿಂದಾಗುವ ಸುಖವನ್ನು ಅನು = ಅನುಸರಿಸಿ (ಅರ್ಥಾತ್ ಅದನ್ನು ಉಂಟುಮಾಡುವ ಸಲುವಾಗಿ) ಅನುಜಾಯತೇ = ಆತನಿಗೆ ಅನುಜನಾಗಿ ಅವತರಿಸುತ್ತಾನೆ ಎಂಬ ಅರ್ಥವು ಸಮಂಜಸವಾಗಿದೆ. ಖಂಡಾರ್ಥದಲ್ಲೂ ಶ್ರೀರಾಘವೇಂದ್ರಸ್ವಾಮಿಗಳು **ಉಪಕಾರಜ''ಪ್ರಿಯ''ಶಬ್ದಿತಸುಖೇ** ಎಂಬ ವಿವರಣೆಯನ್ನು ನೀಡಿದ್ದಾರೆ. ಆದುದರಿಂದ ಪ್ರಿಯಶಬ್ದಕ್ಕೆ ವಿವರಿಸಿದ ಈ ಅರ್ಥವು ಪ್ರಾಮಾಣಿಕವಾಗಿದೆ.

ಶ್ರೀಕೃಷ್ಣನ ಉಪಕಾರದಿಂದ ಬಲರಾಮನಿಗೆ ಆದ ಸುಖ (ಪ್ರಿಯ) ಮಹಾಭಾರತ-ತಾತ್ಪರ್ಯನಿರ್ಣಯದಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಬ್ರಹ್ಮವರದಿಂದ ಅವಧ್ಯನಾದ ಜಗದ್ವಿನಾಶವನ್ನು ಮಾಡುವ ದುರ್ಬುದ್ಧಿಯುಳ್ಳ ವಿಷವೃಕ್ಷರೂಪದಲ್ಲಿರುವ ಉಗ್ರಾಸುರನ ವಿಷದ ಪ್ರಭಾವದಿಂದ ಬಲರಾಮನೂ ರೋಗಪೀಡಿತನಾದನು. ಆಗ ಭಗವಾನ್ ಶ್ರೀಕೃಷ್ಣನು ತನ್ನ ಅಮೃತಕರಸ್ಪರ್ಶಮಾತ್ರದಿಂದ ಬಲರಾಮನನ್ನು ರೋಗಸಂತಾಪದಿಂದ ವಿಮುಕ್ತಿಗೊಳಿಸಿದನು. ಈ ಉಪಕಾರದಿಂದ ಆತನಿಗೆ ಸುಖವನ್ನು ನೀಡಿದನು. ಈ ಉದ್ದೇಶದಿಂದಲೂ ಆತನಿಗೆ ಪ್ರಿಯತಮ್ಮನಾಗಿ ಜನಿಸಿದನು.

ಈ ವಿಷಯದ ಬಗ್ಗೆ ಬೆಳಕನ್ನು ಚೆಲ್ಲಬಲ್ಲ ಮಹಾಭಾರತತಾತ್ಪರ್ಯನಿರ್ಣಯದ ವಚನವು ಈ ಕೆಳಗೆ ಉಲ್ಲೇಖಿಸಿದಂತೆ ಇದೆ –

**ಧಾತುರ್ವರಾಜ್ಜಗದಭಾವಕೃತೈಕಬುದ್ಧಿ-**
**ರ್ವಧ್ಯೋ ನ ಕೇನಚಿದಸೌ ತರುರೂಪದೈತ್ಯಃ ॥**
**ಸಂಕರ್ಷಣೇಽಪಿ ತದುದಾರವಿಷಾನುವಿಷ್ಟೇ**
**ಕೃಷ್ಣೋ ನಿಜಸ್ಪರ್ಶತಸ್ತಮಪೇತರೋಗಮ್ ।**
**ಕೃತ್ವಾ ಬಭಂಜ ವಿಷವೃಕ್ಷಮಮುಂ ಬಲೇನ**
**ತಸ್ಯಾನುಗೈಃ ಸಹ ತದಾಕೃತಿಭಿಃ ಸಮಸ್ತೈಃ ॥**

ಇತಿ ತ್ರಯೋದಶೇಽಧ್ಯಾಯೇ (೪೫-೪೬) ।

ಕೃಷ್ಣನ ಉಪಕಾರದಿಂದ ಇನ್ನೊಂದು ಸುಖವನ್ನು ಬಲರಾಮನು ಪಡೆದಿದ್ದಾನೆ. ಒಂದು ಕ್ರೀಡೆಯಲ್ಲಿ ಬಲಭದ್ರನಿಂದ ಪ್ರಲಂಬಾಸುರನು ಪರಾಜಿತನಾದನು. ಸೋತ ಆತ ಉಗ್ರರೂಪವನ್ನು ತಾಳಿ ಆತನನ್ನು ಹೊತ್ತು ಆಕಾಶದತ್ತ ಸಾಗಿದನು. ಆಗ ಭಯಪೀಡಿತನಾದ

ಬಲರಾಮನು ಭಗವಂತನನ್ನು ಸ್ತುತಿಸಿದನು. ಭಗವಾನ್ ಶ್ರೀಕೃಷ್ಣನು ''ನಾನು ನಿನ್ನಲ್ಲಿದ್ದೇನೆ. ನೀನು ಹೆದರಬೇಡ'' ಎಂದು ಅಭಯವಚನವನ್ನಿತ್ತು ಆತನಿಗೆ ಅಧಿಕಬಲವನ್ನು ಜಾಗೃತಗೊಳಿಸಿದನು. ಇದರಿಂದ ಬಲರಾಮನು ನಿರ್ಭೀತನಾಗಿ ಮುಷ್ಟಿಪ್ರಹಾರದಿಂದ ಪ್ರಲಂಬಾಸುರನನ್ನು ಕೊಂದು ನೆಮ್ಮದಿಯ ನಿಟ್ಟುಸಿರನ್ನು ಬಿಟ್ಟನು.

ಹೀಗೆ ಶ್ರೀಕೃಷ್ಣನ ಅಭಯವಚನಪ್ರದಾನರೂಪ ಉಪಕಾರದಿಂದ ಜಾಗೃತಮಹಾ-ಬಲದಿಂದ ಅಸುರಸಂಹಾರದಿಂದ ಬಲಭದ್ರನು ಸುಖಿಯಾದನು. ಆದುದರಿಂದ ಬಲಭದ್ರಸ್ಯ = ಬಲರಾಮನ ಪ್ರಿಯಂ = ಉಪಕಾರದಿಂದಾಗುವ ಸುಖವನ್ನು, ಅನು = ಅನುಸರಿಸಿ (ಅದನ್ನು ಉಂಟುಮಾಡಲು) ಜಾಯತೇ = ಆತನಿಗೆ ತಮ್ಮನಾಗಿ ಹುಟ್ಟುತ್ತಾನೆ ಎಂಬುದಾಗಿ ''ಬಲಭದ್ರಪ್ರಿಯಾನುಜ'' ಎಂಬ ವಿವರಣೆಯು ಸಮಂಜಸವಾಗಿದೆ. ಈ ಪ್ರಮೇಯದ ಬಗ್ಗೆ ಮಾಹಿತಿಯನ್ನು ನೀಡುವ ಮಹಾಭಾರತತಾತ್ಪರ್ಯನಿರ್ಣಯವಚನಗಳು ಈ ತೆರನಾಗಿವೆ –

**ಕೃಷ್ಣಸ್ಯ ಪಕ್ಷಿಷು ಜಯತ್ಸು ಸ ರಾಮಮೇತ್ಯ**
**ಪಾಪಃ ಪರಾಜಿತ ಉವಾಹ ತಮುಗ್ರರೂಪಃ ॥**
**ಭೀತೇನ ರೋಹಿಣಿಸುತೇನ ಹರಿಃ ಸ್ತುತೋಽಸೌ**
**ಸ್ವಾವಿಷ್ಟತಾಮುಪದಿದೇಶ ಬಲಾಭಿಪೂರ್ತ್ಯೈ ।**
**ತೇನೈವ ಪೂರಿತಬಲೋಽಂಬರಚಾರಿಣಂ ತಂ**
**ಪಾಪಂ ಪ್ರಲಂಬಮುರುಮುಷ್ಟಿಹತಂ ಚಕಾರ ॥**
**ತಸ್ಮಿನ್ ಹತೇ ಸುರಗಣಾ ಬಲದೇವನಾಮ**
**ರಾಮಸ್ಯ ಚಕ್ರುರತಿತೃಪ್ತಿಯುತಾ ಹರಿಶ್ಚ ।** ಇತಿ ತ್ರಯೋದಶೇಽಧ್ಯಾಯೇ (೫೬–೫೭)

ಅಥವಾ, ''ಬಲಭದ್ರಪ್ರಿಯಾನುಜ''ಶಬ್ದಕ್ಕೆ ಇನ್ನೊಂದು ವಿವರಣೆಯನ್ನೂ ನೀಡಬಹುದು. ಬಲೇನ = ರಾಮಭಕ್ತಿಬಲದಿಂದ ಹಾಗೂ ಸೀತೆಯ ನಿತ್ಯಸೇವಾಬಲದಿಂದ ಭದ್ರಪ್ರಿಯಾ = ರಾಮಭದ್ರನಿಗೆ ಪ್ರಿಯಳಾದವಳು ತ್ರಿಜಟೆ. ಆಕೆಯೇ ಅನುಜಾ = ತಂಗಿ (ಸುಭದ್ರೆ) ಯಸ್ಯ = ಯಾವನಿಗೆ ಆದಳೋ, ಸಃ = ಆ ಕೃಷ್ಣನೇ ''ಬಲಭದ್ರಪ್ರಿಯಾನುಜ'' ಎನಿಸಿದ್ದಾನೆ. ಒಟ್ಟಿನಲ್ಲಿ ತನ್ನಲ್ಲಿ ಭಕ್ತಿಯುಳ್ಳ ತನ್ನ ಮಡದಿಯಾದ ಸೀತೆಯನ್ನು ನಿತ್ಯ ಸೇವಿಸಿ ತನಗೆ ಪ್ರಿಯಳಾದ ತ್ರಿಜಟೆಯನ್ನು ಸುಭದ್ರಾರೂಪದಲ್ಲಿ ತಂಗಿಯಾಗಿ ಶ್ರೀಕೃಷ್ಣಾವತಾರದಲ್ಲಿ ಸ್ವೀಕರಿಸಿದನು ಎಂಬುದು ''ಬಲಭದ್ರಪ್ರಿಯಾನುಜ'' ಎಂಬ ಶಬ್ದದ ತಾತ್ಪರ್ಯಾರ್ಥ.

ತ್ರಿಜಟೆಗೆ ರಾಮನಲ್ಲಿ ಭಕ್ತಿ ಇತ್ತು ಎಂಬ ವಿಷಯವನ್ನು

**ರಾಮಾಯಾಂಜಲಿಮಾಬಧ್ಯ ತ್ರಿಜಟಾ ವಾಕ್ಯಮಬ್ರವೀತ್ ।**
**ಆದರ್ಶಿ ರಾಘವಃ ಕ್ಷೋಣೀಂ ಸಂಗ್ರಸನ್ ರುಧಿರಂ ಪಿಬನ್ ॥**

ಎಂಬ ಸಂಗ್ರಹರಾಮಯಣವಚನವು ಸ್ಪಷ್ಟಪಡಿಸಿದೆ.

ಸೀತೆಯನ್ನು ಸೇವಿಸಿದ ತ್ರಿಜಟೆಯೇ ರಾಮನಿಗೆ ಪ್ರಿಯಳಾಗಿ ಶ್ರೀಕೃಷ್ಣನಿಗೆ ತಂಗಿಯಾಗಿ ಸುಭದ್ರೆರೂಪದಲ್ಲಿ ಜನಿಸಿದಳೆಂದು ಮಹಾಭಾರತತಾತ್ಪರ್ಯನಿರ್ಣಯದ ಈ ಕೆಳಗೆ ತೋರಿಸಿದ ಮಾತುಗಳಿಂದ ಸ್ಪಷ್ಟವಾಗುತ್ತದೆ –

**ಜಾತಾ ದೇವಕ್ಯಾಂ ಸಾ ಸುಭದ್ರೇತಿ ನಾಮ್ನಾ**
**ಭದ್ರಾ ರೂಪೇಣಾನಕದುಂದುಭೇಸ್ತಾಮ್ ।**
**ಕೃತ್ವಾ ಪುತ್ರೀಂ ರೋಹಿಣೀ ಸ್ವಾಮರಕ್ಷತ್**
**ಪೂರ್ವಂ ತು ಯಾಽಽಸೀತ್ ತ್ರಿಜಟೈವ ನಾಮ್ನಾ ॥**
**ಬಭೂವ ವಿಷ್ಣೋರ್ಭಗಿನೀ ಪ್ರಿಯಾ ಚ ।**
**ಉಮಾವೇಶಾದ್ರೂಪಗುಣೋಪಪನ್ನಾ**
**ಪದ್ಮೇಕ್ಷಣಾ ಚಂಪಕದಾಮಗೌರೀ ॥** ಇತಿ ವಿಂಶೇಽಧ್ಯಾಯೇ (೩೭–೩೮) ।

ಅಥವಾ ''ಬಲಭದ್ರಪ್ರಿಯಾನುಜ'' ಎಂಬ ಶಬ್ದಕ್ಕೆ ವ್ಯಾಖ್ಯಾನಾಂತರವನ್ನೂ ಮಾಡಬಹುದು. ಬಲಯೋಃ ಭದ್ರಃ ಬಲಭದ್ರಃ = ಭೀಮಸೇನಃ. ಬಲಶಬ್ದವಾಚ್ಯಗಳಾದ ಕೌರವ–ಪಾಂಡವರ ಸೈನ್ಯಗಳಲ್ಲಿ ವಿಷ್ಣುಭಕ್ತಿ, ತತ್ತ್ವಜ್ಞಾನ, ಧೈರ್ಯ, ಸ್ಥೈರ್ಯ, ಬಲ, ಶೌರ್ಯ, ಪರಾಕ್ರಮ, ಪಾಂಡಿತ್ಯಾದಿ ಶುಭಗಳಿಂದ ಅಧಿಕನಾಗಿ ಭದ್ರ = ಶುಭ ಎನಿಸಿದವನು ಭೀಮಸೇನ. ಎರಡೂ ಸೈನ್ಯಗಳಲ್ಲಿ ವಿಷ್ಣುಭಕ್ತ್ಯಾದಿಗುಣಗಳಿಂದ ಸಾಟಿಯಿಲ್ಲದವನಾಗಿ ಭದ್ರ = ''ಶುಭ'' ಎನಿಸಿದವನು ವೃಕೋದರ ಎಂಬ ವಿಷಯವು ಮಹಾಭಾರತದ ಈ ಕೆಳಗೆ ತೋರಿಸಿದ ಮಾತುಗಳಿಂದ ಸಿದ್ಧಾವಗಿದೆ.

**ತತ್ತ್ವಜ್ಞಾನೇ ವಿಷ್ಣುಭಕ್ತೌ ಧೈರ್ಯೇ ಸ್ಥೈರ್ಯೇ ಪರಾಕ್ರಮೇ ।**
**ವೇಗೇ ಚ ಲಾಘವೇ ಚೈವ ಪ್ರಲಾಪಸ್ಯ ಚ ವರ್ಜನೇ ।**
**ಭೀಮಸೇನಸಮೋ ನಾಸ್ತಿ ಸೇನಯೋರುಭಯೋರಪಿ ।**
**ಪಾಂಡಿತ್ಯೇ ಚ ಪಟುತ್ವೇ ಚ ಶೂರತ್ವೇಽಪಿ ಬಲೇಽಪಿ ಚ ॥** ಇತಿ ।

**'ನಾಪಯಾತಿ ಯುಧಃ ಕ್ವಾಪಿ'** ಇತಿ (ಮಹಾಭಾರತತಾತ್ಪರ್ಯನಿರ್ಣಯೇ) ।

**ನಮಸ್ಕಾರ್ಯಮಪಿ ಹ್ಯಸ್ತ್ರಂ ನ ನಮ್ಯಂ ಜೀವನೇಚ್ಛಯಾ ।**
**ಸಮರೇ ಶತ್ರುಣಾ ಮುಕ್ತಂ ತಸ್ಮಾತ್ ತಂ ನ ಚಕಾರ ಸಃ ॥** ಇತ್ಯಾದಿ ಚ ।

ಅಥವಾ ಬಲಯೋಃ = ಉಭಯಸೈನ್ಯಗಳಲ್ಲಿ ಭದ್ರಃ = ಪಲಾಯನ–ಅಸ್ತ್ರನಮನಾದಿರೂಪ ಯುದ್ಧದ ಅಧರ್ಮದಿಂದ ವರ್ಜಿತನಾದುದರಿಂದ ಶುಭನು ಭೀಮ. ಆದಕ್ಕೆಂದೇ ಆತ ಬಲಭದ್ರ. ಬಲಭದ್ರಸ್ಯ ಪ್ರಿಯಾ = ಬಲಭದ್ರ ಎನಿಸಿದ ಭೀಮನಿಗೆ ಪ್ರಿಯಳಾದವಳು ದ್ರೌಪದೀ. ಬಲಭದ್ರಪ್ರಿಯಾಂ ಅನುಸೃತ್ಯ ಜಯತಿ ಇತಿ ಬಲಭದ್ರಪ್ರಿಯಾನುಜಃ. ಬಲಭದ್ರನೆನಿಸಿದ ಭೀಮನಿಗೆ ಪ್ರಿಯಳಾದ ದ್ರೌಪದಿಯನ್ನು

ಅನುಸರಿಸಿ (ಅರ್ಥಾತ್ ಆಕೆಯ ಮನೋಽಭೀಷ್ಟಾನುಸಾರ) ಮಹಾಭಾರತ ಯುದ್ಧದಲ್ಲಿ ಭೀಮಾದಿಗಳಲ್ಲಿ ತಾನು ಒಂದು ರೂಪದಿಂದ ಇದ್ದು ದುರ್ಯೋಧನಾದಿ ಶತ್ರುಗಳನ್ನು ಜಯಿಸುತ್ತಾನೆ. ಈ ಕಾರಣದಿಂದ ಬಲಭದ್ರಪ್ರಿಯಾನುಜ ಎಂಬ ನಾಮವು ಶ್ರೀಕೃಷ್ಣನಿಗೆ ಸಾರ್ಥಕವೆನಿಸಿದೆ. ಭೀಮಾದಿಗಳಲ್ಲಿ ಶ್ರೀಕೃಷ್ಣನೇ ನಿಂತು ದುರ್ಯೋಧನಾದಿಶತ್ರುಗಳನ್ನು ಜಯಿಸಿ ಸಂಹರಿಸಿದನು ಎಂಬ ಮಾತು ಶ್ರೀಮದ್ಭಾಗವತದಲ್ಲಿ ಉಲ್ಲೇಖಿಸಲ್ಪಟ್ಟಿದೆ –

**ಯೇ ವಾ ಮೃಧೇ ಸಮಿತಿಶಾಲಿನ ಆತ್ತಚಾಪಾಃ**
**ಕಾಂಬೋಜಮತ್ಸ್ಯಕುರುಸೃಂಜಯಕೈಕಯಾರ್ಣಾಃ ।**
**ಯಾಸ್ಯಂತ್ಯದರ್ಶನಮಿತಾ ಬಲಪಾರ್ಥಭೀಮ–**
**ವ್ಯಾಜಾಹ್ವಯೇನ ಹರಿಣಾ ನಿಲಯಂ ತದೀಯಮ್ ॥**

ಇತಿ ಭಾಗವತೇ ದ್ವಿತೀಯಸ್ಕಂಧೇ ಸಪ್ತಮೇಽಧ್ಯಾಯೇ ಪಂಚತ್ರಿಂಶತ್ತಮೇ ಶ್ಲೋಕೇ ।

ಯುದ್ಧದಲ್ಲಿ ಭೀಮಾದಿಗಳು ಮಾಡುವ ದುರ್ಯೋಧನಾದಿಗಳ ಹನನವು ದ್ರೌಪದಿಗೆ ಇಷ್ಟವೆಂಬುದು ಕುರುಸಭೆಯಲ್ಲಿ ಆಕೆ ನುಡಿದ –

**ಭೀಮೋ ದುರ್ಯೋಧನಂ ಹಂತಾ ಕರ್ಣಂ ಹಂತಾ ಧನಂಜಯಃ ।**
**ಶಕುನಿಂ ತ್ವಕ್ಷಕಿತವಂ ಸಹದೇವೋ ವಧಿಷ್ಯತಿ ॥**

– ಎಂಬ ಪ್ರತಿಜ್ಞಾಮಾತಿನಿಂದ ಸಾಬೀತಾಗಿದೆ. ಆಕೆಯ ಈ ಮನೋಽಭೀಷ್ಟವನ್ನರಿತು ಅದಕ್ಕನುಸಾರವಾಗಿ ಭಗವಾನ್ ಶ್ರೀಕೃಷ್ಣನು ವನದಲ್ಲಿ ''ಭೀಮನಿಂದ ಹತರಾದ ದುರ್ಯೋಧನಾದಿಗಳನ್ನು ಆಲಿಂಗಿಸಿಕೊಂಡು ತಲೆಕೂದಲುಗಳನ್ನು ಬಿಚ್ಚಿ ಅಳುತ್ತಿರುವ ಸ್ತ್ರೀಯರನ್ನು ತೋರಿಸುತ್ತೇನೆ'' ಎಂದು ಪ್ರತಿಜ್ಞೆಗೈದು ಆಕೆಯನ್ನು ಸಮಾಧಾನಪಡಿಸುತ್ತಾನೆ.

ಮಹಾಭಾರತತಾತ್ಪರ್ಯನಿರ್ಣಯದ ಈ ಕೆಳಗೆ ತೋರಿಸಿದ ಮಾತುಗಳಲ್ಲಿ ಶ್ರೀಕೃಷ್ಣನ ಈ ಪ್ರತಿಜ್ಞೆ ಸ್ಪಷ್ಟವಾಗಿದೆ –

**ಶ್ರುತ್ವಾ ಸಮಸ್ತಂ ಭಗವಾನ್ ಪ್ರತಿಜ್ಞಾಂ ಚಕಾರ ತೇಷಾಮಖಿಲಾಶ್ಚ ಯೋಷಾಃ ।**
**ಪತೀನ್ ಸಮಾಲಿಂಗ್ಯ ವಿಮುಕ್ತಕೇಶಾಃ ಭೀಮಾಹತಾನ್ ದರ್ಶಯೇ ನಾನ್ಯಥೇತಿ ।**

ಇತಿ ।

ಒಟ್ಟಿನಲ್ಲಿ ಉಭಯಸೈನ್ಯಗಳಲ್ಲಿ ಅಧಿಕಶುಭಗುಣಗಳಿಂದ ವಿರಾಜಮಾನನಾಗಿ ಬಲಭದ್ರ ಎನಿಸಿದ ಭೀಮನಿಗೆ ಪ್ರಿಯಳಾದ ದ್ರೌಪದಿಯನ್ನು ಅನುಸರಿಸಿ (ಅರ್ಥಾತ್, ಆಕೆಯ ಮನೋಽಭೀಷ್ಟವನ್ನು ಅನುಸರಿಸಿ) ಮಹಾಭಾರತಯುದ್ಧದಲ್ಲಿ ಭೀಮಾದಿಗಳಲ್ಲಿ ತಾನು ನಿಂತು ದುರ್ಯೋಧನಾದಿ ಸರ್ವಶತ್ರುಗಳನ್ನು ಜಯಿಸಿದನು. ಈ ನಿಮಿತ್ತ ''ಬಲಭದ್ರಪ್ರಿಯಾನುಜ'' ಎಂಬ ಪುಣ್ಯನಾಮವು ಭಗವಾನ್ ಶ್ರೀಕೃಷ್ಣನಿಗೆ ಸಾರ್ಥಕವೆನಿಸಿದೆ.

*****

# ಚಾತುರ್ಮಾಸ್ಯವ್ರತ

## (ಅನುಗ್ರಹಲೇಖನ)

**ಪರಮಪೂಜ್ಯ ಶ್ರೀಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು**
**ಕಿರಿಯಪಟ್ಟ, ಪೇಜಾವರ ಅಧೋಕ್ಷಜ ಮಠ.**

ನೋಡ ನೋಡುತ್ತಿರುವಂತೆ ಚಾತುರ್ಮಾಸ್ಯವ್ರತ ಮತ್ತೆ ಹತ್ತಿರ ಬಂದಿದೆ. ಚಾತುರ್ಮಾಸ್ಯವ್ರತವೆಂದರೆ ಇತರೆಲ್ಲಾ ವ್ರತಗಳಂತೆ ಒಂಟಿ ವ್ರತವಲ್ಲ. ಅದೊಂದು ವ್ರತಗಳ ಗುಂಪು. ಆದುದರಿಂದಲೇ ಅದು ವ್ರತಗಳ ರಾಜ. ಸಾಧಕರ ಸಾಧನೆಗೆ ಸುವರ್ಣಾವಕಾಶ.

ಇತರೆಲ್ಲಾ ವ್ರತಗಳಲ್ಲಿ ಸಾಧಕರು ದೀಕ್ಷಾಬದ್ಧರಾದುದಾದರೆ ಈ ವ್ರತದಲ್ಲಿ ಸಾಧಕರು ಮಾತ್ರವಲ್ಲ, ಸಿದ್ಧಿಪ್ರದನಾದ ಭಗವಂತನೂ ದೀಕ್ಷಾಬದ್ಧನಾಗಿರುತ್ತಾನೆ, ಪತ್ನೀಸಮೇತನಾಗಿ.

**ಮಾಧವಶ್ಚತುರೋ ಮಾಸಾನ್ ಲಕ್ಷ್ಮ್ಯಾ ಸಹ ಜಗತ್ಪತಿಃ ।**
**ಸ್ವಾಪಂ ಯಾಸ್ಯತಿ ಶೇಷಾಂಕೇ ಸರ್ವಭೂತಹಿತಾಯ ವೈ ॥**

ಆಷಾಢಶುದ್ಧೈಕಾದಶಿಯಂದು ಮೊದಲ್ಗೊಂಡು ಕಾರ್ತಿಕ ಶುದ್ಧೈಕಾದಶಿಯಲ್ಲಿ ಕೊನೆ-ಗೊಳ್ಳುವ ಯೋಗನಿದ್ರಾವ್ರತವದು. ಆದರಿಷ್ಟೇ ವ್ಯತ್ಯಾಸ, ಸಾಧಕರ ವ್ರತದೀಕ್ಷೆ ಸ್ವಹಿತ-ಸಾಧನೆಗಾಗಿ ಇರುವುದಾದರೆ, ಲಕ್ಷ್ಮೀಸಮೇತನಾದ ಭಗವನ್ನಾರಾಯಣನ ಈ ವ್ರತದೀಕ್ಷೆ ''ಸರ್ವಭೂತಹಿತಾಯ ವೈ'' ಸಮಸ್ತಜೀವರಾಶಿಗಳ ಹಿತದೃಷ್ಟಿಯಿಂದ. ಈ ಕಾರಣ-ಕ್ಕಾಗಿಯೂ ಇದು ವ್ರತಗಳ ರಾಜ.

ನಮ್ಮ ಹಿತದೃಷ್ಟಿಯಿಂದ ಭಗವಂತನೇ ದೀಕ್ಷಾಬದ್ಧನಾಗಿರುವನೆಂದರೆ ನಮಗಿನ್ನೇನು ಕೆಲಸ ಎಂದು ನಾವು ಸುಮ್ಮನಿರುವುದೆ! ಇಲ್ಲ; ನಾವೂ ಅವಶ್ಯವಾಗಿ ದೀಕ್ಷಾಬದ್ಧರಾಗಬೇಕು. ''ಭಗವಂತ ! ಭೂಭಾರವನ್ನೇ ಇಳುಹುವುದಕ್ಕಾಗಿ ಭೂಮಿಯಲ್ಲಿ ಕೃಷ್ಣನಾಗಿ ಅವತರಿಸಿ ಬಾ'' ಎಂದು ದೇವತೆಗಳು ಪ್ರಾರ್ಥಿಸಿದಾಗ ಭಗವಂತ ''ತಥಾಸ್ತು'' ಎಂದ. ಆದರೆ ಅದರ ಜೊತೆಯಲ್ಲೇ ಸರ್ವಸಮರ್ಥನಾದರೂ ಭಗವಂತ ''ನೀವೂ ಜೊತೆಯಲ್ಲೇ ಅವತರಿಸಿ ಬನ್ನಿ'' ಎಂದು ಆದೇಶವಿತ್ತ.

''ನಿಮಿತ್ತಮಾತ್ರಂ ಭವ ಸವ್ಯಸಾಚಿನ್'' ಎಂದು ಅರ್ಜುನನಿಗೆ ಆದೇಶಿಸಿದಂತೆ ನಮ್ಮ ಸಾಧನೆಯನ್ನು ಭಗವಂತ ನಿಮಿತ್ತವನ್ನಾಗಿ ಬಳಸಿಕೊಳ್ಳುತ್ತಾನೆ. ಅದರಲ್ಲೂ ''ಮಲಗಿ ಪಾಡಲು ಕುಳಿತು ಕೇಳುವ, ಕುಳಿತು ಪಾಡಲು ನಿಲುವ '' ಎಂದಂತೆ ಸಾಧನೆಯ ತಾರತಮ್ಯಕ್ಕನುಗುಣವಾದ ಫಲ.

ನಿತ್ಯ ಹಾಲು-ಮೊಸರು, ಬೆಣ್ಣೆ-ತುಪ್ಪಗಳನ್ನುಂಡು (ದಧಿವ್ರತ, ಕ್ಷೀರವ್ರತಗಳನ್ನು ಹೊರತುಪಡಿಸಿ) ಸಮೃದ್ಧಿಯ ಜೀವನವನ್ನು ಬದುಕಬಯಸುವವರು ನಾವು. ಅದು ಸಿಗಬೇಕೆಂದರೆ ಗೋವುಗಳೊಳಗೆ ಗೋಪಾಲಕೃಷ್ಣನ ಆರಾಧನೆ ಬೇಕು. ಅದಕ್ಕಾಗೇ ಚಾತುರ್ಮಾಸ್ಯವ್ರತದೊಳಗೊಂದು ಗೋಪದ್ಮವ್ರತ. ಆದರದು ಬರಿದೇ ರಂಗವಲ್ಲಿಯಲ್ಲಿ ಬರೆದ ಗೋವಿನೊಳಗೆ ಮಾತ್ರ ನಡೆಯದೆ, ಮೂವತ್ತಮೂರು ಕೋಟಿ ದೇವತೆಗಳೂ ಸನ್ನಿಹಿತರಾಗಿರುವ ಗೋವಿನೊಳಗೂ ನಡೆಯಲಿ.

*****

## ಸಂಪಾದಕೀಯ -

# ಯುವ ವರ್ಗದಲ್ಲಿ ಕುಸಿಯುತ್ತಿರುವ ಧರ್ಮಶ್ರದ್ಧೆ

ಇತ್ತೀಚಿನ ದಿನಗಳಲ್ಲಿ ಗಮನಿಸಬೇಕಾದ ಮುಖ್ಯಸಂಗತಿಯೊಂದಿದೆ. ಮೇಲ್ನೋಟಕ್ಕೆ ನಮ್ಮ ಸಮಾಜದಲ್ಲಿ ಕಾಲಕಾಲಕ್ಕೆ ಬಗೆಬಗೆಯ ಉತ್ಸವಗಳು, ಸಮಾರಾಧನೆಗಳು ನಿರಂತರ ಎಂಬಂತೆ ನಡೆಯುತ್ತಿವೆ. ಆದರೆ ಅದರಲ್ಲಿ ಪಾಲ್ಗೊಳ್ಳುವ ಜನತೆ ಹೆಚ್ಚಾಗಿ ಜೀವನದ ಉತ್ತರಾರ್ಧದಲ್ಲಿ ಕಾಲಿಟ್ಟವರು. ಯುವಜನತೆಯ ಸಂಖ್ಯೆ ಅಲ್ಲಿ ನಗಣ್ಯ ಎಂಬಷ್ಟು ಕಡಿಮೆ ಸಂಖ್ಯೆಯಲ್ಲಿರುತ್ತದೆ. ಇದನ್ನು ಗಮನಿಸಿದವರಿಗೆ ಮೇಲ್ನೋಟದಲ್ಲಿ ಕಂಡುಬರುವ ಧರ್ಮ-ಜಾಗ್ರತಿ ನಿಜವಾದ ಅರ್ಥದಲ್ಲಿ ಸತ್ವರಹಿತ ಎಂಬ ಸತ್ಯ ಗೋಚರಿಸದೆ ಇರದು! ಹಾಗೆಂದು ಯುವಕರಿಗೆ ಧರ್ಮದ ಅಗತ್ಯವೇ ಕಂಡುಬಂದಿಲ್ಲ ಎನ್ನುವಂತಿಲ್ಲ; ಇತ್ತೀಚಿನ ಯಾವುದೇ ಧಾರ್ಮಿಕ ಪರಂಪರೆಯ ಹಿನ್ನೆಲೆ ಇರದ ಹೆಚ್ಚಿನ ಪ್ರಸಂಗಗಳಲ್ಲಿ ಕಾನೂನಿನ ಹಿಡಿತದಲ್ಲಿ ಸಿಕ್ಕು ನರಳುತ್ತಿರುವ ಸೋಗಿನ ಧಾರ್ಮಿಕ ಮುಖಂಡರ ಪ್ರವಚನಗಳಿಗೆ ಇಂತಹ ಜನ ಮುಗಿಬಿದ್ದು ಹಾಜರಾಗುವುದು ಇದಕ್ಕೆ ಸಾಕ್ಷಿ. ಅಂತಹ ಗುಂಪಿನಲ್ಲಿ ಹುಡುಕಿದರೂ ವಯಸ್ಸಾದವರು ಕಾಣಸಿಗರು. ಅಲ್ಲಿ ಏನಿದ್ದರೂ ನವತಾರುಣ್ಯದ ಉತ್ಸಾಹಿ ವರ್ಗವೇ ತುಂಬಿರುತ್ತದೆ. ಹೀಗಾಗಲು ಕಾರಣವೇನು? ಇದರ ಬಗ್ಗೆ ಆಳವಾಗಿ ಚಿಂತಿಸದೇ ಇದ್ದಲ್ಲಿ ಮೊದಲೇ ಕುಸಿದಿರುವ ನಮ್ಮ ಸಮಾಜ ಇನ್ನಷ್ಟು ಕುಸಿಯುವುದರಲ್ಲಿ ಸಂಶಯವಿಲ್ಲ.

ಆಳವಾಗಿ ಚಿಂತಿಸಿದಲ್ಲಿ ಇದಕ್ಕೆ ಕಂಡುಬರುವ ಮೊದಲ ಕಾರಣ ಇಂದಿನ ಹೆಚ್ಚಿನ ಮಾಧ್ವಕುಟುಂಬಗಳ ಮನೆಗಳಲ್ಲಿ ಹಿರಿಯರ ಮಾರ್ಗದರ್ಶನ ಇಲ್ಲದಂತಾಗಿರುವುದು. ಅದಕ್ಕೆ ಮುಖ್ಯಕಾರಣ ಗುರುಹಿರಿಯರಿಂದ ದೂರಾಗಿ, ಪ್ರತ್ಯೇಕವಾಗಿ ಬದುಕಬೇಕೆಂಬ ಒಂದು ಬಗೆಯ ವಿಚಿತ್ರ ಹವ್ಯಾಸ. ಅದಕ್ಕೆ ಪೋಷಕವೆಂಬಂತೆ ಅವರದು ಹಿರಿಯರ ಒಪ್ಪಿಗೆಯ ಹಿನ್ನೆಲೆಯಲ್ಲಿ ನಡೆದ ವಿವಾಹವಾಗದೇ ಇರುವುದು ಇನ್ನೊಂದು ಕಾರಣ. ಇಂತಹವರು ಪಟ್ಟಣಗಳಲ್ಲಿ ವಿಭಿನ್ನ ಸಂಸ್ಕೃತಿಯ ಜನಗಳ ಮಧ್ಯೆ ಜೀವನ ಸಾಗಿಸುವಾಗ ಸಹಜವಾಗಿಯೇ ಅವರ ಸಂಸ್ಕೃತಿಯ ಸೆಳೆತಕ್ಕೆ ಒಳಗಾಗುತ್ತಾರೆ. ಶಾಲಾಕಾಲೇಜು-ಗಳಲ್ಲಾಗಲೀ, ಉದ್ಯೋಗಮಾಡುವ ಕಛೇರಿಗಳಲ್ಲಾಗಲೀ, ಸಂಪರ್ಕಕ್ಕೆ ಬರುವ ಹೆಚ್ಚಿನ ಜನರು ಆಧುನಿಕ ಜೀವನಶೈಲಿಗೆ ಆಕರ್ಷಿತರಾದವರು; ಎಂದರೆ ಭೌತಿಕ ಭೋಗಭಾಗ್ಯಗಳ ಗೊಂದಲದಲ್ಲಿಯೇ ಮುಳುಗಿರುವ ನಿತ್ಯ ಜೀವನ ಇವರದು. ಚಿಂತನೆಗೆ ಅವಕಾಶ ನೀಡದ ಟಿ.ವಿ. ಸಂಸ್ಕೃತಿ, ಸಂಸ್ಕೃತಿಯನ್ನು ತೊರೆಯುವುದೇ ಜೀವನ ಎಂಬಂತಹ ಐಟಿ-ಬಿಟಿ ಪ್ರಧಾನವಾದ ಉದ್ಯೋಗ ಸಂಸ್ಕೃತಿ - ಇವರಲ್ಲಿ ಯಾವುದೇ ಬಗೆಯ ಆಧ್ಯಾತ್ಮಿಕ ಚಿಂತನೆಯನ್ನಿರಲಿ, ಸಾಂಸ್ಕೃತಿಕ ಚಿಂತನೆಯನ್ನು ಸಹ ಮಾಡಲಾಗದಂತಹ ದುಃಸ್ಥಿತಿಗೆ ಯುವವರ್ಗವನ್ನು ಒಳಗಾಗಿಸಿರುತ್ತದೆ. ತಮ್ಮ ಮಕ್ಕಳು ಸಹ ಇಂದಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಸಂಸ್ಕೃತಿಹೀನರಾಗಿ ಕೇವಲ ಭೌತಿಕಸುಖದ ಅನ್ವೇಷಣೆಯಲ್ಲೇ ತೊಡಗುವಂತಾಗುವ ಜೀವನವನ್ನು ಇವರೇ ರೂಪಿಸುವುದು ಎಲ್ಲೆಲ್ಲೂ ಕಂಡುಬರುವ

ಸಾಮಾನ್ಯದೃಶ್ಯ. ಆಧುನಿಕರಲ್ಲಿ ಹೆಚ್ಚಿನವರಿಗೆ ಮಾಧ್ವ ಪರಿಕಲ್ಪನೆ ಇರಲಿ, ಬ್ರಾಹ್ಮಣ್ಯದ ಪರಿಕಲ್ಪನೆಯೂ ಸಹ ದಿನೇ ದಿನೇ ಮಾಯವಾಗುತ್ತಿದೆ. ಹೊರಗಿನ ವಾತಾವರಣದಲ್ಲಿ ಹೆಚ್ಚಾಗಿ ಕಂಡುಬರುವ ಜಾತ್ಯಂತರ ವಿವಾಹ, ಮಾಧ್ಯಮಗಳಲ್ಲಿ ಅವಕ್ಕೆ ಸಿಗುವ ವಿಕೃತ ಪ್ರಚಾರ, ಅದಕ್ಕೆ ಪೋಷಕವಾಗುವಂತಹ ಇತರ ಸನ್ನಿವೇಶಗಳು ಎಲ್ಲ ಸೇರಿ ವರ್ಣಾಶ್ರಮದ ಪರಿಕಲ್ಪನೆಯನ್ನೇ ವಿರೋಧಿಸುವಂತೆ ಮಾಡಿವೆ. ನನ್ನ ಗಮನಕ್ಕೆ ಬಂದಂತೆ ಇಂದಿನ ಹೆಚ್ಚಿನ ಮಾಧ್ವಮನೆಗಳಲ್ಲಿ ಬ್ರಾಹ್ಮಣೇತರರ ಮನೆಗಳಿಗಿಂತ ಹೆಚ್ಚಿನ ವ್ಯತ್ಯಾಸವೇನೂ ಕಂಡು–ಬರುವುದಿಲ್ಲ. ಉದ್ಯೋಗಸ್ಥ ಕುಟುಂಬದ ಅನೇಕ ಮಾಧ್ವ ಕುಟುಂಬಗಳಲ್ಲಿ ಅಡುಗೆ ಮಾಡಿ ಬಡಿಸುವವರೂ ಸಹ ಬ್ರಾಹ್ಮಣೇತರರು ಎಂಬ ಸತ್ಯಸಂಗತಿ ತುಂಬ ಜನಕ್ಕೆ ತಿಳಿದಿರಲಿಕ್ಕಿಲ್ಲ. ಇದರಿಂದ ಅವರಿಗಾಗಲಿ, ಅವರ ಮಕ್ಕಳಿಗಾಗಲಿ, ಬ್ರಾಹ್ಮಣ್ಯ ಎಂಬುದು ಇತರ ವರ್ಣಗಳಿಗಿಂತ ಭಿನ್ನ ಎಂಬ ಪರಿಕಲ್ಪನೆ ಅರ್ಥವಾಗದಷ್ಟು ಪರಕೀಯ ಎನ್ನಿಸುತ್ತದೆ. ಹೀಗೆ ಬ್ರಾಹ್ಮಣಸಂಸ್ಕೃತಿಗೆ ಎರಗಾಗುವ ಇವರು ಹರಿಸರ್ವೋತ್ತಮತ್ವಾದಿ ಪ್ರಮೇಯ–ಗಳನ್ನಾಗಲಿ, ಏಕಾದಶೀವ್ರತದ ಆಚರಣೆ ಮೊದಲಾದ ಸದಾಚಾರವನ್ನಾಗಲಿ, ತಿಳಿಯುವುದಿರಲಿ, ನೋಡುವುದೂ ಸಹ ಅಸಂಭವ ಎನ್ನಿಸುತ್ತದೆ.

ಇದನ್ನು ಸಮರ್ಥವಾಗಿ ಎದುರಿಸುವಂತಹ ಯಾವುದೇ ವ್ಯವಸ್ಥೆಯೂ ಸಹ ನಮ್ಮ ಸಮಾಜದಲ್ಲಿ ರೂಪುಗೊಂಡಿಲ್ಲ ಎಂಬುದು ವಿಷಾದದ ಸಂಗತಿ. ಇದಕ್ಕೆ ಉತ್ತರವಾಗ–ಬಹುದಿದ್ದ ಸಮರ್ಥವಾದ ಪ್ರವಚನ ಮೊದಲಾದ ಜ್ಞಾನಕಾರ್ಯಗಳು ಕೇವಲ ಬೆಂಗಳೂರು ಮೊದಲಾದ ಕೆಲವೇ ಕೆಲವು ಸ್ಥಳಗಳಿಗೆ ಮಾತ್ರ ಸೀಮಿತ. ಇವುಗಳೂ ಸಹ ಹೆಚ್ಚಿನ ಪ್ರಸಂಗಗಳಲ್ಲಿ ಕೇವಲಯಾಂತ್ರಿಕ ಎನ್ನಿಸುವುದು ಮತ್ತೊಂದು ಬಗೆಯ ಮಿತಿ. ನಾನು ಗಮನಿಸಿರುವಂತೆ ನಮ್ಮ ರಾಜ್ಯದ ಹೆಚ್ಚಿನ ದೊಡ್ಡ ಪಟ್ಟಣಗಳಲ್ಲಿ ವರ್ಷಕ್ಕೆ ಒಂದು ಸಪ್ತಾಹ ಅವಧಿಯ ಜ್ಞಾನಕಾರ್ಯವೂ ಸಹ ನಡೆಯುತ್ತಿಲ್ಲ ಎಂಬುದು ನೋವಿನ ಸಂಗತಿ. ಎಂದರೆ ಸಾಮಾನ್ಯ ಜನತೆಗೆ ಸಂಸ್ಕೃತಿಯ ಅಧ್ಯಾತ್ಮ, ಸದಾಚಾರಗಳ ಬಗ್ಗೆ ತೀರಾ ಸಾಮಾನ್ಯ ಮಾಹಿತಿಯು ಸಹ ಸ್ವಲ್ಪವೂ ಸಿಗದಂತಹ ವಾತಾವರಣ ದಿನೇ ದಿನೇ ಹೆಚ್ಚುತ್ತಿದೆ. ಇದರಿಂದಾಗಿಯೇ ಯುವಜನತೆ ಕಾರಣಾಂತರದಿಂದ ಇತರ ಧರ್ಮದವರು ನಡೆಸುವ ಕಾರ್ಯಕ್ರಮಗಳಿಗೆ ಅನಿವಾರ್ಯವೆಂಬಂತೆ ಪಾಲ್ಗೊಳ್ಳುವುದು, ಅದರ ಪರಿಣಾಮವಾಗಿ ಅದರತ್ತ ಆಕರ್ಷಿತರಾಗುವುದು, ಕೊನೆಗೆ ಅದೇ ತತ್ವವನ್ನೇ ಒಪ್ಪಿ ಸಂಪೂರ್ಣವಾಗಿ ತಮ್ಮತನವನ್ನು ಕಳೆದುಕೊಳ್ಳುವುದು ಸಹಜ ಎಂಬಂತೆ ನಡೆಯುತ್ತಿದೆ. ಇದು ಒಟ್ಟಾಗಿ ಅಧ್ಯಾತ್ಮಪರಂಪರೆಗೆ ಉಂಟಾಗಿರುವ ಆಘಾತ; ಆದರೆ ಇದರ ಪರಿಣಾಮ ತುಂಬ ಹೆಚ್ಚಾಗಿ ಆಗುತ್ತಿರುವುದು ಮಾತ್ರ ಮಾಧ್ವಜನತೆಯ ಮೇಲೆ ಎಂಬುದು ಕಟುಸತ್ಯ. ನಮ್ಮ ಮಠಮಾನ್ಯಗಳು ಈ ಬಗ್ಗೆ ಅಷ್ಟಾಗಿ ಗಮನಿಸಿದ ಸುಳಿವೂ ಸಹ ತೋರುತ್ತಿಲ್ಲ. ಹೀಗಾಗಿ ಮುಂದಿನ ಜನಾಂಗ ವೈದಿಕಸಂಸ್ಕೃತಿಯಿಂದ ದೂರ ಸರಿಯುವ ಕಾಲ ದೂರವಿಲ್ಲ ಎನ್ನಿಸುತ್ತದೆ.

*****

ಮಧ್ವಶಾಸ್ತ್ರ ಮತ್ತು ಅನುಸಂಧಾನ – ೫೦

# ಉಪಚಾರಾರ್ಪಣೆಯ ಅನುಸಂಧಾನ

- ಸಗ್ರಿ ರಾಘವೇಂದ್ರ ಉಪಾಧ್ಯಾಯ

**........ತತ್ರಾವಾಹ್ಯಂ ಹರಿಂ ಚಾರ್ಘ್ಯಂ ಪಾದ್ಯಮಾಚಮನೀಯಕಮ್ ।**
**ಮಧುಪರ್ಕಂ ಪುನಶ್ಚಾಚಾಂ ಸ್ನಾನಂ ವಾಸೋವಿಭೂಷಣೇ ।**
**ಉಪವೀತಾಸನೇ ದತ್ವಾ ಗಂಧಪುಷ್ಪೇ ತಥೈವ ಚ ।**
**.......ಧೂಪದೀಪೌ ತತೋ ದತ್ವಾ ನೈವೇದ್ಯಂ ಮೂಲ ಮಂತ್ರತಃ ॥**

– ಎಂದು ತಂತ್ರಸಾರ ಸಂಗ್ರಹದಲ್ಲಿ (೧–೫೭.೫೮.೬೩) ತಿಳಿಸಿರುವಂತೆ ಪ್ರತಿಮೆಯಲ್ಲಿ ಆವಾಹಿಸಿದ ಭಗವಂತನಿಗೆ ಅರ್ಘ್ಯಪಾದ್ಯಾದಿ ಷೋಡಶೋಪಚಾರಗಳನ್ನು ಸಮರ್ಪಿಸಬೇಕು. ಅತಿಥಿಯಾಗಿ ಬಂದ ವ್ಯಕ್ತಿಯೊಬ್ಬನಿಗೆ ಅವನ ಪಾದಗಳನ್ನು ತೊಳೆಯುವುದು, ಹಸ್ತಗಳನ್ನು ತೊಳೆಯುವುದು – ಇತ್ಯಾದಿಯಾಗಿ ಉಪಚಾರಗಳನ್ನು ಅರ್ಪಿಸಬಹುದಾದರೂ ಕಣ್ಣಿಗೆ ಕಾಣಿಸದ ಭಗವಂತನಿಗೆ ಅರ್ಘ್ಯಾದಿಗಳನ್ನು ಅರ್ಪಿಸಲಾಗುವುದಾದುದರಿಂದ ಅನುಸಂಧಾನಿಕಗಳಾದ ಅರ್ಘ್ಯಾದಿಗಳನ್ನೇ ಅರ್ಪಿಸಬೇಕು. ಹಾಗೆಯೇ ನಿತ್ಯಶುದ್ಧನಾದ, ನಿತ್ಯತೃಪ್ತನಾದ ಅವನಿಗೆ ಅರ್ಘ್ಯಾದಿಗಳ ಆವಶ್ಯಕತೆ ಇಲ್ಲವಾದರೂ ಅರ್ಘ್ಯಾದಿಗಳ ವಿಷಯದಲ್ಲಿ ಅಳವಡಿಸಿಕೊಳ್ಳಲಾಗುವ ಅನುಸಂಧಾನವೇ ಅವನಿಗೆ ತೃಪ್ತಿಜನಕ ಎಂಬುವದನ್ನು ಮರೆಯುವಂತಿಲ್ಲ.

ನಿತ್ಯತೃಪ್ತನಾದ ಭಗವಂತನು ತನಗೆ ಉಪಚಾರಗಳನ್ನು ಅರ್ಪಿಸುವ ಮೂಲಕ ಭಕ್ತರು ತನ್ನ ಬಗ್ಗೆ ಭಕ್ತಿಯನ್ನು ಹೆಚ್ಚಿಸಿಕೊಂಡು ಉದ್ಧಾರ ಹೊಂದುವಂತಾಗಲೆಂಬ ಉದ್ದೇಶದಿಂದಲೇ ಉಪಚಾರಗಳನ್ನು ಸ್ವೀಕರಿಸುವನು. ನಿತ್ಯಶುದ್ಧನಾದ ಅವನಿಗೆ ಪಾದ್ಯ, ಆಚಮನ, ಪುನರಾಚಮನ, ಸ್ನಾನ – ಇವುಗಳ ಆವಶ್ಯಕತೆ ಇಲ್ಲದಿದ್ದರೂ ಭಕ್ತರ ಉದ್ಧಾರಕ್ಕಾಗಿಯೇ ಅವುಗಳನ್ನು ಸ್ವೀಕರಿಸುವನು.

ಆದುದರಿಂದ ಉಪಚಾರಗಳನ್ನು ಅರ್ಪಿಸುವಾಗ ಅವುಗಳನ್ನು ಸ್ವೀಕರಿಸುವ ಹಿನ್ನೆಲೆಯಾಗಿ ಅವನ ಭಕ್ತವಾತ್ಸಲ್ಯವನ್ನು ಅನುಸಂಧಾನ ಮಾಡಬೇಕು. ಷೋಡಶೋಪಚಾರಗಳಲ್ಲಿ ಅರ್ಘ್ಯ, ಪಾದ್ಯ, ಆಚಮನ, ಪುನರಾಚಮನ ಹಾಗೂ ಸ್ನಾನ – ಇವು ಪಾವಿತ್ರ್ಯದ ಶುದ್ಧಿಯ ಉದ್ದೇಶದಿಂದ ಸಮರ್ಪಿಸಲ್ಪಡುವ ಉಪಚಾರಗಳಾಗಿದ್ದು, ಇವುಗಳ ಅರ್ಪಣೆ '**ಯದ್ಯಜ್ಜನೋ ಭಗವತೇ ವಿದಧೀತ ಮಾನಂ ತಚ್ಚಾತ್ಮನೇ ಪ್ರತಿಮುಖಸ್ಯ ಯಥಾ ಮುಖಶ್ರೀಃ**' ಎಂದು ಭಕ್ತಪ್ರಹ್ಲಾದ ತಿಳಿಸಿರುವಂತೆ ( ಭಾಗ ೭–೯–೧೧) ಮುಖಕ್ಕೆ

ಮಾಡಿಕೊಂಡ ಅಲಂಕಾರ ಕನ್ನಡಿಯ ಪ್ರತಿಬಿಂಬದಲ್ಲಿ ಪ್ರತಿಫಲಿತವಾಗುವಂತೆ ನಮ್ಮಲ್ಲಿ ಪಾವಿತ್ರ್ಯವನ್ನು, ಶುದ್ಧಿಯನ್ನು ಪ್ರತಿಫಲಿಸಬಲ್ಲದು. ಆಸನ, ಸ್ವಾಗತ, ಮಧುಪರ್ಕ (ಹಾಲು, ಜೇನು, ಮೊಸರು – ಇವುಗಳ ಮಿಶ್ರಣದಿಂದ ರೂಪುಗೊಂಡ ಪಾನೀಯ) – ಇವು ಶ್ರಮಪರಿಹಾರಕ್ಕಾಗಿ ಇರುವ ಉಪಚಾರಗಳಾಗಿದ್ದು, ಶ್ರಮರಹಿತನಾದ ಭಗವಂತನಿಗೆ ನಡೆಸಲಾಗುವ ಇವುಗಳ ಅರ್ಪಣೆ ನಮ್ಮ ಪಾಲಿಗೆ ಶ್ರಮಪರಿಹಾರಕವಾಗಿ ಪ್ರತಿಫಲಿತವಾಗುವುದು.

ಬಟ್ಟೆ, ಆಭರಣ, ಗಂಧ, ಪುಷ್ಪ, ಧೂಪ, ದೀಪ – ಇವು ವೈಭವಕ್ಕಾಗಿ ಅರ್ಪಿಸಲಾಗುವ ಉಪಚಾರಗಳಾಗಿದ್ದು , ಇವುಗಳ ಆವಶ್ಯಕತೆಯಿಲ್ಲದ ಭಗವಂತನಿಗೆ ಸಲ್ಲಿಸಲಾಗುವ ಇವುಗಳ ಅರ್ಪಣೆ ಪ್ರತಿಫಲಿತವಾಗಿ ಅರ್ಪಿಸುವವನ ವೈಭವಕ್ಕೆ ಪ್ರಯೋಜಕವಾಗುವುದು.

## ನೈವೇದ್ಯದ ಅರ್ಪಣೆ

ನೈವೇದ್ಯದ ಅರ್ಪಣೆ '**.....ಉಚ್ಛಿಷ್ಟಭೋಜಿನೋ ದಾಸಾಸ್ತವ ಮಾಯಾಂ ಜಯೇಮ ಹಿ**'– ಎಂದು ಉದ್ಧವ ನಿವೇದಿಸಿಕೊಂಡಿರುವಂತೆ ಆಹಾರಪದಾರ್ಥಗಳಲ್ಲಿರುವ ಬಂಧಕಶಕ್ತಿಯನ್ನು ಪರಿಹರಿಸುವುದು. ಆಭರಣಾದಿಗಳ ಸಮರ್ಪಣೆಗೂ ಈ ಪ್ರಯೋಜನವೂ ಇದ್ದೇ ಇದೆ.

ನಮಸ್ಕಾರ ಉಪಚಾರವಂತೂ ದಾಸ್ಯದ ಹಾಗೂ ಆತ್ಮನಿವೇದನೆಯ ಸಂಕೇತವಾಗಿದ್ದು ನಮ್ಮೆಲ್ಲ ದೇಹೇಂದ್ರಿಯಾದಿಗಳನ್ನು ಅವನ ಕೈಂಕರ್ಯಕ್ಕಾಗಿ ಅರ್ಪಿಸುವ, '**ಇಷ್ಟಂ ದತ್ತಂ ಹುತಂ ಜಪ್ತಂ ಪೂರ್ತಂ ಯಚ್ಚಾತ್ಮನಃ ಪ್ರಿಯಮ್ । ದಾರನ್ ಸುತಾನ್ ಪ್ರಿಯಾನ್ ಪ್ರಾಣಾನ್ ಯತ್ ಪರಸ್ಮೈ ನಿವೇದನಮ್**' ಎಂದು ಸದಾಚಾರಸ್ಮೃತಿಯಲ್ಲಿ (೧೩) ತಿಳಿಸಿರುವಂತೆ ನಮ್ಮ ಮೂಲಕ ನಡೆದ ಎಲ್ಲ ಬಗೆಯ ಸಾಧನೆಗಳನ್ನು, ನಮ್ಮ ಪ್ರಿಯಗಳನ್ನು ನಿವೇದಿಸಿಕೊಳ್ಳುವ ಪ್ರಕ್ರಿಯೆ ಎನಿಸಿದೆ.

ಈ ರೀತಿಯಾಗಿ ಷೋಡಶೋಪಚಾರಗಳಲ್ಲಿ ಪ್ರತಿಯೊಂದೂ ಅರ್ಪಿಸುವವನ ಶ್ರೇಯಸ್ಸಿಗಾಗಿ ಇರುವಂತಹದ್ದು. ಇದರಿಂದ ಪ್ರಸನ್ನನಾಗುವ ಭಗವಂತನು ಆಯಾ ಉಪಚಾರಕ್ಕೆ ಅನುಗುಣವಾಗಿ ಫಲವನ್ನು ನೀಡುವನು.

ಇದು ಉಪಚಾರಗಳನ್ನು ಅರ್ಪಿಸುವಾಗ ಅಳವಡಿಸಿಕೊಳ್ಳಬೇಕಾದ ಸ್ಥೂಲವಾದ ಅನುಸಂಧಾನ.

ಇಷ್ಟೇ ಅಲ್ಲದೆ, ಪ್ರತಿಯೊಂದು ಉಪಚಾರಕ್ಕೂ ಸಂಬಂಧಿಸಿ ಸೂಕ್ಷ್ಮವಾದ ಅನು–ಸಂಧಾನವೂ ಇದ್ದೇ ಇದೆ.

(ಮುಂದಿನ ಸಂಚಿಕೆಯಲ್ಲಿ: **ಷೋಡಶೋಪಚಾರಗಳ ಸೂಕ್ಷ್ಮ ಅನುಸಂಧಾನ.**)

*****

# ಯಂತ್ರೋದ್ಧಾರಕ ಪ್ರಾಣದೇವರು

ಸಂಗ್ರಾಹಕರು : **ಶ್ರೀ ಪಿ.ವಿಷ್ಣುತೀರ್ಥ**[೧], ನವವೃಂದಾವನ, ಆನೆಗುಂದಿ

ಪರಿಚಯ : ಬಳ್ಳಾರಿ ಜಿಲ್ಲೆಗೆ ಸೇರಿದ ಹೊಸಪೇಟೆ ರೇಲ್ವೆ ಸ್ಟೇಶನ್ನಿಗೆ ಸುಮಾರು ಏಳು ಮೈಲಿ ದೂರದಲ್ಲಿ ಹಂಪೆ ಎಂಬ ಗ್ರಾಮವಿದೆ. ಅಲ್ಲಿ ಪ್ರವಹಿಸುವ ತುಂಗಭದ್ರಾ ನದಿಯಲ್ಲಿ ಚಕ್ರತೀರ್ಥವಿದೆ. ಅದರ ದಕ್ಷಿಣ ತೀರದ ಬಳಿಯಿರುವ ಕಲ್ಲುಮಂಟಪಗಳ ಮೇಲ್ಭಾಗದಲ್ಲಿ, ಕೋದಂಡರಾಮನ ಗುಡಿಯ ಹಿಂಭಾಗದಲ್ಲಿ ಸ್ವಲ್ಪ ಎತ್ತರದ ಮೇಲೆ, ಗುಡ್ಡಕ್ಕೆ ಹತ್ತಿಕೊಂಡಂತೆ ಒಂದು ಗುಡಿಯಿದೆ. ಇದೇ ಯಂತ್ರೋದ್ಧಾರಕ ಪ್ರಾಣದೇವರ ಗುಡಿ. ದೇವರ ಮೂರ್ತಿಯು ಆ ಗುಡ್ಡಕ್ಕೆ ಸೇರಿದ ಒಂದು ಭಾರಿ ಬಂಡೆಯ ಮೇಲೆಯೇ ಚಿತ್ರಿತವಾಗಿದೆ, ಈ ದೇವರಿಗೆ ಮಾಧ್ವಸಂಪ್ರದಾಯಕ್ಕೆ ಅನುಗುಣವಾಗಿ ನಿತ್ಯ ಪೂಜಾವಿಧಿಗಳು ನಡೆಯುತ್ತವೆ. ಇಲ್ಲಿ ಅನೇಕರು ಸೇವೆ-ಸೂತ್ರಗಳನ್ನೂ ನಡೆಸುವರು. ಇದು ಜಪತಪಾದ್ಯನುಷ್ಠಾನಗಳಿಗೆ ಒಳ್ಳೆಯ ಸಿದ್ಧಿಸ್ಥಾನ.

ದೇವರ ಮೂರ್ತಿ : ಈ ಮೂರ್ತಿಯನ್ನು ಪ್ರಸಿದ್ಧ ಮಾಧ್ವಸಂನ್ಯಾಸಿಗಳಾದ ಶ್ರೀವ್ಯಾಸರಾಯಸ್ವಾಮಿಗಳವರು ಶಾ.ಶ.೧೪೨೨ನೇ ರೌದ್ರಿ ಸಂವತ್ಸರದಲ್ಲಿ (ಕ್ರಿ.ಶ.೧೫೦೦ರಲ್ಲಿ) ಪ್ರತಿಷ್ಠೆ ಮಾಡಿದರೆಂದು ತಿಳಿದುಬಂದಿದೆ. ಇಲ್ಲಿ ಯಂತ್ರದ ರೇಖೆಗಳ ಮಧ್ಯೆ ಜಪಮಾಲೆ ಹಿಡಿದು ಯೋಗಾಸನಾರೂಢರಾದ ಪ್ರಾಣ(ಹನುಮಂತ)ದೇವರು ಪದ್ಮಾಸನ ಹಾಕಿಕೊಂಡು ಧ್ಯಾನಮಗ್ನರಾಗಿ ಕುಳಿತಿರುವಂತೆ ಚಿತ್ರಿಸಿದೆ. ಒಂದಕ್ಕೊಂದು ಹೆಣೆದುಕೊಂಡಿರುವ ಹನ್ನೆರಡು ಕಪಿಗಳ ಮಾಲೆಯಿಂದ ಯಂತ್ರವನ್ನು ಸುತ್ತಲೂ ಬಂಧಿಸಿದೆ. ಈ ವಿಷಯದಲ್ಲಿ ಒಂದು ಐತಿಹ್ಯ.

ಐತಿಹ್ಯ : ವ್ಯಾಸರಾಯರು ಚಕ್ರತೀರ್ಥದಲ್ಲಿ ಮಿಂದು ಈಗ ಪ್ರಾಣದೇವರು ಇರುವ ಸ್ಥಳದಲ್ಲಿ ಕುಳಿತು ಪ್ರಾತರನುಷ್ಠಾನವನ್ನು ಮಾಡುತ್ತಿದ್ದರಂತೆ. ಅವರು ಧ್ಯಾನಾವಸ್ಥೆಯಲ್ಲಿ ಕಣ್ಣುಮುಚ್ಚಿದಾಗ ಎದುರಿಗಿದ್ದ ಬಂಡೆಯಿಂದ ಒಂದು ಕಪಿ ಹೊರಗೆ ಬಂದು ಸುಳಿದಾಡುತ್ತಿದ್ದಂತೆಯೂ ಕಣ್ಣು ಬಿಡುವಷ್ಟರಲ್ಲಿ ಪುನಃ ಅದೇ ಬಂಡೆಯೊಳಗೇ ಪ್ರವೇಶಿಸಿಬಿಡುತ್ತಿದ್ದಂತೆಯೂ ಗೋಚರವಾಗುತ್ತಿತ್ತು. ಹೀಗೆಯೇ ಅನೇಕ ದಿವಸ ನಡೆಯಿತು. ಒಂದು ದಿನ ರಾತ್ರಿ ಪೂಜಾಸಮಯದಲ್ಲಿ ವ್ಯಾಸರಾಯರು ''ನೀನೆ ವರಗುರು ಮುಖ್ಯಪ್ರಾಣಾ !...'' ಎಂಬ ಕೀರ್ತನೆಯನ್ನು ರಚಿಸಿ, ಪ್ರಾಣದೇವರನ್ನು ಸ್ತುತಿಸಿ, ''ನನ್ನಿಂದ ಏನು ಸೇವೆ ಆಗಬೇಕಾಗಿದೆ, ಸ್ವಾಮಿ? ಅಪ್ಪಣೆ ಮಾಡಬೇಕು' ಎಂದು ಪ್ರಾರ್ಥಿಸಿಕೊಂಡು ಮಲಗಿದರು. ಪ್ರಾಣದೇವರು ಬೆಳಗಿನಝಾವದಲ್ಲಿ ಸ್ವಪ್ನದಲ್ಲಿ (ಶ್ರೀರಾಮದೇವರ) ದರ್ಶನವು ಪಾವನವಾದ ಈ ಸ್ಥಳದಲ್ಲಿಯೇ ಆಯಿತು. ಇಲ್ಲಿ ನಮ್ಮನ್ನು ಪ್ರತಿಷ್ಠೆ ಮಾಡು'' ಎಂದು ಆಜ್ಞಾಪಿಸಿದರು. ಅವರ ಆಜ್ಞೆಯನ್ನು ಶಿರಸಾವಹಿಸಿ ವ್ಯಾಸರಾಯರು ಮರುದಿವಸವೇ ಆ ಸ್ಥಳಕ್ಕೆ ಬಂದು, ಯಾವ ಬಂಡೆಯೊಳಗಿಂದ ಕಪಿಯು ಹೊರಗೆ

---

೧. ದಿ॥ ವಿಷ್ಣುತೀರ್ಥರ ಅಭಿಮಾನಿಗಳೊಬ್ಬರು ಕಳುಹಿಸಿಕೊಟ್ಟಿರುವ ಲೇಖನ ಇದಾಗಿದೆ.

ಬಂದಂತೆ ಕಾಣಿಸುತ್ತಿತ್ತೋ ಆ ಬಂಡೆಯ ಮೇಲೆಯೇ ಅಂಗಾರದಿಂದ ಪ್ರಾಣದೇವರ ಮೂರ್ತಿಯನ್ನು ಬರೆದು ಅದಕ್ಕೆ ದ್ವಾದಶನಾಮಗಳನ್ನು ತಿದ್ದಿದರು. ಆದರೆ ನಾಮ ತಿದ್ದಿದೊಡನೆಯೇ ಪ್ರಾಣದೇವರ ಆ ಮೂರ್ತಿಯೇ ಹಾರಿಹೋಯಿತು. (ಅಂದರೆ ಅದೃಶ್ಯವಾಗಿ ಹೋಯಿತು).

ಆಗ ವ್ಯಾಸರಾಯರು ಮತ್ತೊಂದು ಬೇರೆ ಮೂರ್ತಿ ಬರೆದು ನಾಮ ತಿದ್ದಿದರು; ಅದೂ ಹಾಗೆಯೇ ಹಾರಿಹೋಯಿತು. ಹೀಗೆ ಹನ್ನೆರಡು ಸಲ ಬೇರೆ ಬೇರೆ ರೀತಿಯಲ್ಲಿ (ಭಾವಗಳಲ್ಲಿ) ಚಿತ್ರಗಳನ್ನು ಬರೆದರೂ ಅವರ ಪ್ರಯತ್ನ ನೆರವೇರಲಿಲ್ಲ. ಕಡೆಗೆ, ಇಂಗಿತಜ್ಞರಾದ ಸ್ವಾಮಿಗಳು ತಂತ್ರಸಾರೋಕ್ತ ಪ್ರಕಾರ ಯಂತ್ರವನ್ನು ಬರೆದು ಅದರ ಮಧ್ಯೆ ಯೋಗಾಸನಾರೂಢರಾಗಿ ಜಪಮಾಲೆ ಹಿಡಿದು ಕುಳಿತಂತೆ ಪ್ರಾಣದೇವರನ್ನು ಚಿತ್ರಿಸಿದರಲ್ಲದೆ, ಹಿಂದೆ ಹಾರಿ ಹೋಗಿದ್ದ ಹನ್ನೆರಡು ಕಪಿಗಳನ್ನೇ ಮಾಲಾಕಾರವಾಗಿ ಕಪಿಬಂಧನದಿಂದಲೇ ಹೆಣೆದು, ದಿಗ್ಬಂಧನಮಾಡಿ, ಕೊಟ್ಟ ಕೊನೆಯಲ್ಲಿ ಪ್ರಾಣದೇವರಿಗೆ ದ್ವಾದಶನಾಮಗಳನ್ನು ತಿದ್ದಿ ಪ್ರಾಣಪ್ರತಿಷ್ಠೆ ಮಾಡಿದರು. ಈ ಸಲ ಬರೆದ ರೇಖೆಗಳೆಲ್ಲವೂ ಹಾಗೆಯೇ ಉಳಿದುಕೊಂಡವು. ಪ್ರಾಣದೇವರ ಮೂರ್ತಿ ಕಲ್ಲಿನ ಮೇಲೆ ಒಡಮೂಡಿತು. ಕೂಡಲೇ ಪಂಚಾಮೃತಾದಿ ಪರಿಕರಗಳನ್ನು ತರಿಸಿಕೊಂಡು ಪ್ರಾಣದೇವರ ಪೂಜೆಯನ್ನು ಆರಂಭಿಸಿಯೇ ಬಿಟ್ಟರು.

ಪ್ರಾರಂಭದಲ್ಲಿ ಕೇವಲ ರೇಖೆಗಳು ಮಾತ್ರವೇ ಇದ್ದುವು. ಕಾಲಕ್ರಮದಲ್ಲಿ ಏರು-ತಗ್ಗುಗಳು ಸ್ಪಷ್ಟವಾಗುತ್ತ ಬಂದುವಂತೆ. ಅದೂ ಅಲ್ಲದೆ ಮೊದಲು ದೇವರು ಬಟಾ ಬಯಲಿನಲ್ಲೇ ಇದ್ದರು. ವಿಜಯನಗರದ ಅರಸನಾಗಿದ್ದ ತಮ್ಮರಾಯ (ಅಥವಾ, ಸಾಳುವ ನರಸಿಂಹನ ಮಗನಾದ ಇಮ್ಮಡಿ ನರಸಿಂಹ)ನು ಈಗಿರುವ ಗುಡಿಯನ್ನು ಕಟ್ಟಿಸಿಕೊಟ್ಟನಂತೆ. ಈ ಯಂತ್ರದಲ್ಲಿ ಒಂದು ಕೋಟಿ ಮಂತ್ರಗಳ ಬೀಜಾಕ್ಷರಗಳು ಅಡಕವಾಗಿವೆಯೆಂದೂ, ಸಿದ್ಧಿಗಾಗಿ ವ್ಯಾಸರಾಯರು ಮೂರು ಕೋಟಿ ಜಪವನ್ನು ಧಾರೆಯೆರೆದು ಕೊಟ್ಟಿದ್ದಾರೆಂದೂ ಆದ ಕಾರಣವೇ ಈ ಯಂತ್ರೋದ್ಧಾರಕ ಪ್ರಾಣದೇವರ ಸೇವೆಯಿಂದ ಭೂತಪ್ರೇತಪಿಶಾಚ-ಪೀಡೆಗಳೂ, ವಾತಶೀತಜ್ವರ ಭೀತ್ಯಾದಿಗಳೂ ನಿವಾರಣೆಯಾಗಿ ಸಕಲಾಭೀಷ್ಟಗಳೂ ಆತುರದಿಂದಲೇ ಸಿದ್ಧಿಸುವುವೆಂದೂ ವಿಜಯದಾಸರು ಅಧಿಕಾರವಾಣಿಯಿಂದ ಯಂತ್ರೋದ್ಧಾರಕಸುಳಾದಿಯಲ್ಲಿ ನುಡಿದಿದ್ದಾರೆ. (ಬೀಜಾಕ್ಷರಗಳು ಗೋಪ್ಯವಾದ ಕಾರಣ ಅವುಗಳನ್ನು ಗುರುತಿಸುವುದು ಸಾಧ್ಯವಿಲ್ಲ).

*****

ಸಪ್ತಕೋಟಿಮಹಾಮಂತ್ರಸಿದ್ಧರು ಎಂಬುದು ಶ್ರೀಪ್ರಾಣದೇವರ ಮಹಾಹಿರಿಮೆ-ಗಳಲ್ಲೊಂದು. ಅಂತಹವರು ಹೀಗೆ ಈ ಯಂತ್ರದ ಮಧ್ಯೆ ಮೂಡಿಬಂದಿರುವುದು ಮಹಾವಿಶೇಷ. ಶ್ರೀವ್ಯಾಸರಾಜಪ್ರತಿಷ್ಠಿತ ಪ್ರಾಣಪ್ರತೀಕಗಳಲ್ಲಿ ಅಗ್ರಮಾನ್ಯವೆನ್ನಿಸಿರುವುದು ಇದರ ಮತ್ತೊಂದು ಹಿರಿಮೆ.

# ಚಿಕ್ಕೋಡಿ ಶ್ರೀಭಗವಂತರಾಯರು

(A.D. ೧೭೮೩-೧೮೬೫)

ಲೇಖಕರು : **ಶ್ರೀರಾಯಸಂ ತಿರುಮಲರಾವ,** ಹರಪನಹಳ್ಳಿ

(ಏಪ್ರಿಲ್ ೨೦೧೨ರ ಸಂಚಿಕೆಯಲ್ಲಿ 'ಚಿಕ್ಕೋಡಿ ಶ್ರೀಭಗವಂತರಾಯರು' ಎಂಬ ಶೀರ್ಷಿಕೆಯಡಿಯಲ್ಲಿ ಶ್ರೀಹರಪನಹಳ್ಳಿ ಅಣ್ಣಾಚಾರ್ಯರ ಲೇಖನವನ್ನು ಪ್ರಕಟಪಡಿಸಲಾಗಿತ್ತು. ಈ ಸಂಚಿಕೆಯಲ್ಲಿ ಹರಪನಹಳ್ಳಿಯವರೇ ಆಗಿದ್ದ ಶ್ರೀರಾಯಸಂ ತಿರುಮಲರಾವ್ ಅವರ ಲೇಖನವನ್ನು ಪ್ರಕಟಪಡಿಸಲಾಗಿದೆ. ಇದನ್ನು ಶ್ರೀರಾಯಸಂ ತಿರುಮಲರಾವ್ ಅವರ ಅಭಿಮಾನಿಗಳೊಬ್ಬರು ಕಳುಹಿಸಿಕೊಟ್ಟಿರುವರು. ಈ ಲೇಖನದ ವಿಷಯವು ಈ ಹಿಂದೆ ಪ್ರಕಟವಾದ ಲೇಖನಕ್ಕೆ ಪೂರಕವಾಗಿರುವುದು ಗಮನಾರ್ಹ).

ಶ್ರೀಚಿಕ್ಕೋಡಿ ಭಗವಂತರಾಯರು ೧೭೮೩ನೇ ಇಸವಿಯಲ್ಲಿ ಬಳ್ಳಾರಿ ನಾಗೇಶರಾಯರ ಪುತ್ರರಾಗಿ ಜನಸಿದರು. ಚಿಕ್ಕಂದಿನಲ್ಲಿ ವಿದ್ಯಾಭ್ಯಾಸಮಾಡಿ ಪಾರ್ಸಿ-ಸಂಸ್ಕೃತ, ಇಂಗ್ಲೀಷು ಭಾಷೆಗಳಲ್ಲಿ ಪಂಡಿತರಾದರು. ಆಗ್ಗೆ ಇಂಗ್ಲೀಷಿನವರ ಆಳ್ವಿಕೆಯ ಸಮಯ. ಇವರು ಕೇವಲ ಲೌಕಿಕ ಕಾವ್ಯಗಳನ್ನು ಅಭ್ಯಸಿಸುತ್ತಿದ್ದರೂ ಅತ್ಯಂತ ಆಚಾರಶೀಲರಾಗಿ ನಿತ್ಯ ಸ್ನಾನ ಸಂಧ್ಯಾ ಜಪತಪಾನುಷ್ಠಾನಪರರಾಗಿಯೂ ಇದ್ದರು. ಮೊದಲು ಇವರು ರಾಯದುರ್ಗದ ತಹಶೀಲದಾರರಾಗಿ ಒಂದು ವರ್ಷ ಇದ್ದರು. ಅಲ್ಲಿಂದ ಗುತ್ತಿ ತಾಲೂಕು ಮಾಮಳೇದಾರರು ಆಗಿ ಆರು ತಿಂಗಳು ಇದ್ದು ತರುವಾಯ ಒಂದು ವರ್ಷ ಆದವಾನಿ ತಾಲೂಕು ತಹಶೀಲದಾರರಾಗಿ ಕೆಲಸ ಮಾಡಿದರು.

ಹೀಗೆ ಕೆಲವು ಕಾಲ ಕಳೆಯುತ್ತಿರಲು ದಾಸವರ್ಯರಾದ ಶ್ರೀಜಗನ್ನಾಥ ದಾಸರಾಯರು ಬಳ್ಳಾರಿಗೆ ದಯಮಾಡಿಸಿದಾಗ್ಗೆ ರಾಯರನ್ನು ನೋಡಿ ಸಂತೋಷಪಟ್ಟು ಶ್ರೀಭಗವಂತ-ರಾಯರಿಗೆ ದಾಸದೀಕ್ಷೆಯನ್ನು ಕೊಟ್ಟು **''ಪ್ರಾಣನಾಥ ವಿಠಲ''** ಎಂಬ ಅಂಕಿತ ಪ್ರದಾನ ಮಾಡಿ ಅನುಗ್ರಹಿಸಿದರು. ದಾಸರು ಫಾರ್ಸಿ ಭಾಷೆಯ ಅಧ್ಯಯನವನ್ನು ಬಿಟ್ಟು ಶ್ರೀ ಸರ್ವಜ್ಞಶಾಸ್ತ್ರ ಓದಲು ಪ್ರೇರಿಸಿ ಹೊರಟು ಹೋದರು. ಶ್ರೀದಾಸರ ಸಮಾಗಮನದ ಫಲವಾಗಿ ಶ್ರೀಮಧ್ವಶಾಸ್ತ್ರ ಪ್ರವಚನ ಆಚಾರ್ಯರಾದ ಹರಪನಹಳ್ಳಿಯ ಶ್ರೀಭಕ್ರಿ ವರಾಹಾಚಾರ್ಯರೆಂಬುವರಲ್ಲಿ ರಾಯರು ಶಾಂತಿ ಪಾಠ ಪೂರ್ವಕ ಸರ್ವಜ್ಞಶಾಸ್ತ್ರವನ್ನು ಅಧ್ಯಯನ ಮಾಡಲು ಪ್ರಾರಂಭಿಸಿದರು. ಆ ಆಚಾರ್ಯರನ್ನು ತಮ್ಮ ಮನೆಯಲ್ಲಿಯೇ ಇಟ್ಟುಕೊಂಡು ಬಿಟ್ಟರು. ಸ್ವಯಂ ವ್ಯುತ್ಪನ್ನರೇ ಇದ್ದ ರಾಯರು ಗ್ರಂಥ ಸ್ವಾರಸ್ಯವನ್ನು ತೀವ್ರವಾಗಿ ಗ್ರಹಿಸಿ ಕೆಲವು ಶಿಷ್ಯರಿಗೆ ಪಾಠ ಹೇಳತೊಡಗಿದರು.

ವೈದಿಕ ವಿದ್ಯೆಯು ಇತ್ತ ಭರದಿಂದ ಸಾಗಿರಲು ಅತ್ತ ಲೌಕಿಕದಲ್ಲಿಯೂ ಶ್ರೀರಾಯರು ಹರಿವಾಯುಗಳನ್ನು ಗ್ರಹದಿಂದ ಉನ್ನತ ಸ್ಥಿತಿಗೆ ಬಂದು ಚಿಕ್ಕೋಡಿ ತಾಲೂಕು ಅಮಲ್ದಾರ ಮ್ಯಾಜಿಸ್ಟ್ರೇಟರಾದರು. ಕೆಲಕಾಲಾನಂತರ ಚಿಕ್ಕೋಡಿ ತಾಲೂಕ ಮಾದಿಹಳ್ಳಿ ಗ್ರಾಮದ

ಬಾಬಾ ಸಾಹೇಬರ ಹೆಂಡತಿ ಗಂಡನ ಕೂಡ ಸಹಗಮನ ಹೋಗುತ್ತೇನೆಂದು ಕೇಳಿದ್ದಕ್ಕೆ ರಾಯರು ಸಹಗಮನಕ್ಕೆ ಹುಕುಂ ಕೊಟ್ಟರು. ಇದು ಸರಕಾರದ ಗಮನಕ್ಕೆ ಬಂದು ರಾಯರು ಸರಕಾರದ ಆಜ್ಞೆಯ ವಿರುದ್ಧ ವರ್ತಿಸಿದರೆಂದು ತಿಳಿದು ಇವರಿಗೆ ಕೆಲಸದಿಂದ ನಿವೃತ್ತಿಯಾಯಿತು. ಪುನಃ ಸುಕೃತವಶಾತ್ ಇವರ ಶ್ರೇಯೋಭಿಲಾಷಿ ಕ್ಯಾಪ್ಟನ್ ಕನಾಕ್ಸನ ಶಿಫಾರ್ಶಿನಿಂದ ಬೆಳಗಾಂವಿಯಲ್ಲಿ ಮಾಮಲೇದಾರರಾದರು. ಅಲ್ಲಿಯೂ ಸ್ವಲ್ಪೇ ಅವಧಿಯಲ್ಲಿ ಮೇಲಧಿಕಾರಿಗಳಿಗೂ ಇವರಿಗೂ ಸರಿ ಹೋಗದ್ದರಿಂದ ಕೆಲಸ ಬಿಟ್ಟು ಪುನಃ ಬಳ್ಳಾರಿಗೆ ಬಂದರು. ಆಗ್ಗೆ ಶ್ರೀ ಮತ್ಪೂಜ್ಯ ಶ್ರೀ ಭಕ್ರಿ ವರಾಹಾಚಾರ್ಯರ ಪರಮಾನುಗ್ರಹದಿಂದ ಬಳ್ಳಾರಿ ಜಿಲ್ಲಾ ಹೂವಿನಹಡಗಲಿ ತಾಲೂಕ ಮಾಮಲೇದಾರರಾದರು. ಅಲ್ಲಿ ಐದು ವರ್ಷ ಮಾತ್ರ ಕೆಲಸ ಮಾಡಿ ಸೇವಾ ನಿವೃತ್ತರಾಗಿ ಹರಪನಹಳ್ಳಿಯಲ್ಲಿಯೂ ಬಳ್ಳಾರಿಯಲ್ಲಿಯೂ ಇರುತ್ತಿದ್ದರು.

ಇವರು ಹಡಗಲಿ ಮಾಮಲೇದಾರರಾದಾಗ ಮದಲಗಟ್ಟಿ ಕ್ಷೇತ್ರವೇ ಇವರ ವಾಸಸ್ಥಾನವಾಗಿತ್ತೆಂದರೆ ಅತಿಶಯೋಕ್ತಿಯಾಗಲಾರದು. ಇಲ್ಲಿ ನಿತ್ಯವೂ ೫೦-೬೦ ಜನ ಬ್ರಾಹ್ಮಣರೊಂದಿಗೆ ಸರ್ವಮೂಲ ಗ್ರಂಥಗಳು ಮತ್ತು ಶ್ರೀಮನ್ನ್ಯಾಯಸುಧಾದಿ ಗ್ರಂಥರಾಜಗಳ ಅಧ್ಯಯನ ಪಾಠ ಪ್ರವಚನ, ಚಿಂತನಗಳಲ್ಲಿಯೇ ರಾಯರು ನಿರತರಾಗಿರುತ್ತಿದ್ದರು. ಪ್ರತಿನಿತ್ಯ ಪ್ರಾಣದೇವರ ಸೇವಾದಿಗಳು ವಿಜೃಂಭಣೆಯಿಂದ ನಡೆಯುತ್ತಿದ್ದವು. ಪ್ರತಿದಿನ ರಾಯರು ಕಛೇರಿಗೆ ಭೋಜನೋತ್ತರ ಪೇಟೆ ಗಾಡಿಯಲ್ಲಿ ಹಡಗಲಿಗೆ ಹೋಗಿ ತಮ್ಮ ಸರಕಾರಿ ಕೆಲಸ ತೀರಿಸಿಕೊಂಡು ಸಾಯಂಕಾಲಕ್ಕೆ ಮತ್ತೆ ಮದಲಗಟ್ಟಿಗೆ ಹಿಂತಿರುಗುತ್ತಿದ್ದರು.

ಇವರು ಬಳ್ಳಾರಿಯಲ್ಲಿರುವಾಗ ಇವರ ಗುರುಗಳಾದ ಭಕ್ರಿವರಹಾಚಾರ್ಯರು ವೈಕುಂಠವಾಸಿಗಳಾದರು. ಭಕ್ರಿ ಆಚಾರ್ಯರು ಯಾತ್ರೆ ಮಾಡುವ ಕಾಲಕ್ಕೆ ಭಗವಂತರಾಯರಿಗೆ ತಮ್ಮ ಪುತ್ರ ವೆಂಕೋಬಾಚಾರ್ಯರಿಗೆ ಸುಧಾದಿ ಗ್ರಂಥಗಳ ವ್ಯಾಸಂಗ ಮಾಡಿಸಿ ಮನೆತನದ ಗೌರವ ಉಳಿಸಿದರೆ ಅದೇ ನನಗೆ ನೀವು ಕೊಡತಕ್ಕ ಗುರುದಕ್ಷಿಣೆಯೆಂದುಸುರಿದರು. ''ತಥಾಸ್ತು'' ಎಂದು ನಮಿಸಿ ೧೨ ವರ್ಷದ ಗುರುಪುತ್ರ ವೆಂಕೋಬಾಚಾರ್ಯರನ್ನು ರಾಯರು ಬಳ್ಳಾರಿಯಲ್ಲಿ ತಮ್ಮ ಮನೆಯಲ್ಲಿಟ್ಟುಕೊಂಡು ಅವರನ್ನು ಉಚ್ಚ ಆಸನದಲ್ಲಿ ಕುಳ್ಳಿರಿಸಿ ತಾವು ಕೆಳಗೆ ಕುಳಿತುಕೊಂಡು ಅವರಿಗೆ ಸಕಲಾಂಗ ವ್ಯಾಸಂಗ ಮಾಡಿಸಿ ಪಂಡಿತರನ್ನಾಗಿ ಮಾಡಿದರು.

ಬಳ್ಳಾರಿಯಲ್ಲಿ ಇವರ ಮನೆ ಒಂದು ಗುರುಕುಲದಂತಿತ್ತು. ೧೫-೨೦ ಜನ ಶಿಷ್ಯರು ಇವರ ಮನೆಯಲ್ಲಿ ಭೋಜನ ಮಾಡಿ ವ್ಯಾಸಂಗ ಮಾಡುತ್ತಿದ್ದರು. ಆಗ ಮನೆಯಲ್ಲಿ ದಾರಿದ್ರ್ಯವಿದ್ದರೂ ಯಾಚನೆ ಮಾಡುವುದು ರಾಯರ ಜಾಯಮಾನಕ್ಕೆ ವಿರುದ್ಧವಾಗಿತ್ತು. ನವರಾತ್ರಿ ಮುಂತಾದ ಹಬ್ಬದ ದಿನಗಳಲ್ಲಿ ಗುರುಪುತ್ರರಿಗೂ, ಶಿಷ್ಯರಿಗೂ ಸಾದಾ ಭೋಜನ ಹೇಗೆ ಮಾಡಿಸುವದೆಂತು ಎಂದು ತಿಳಿದು ಎಲ್ಲರಿಗೂ ತಮ್ಮ ತಮ್ಮ ಊರುಗಳಿಗೆ ಹೋಗಿ ಬನ್ನಿರೆಂದು ಹೇಳುತ್ತಿದ್ದರು. ಆದರೆ ಅವರು ರಾಯರನ್ನು ಬಿಟ್ಟು ತಾವು ಒಬ್ಬರೇ ಹೋಗಲು ನಿರಾಕರಿಸುತ್ತಿದ್ದರು.

ಒಂದು ಸಲ ನವರಾತ್ರಿಯ ಮುಂದೆ ರಾಯರು ತಮ್ಮ ಶಿಷ್ಯಮಂಡಳಿ ಸಮೇತ ಶ್ರೀಲಕ್ಷ್ಮೀನಾರಾಯಣ ದೇವರ ದರ್ಶನಕ್ಕೆ ತೆರಳಿದರು. ಆ ದೇವಸ್ಥಾನದ ಎದುರಿನಲ್ಲಿಯೇ ಕಲೆಕ್ಟರರ ದಿವಾನರಾದ ನೀಲಕಂಠರಾಯರೆಂಬ ಇವರ ಪರಿಚಯಸ್ಥರಿದ್ದರು. ರಾಯರನ್ನು ನೀಲಕಂಠರಾಯರು ತಮ್ಮ ಮನೆಗೆ ಬರಮಾಡಿಕೊಂಡು ಗುಟ್ಟಾಗಿ ಅವರ ಶಿಷ್ಯರೊಬ್ಬರನ್ನು ಕರೆದು ನವರಾತ್ರಿ ಹಬ್ಬವನ್ನು ರಾಯರು ಇಷ್ಟು ಜನ ಶಿಷ್ಯರಿಗೆ ಹೇಗೆ ನಡೆಯಿಸುತ್ತಾರೆಂದು ಕೇಳಿದರು. ಆ ಶಿಷ್ಯ ಇದ್ದ ಸಂಗತಿಯನ್ನು ಹೇಳಿದನು. ನೀಲಕಂಠರಾಯರು ತಮ್ಮ ಮನೆಗೆ ರಾಯರು ತಿರುಗಿ ಮುಟ್ಟುವುದರೊಳಗಾಗಿ ೩ ತಿಂಗಳಿಗೆ ಆಗುವಷ್ಟು ಗ್ರಾಸವನ್ನು ಕೊಟ್ಟು ಕಳಿಸಿದ್ದರು. ಆದರಿಂದ ನವರಾತ್ರಿ ಹಬ್ಬವು ವಿಜೃಂಭಣೆಯಿಂದ ಜರುಗಿತು. ರಾಯರು ಇದೆಲ್ಲ ಬಾದರಾಯಣರ ಕೃಪೆ ಎಂದರು.

ಭಗವಂತರಾಯರ ಶಿಷ್ಯರಲ್ಲಿ ಮುಖ್ಯರಾದವರೆಂದರೆ ಸರ್ವಶ್ರೀ ಗೋವೇಕರ ವೆಂಕಟರಾವ್, ದ್ಯಾವಪ್ಪ ಬೇಟದೂರ, ಶೀನಪ್ಪ ಮಾನವಿ, ಕೌತಾಳ ಶ್ರೀನಿವಾಸರಾವ್, ಕಂದಿ ಸುಬ್ಬರಾವ್, ರೊಟ್ಟಿ ವೆಂಕಟಾಚಾರ್ಯರು.

## ಭಗವಂತರಾಯರು ರಚಿಸಿದ ಗ್ರಂಥಗಳು :

೧. ತತ್ವಸಂಖ್ಯಾನ ಟಿಪ್ಪಣಿ, ೨. ಶಬ್ದಪರಂಪರೋತ್ಪಾದವಾದ, ೩. ಭೇದೋಜ್ಜೀವನ ಟಿಪ್ಪಣಿ, ೪. ಪವಮಾನಸೂಕ್ತ ವ್ಯಾಖ್ಯಾನ, ೫. ನರಸಿಂಹಸ್ತುತಿ ವ್ಯಾಖ್ಯಾನ, ೬. ಬ್ರಹ್ಮ-ಸೂತ್ರ ಪೂರ್ವಪಕ್ಷ ಸಿದ್ಧಾಂತಯುಕ್ತಿ ಸಂಗ್ರಹ, ೭. ಬ್ರಹ್ಮಸೂತ್ರ ಪಂಚಿಕಾ, ೮. ವಿಷ್ಣುಪಂಚಕ ನಿರ್ಣಯ, ೯. ಭಾಗವತ ತಾತ್ಪರ್ಯ ಭಾವದೀಪ, ೧೦. ಬ್ರಹ್ಮಸೂತ್ರ ಭಾಷ್ಯಭಾವ ಪ್ರದೀಪ, ೧೧. ಶ್ರೀಹರಿವಾಯುಸ್ತುತಿ ಟಿಪ್ಪಣಿ, ೧೨. ಯಮಕ ಭಾರತ ಟಿಪ್ಪಣಿ, ೧೩.ಐತರೇಯ ಖಂಡಾರ್ಥ, ೧೪. ಬೃಹತೀ ಸಹಸ್ರ, ೧೫. ಬ್ರಹ್ಮಸೂತ್ರಾರ್ಥ ಸಂಗ್ರಹ, ೧೬. ಗುರುಪರಂಪರಾಸ್ತೋತ್ರ.

ಇವರು ಮುಖ್ಯವಾಗಿ ಬ್ರಹ್ಮಸೂತ್ರ ಭಾಷ್ಯಕ್ಕೆ ಸರಳವಾದ ಟಿಪ್ಪಣಿ ಬರೆದು ಶ್ರೀಹರಿಗುರುಗಳ ಅನುಗ್ರಹಕ್ಕೆ ಪಾತ್ರರಾಗಿ ಚಿರಸ್ಮರಣೀಯರಾಗಿದ್ದಾರೆ. ಇದೇ ಟಿಪ್ಪಣಿಯ ಮೇಲೆ ೧೯೫೩ರಲ್ಲಿ ಹಳೇ ಹುಬ್ಬಳ್ಳಿಯಲ್ಲಿ ಶ್ರೀಉತ್ತರಾದಿಮಠಾಧೀಶರಾದ ೧೦೮ ಶ್ರೀ ಶ್ರೀ ಸತ್ಯಪ್ರಮೋದತೀರ್ಥ ಶ್ರೀಪಾದಂಗಳವರು ಬ್ರಹ್ಮಸೂತ್ರಭಾಷ್ಯ ನೂರಿನ್ನೂರು ಜನ ಶಿಷ್ಯರಿಗೆ ಸುಮಾರು ಆರು ಗಂಟೆ ಅಸ್ಖಲಿತವಾಗಿ ಅರ್ಥಾನುವಾದ ಮಾಡಿ ಬಹು ವಿಜೃಂಭಣೆಯಿಂದ ಮಂಗಳ ಮಹೋತ್ಸವವನ್ನು ಮಾಡಿದ್ದು ಭಗವಂತರಾಯರ ಕೀರ್ತಿಗೆ ಮೆರಗು ಕೊಡುತ್ತದೆ.

ಇದೇ ಟಿಪ್ಪಣಿಯನ್ನನುಸರಿಸಿ ಶ್ರೀ ಭಕ್ರಿ ವೆಂಕೋಬಾಚಾರ್ಯರು ಅನೇಕ ಶಿಷ್ಯರಿಗೆ ಶಾಂತಿ ಕ್ರಮದಿಂದ ಪಾಠ ಹೇಳಿ ಕಡಪಾ ಜಿಲ್ಲಾ ಕವಕೂರು ಗುರುರಾಯರ (ಇವರೊಬ್ಬ ಶಿಷ್ಯರು) ಕಡೆಯಿಂದ ತೆಲಗು ಅಕ್ಷರ ಕನ್ನಡಾರ್ಥದಲ್ಲಿ ಭಾಷ್ಯದೀಪಿಕೆಯನ್ನು ಪ್ರಚುರ ಪಡಿಸಿದ್ದಾರೆ.

# ಚಾತುರ್ಮಾಸ್ಯ ವ್ರತ

ಲೇ : ವ್ಯಾಸನಕೆರೆ ಪ್ರಭಂಜನಾಚಾರ್ಯ

**('ನಂದನ' ನಾಮ ಸಂವತ್ಸರದ ಚಾತುರ್ಮಾಸ್ಯವು ೩೦-೦೭-೧೨ರಿಂದ ಪ್ರಾರಂಭ; ಈ ವ್ರತಕ್ಕೆ ಸಂಬಂಧಿಸಿದಂತಹ ಕೆಲವು ವಿವರಗಳನ್ನು ಇಲ್ಲಿ ನೀಡಲಾಗಿದೆ.)**

ಚಾತುರ್ಮಾಸ್ಯವ್ರತವು ಏಕಾದಶೀ, ಕೃಷ್ಣಾಷ್ಟಮೀ(ಜಯಂತಿ)ಗಳಂತೆ ಸರ್ವರಿಗೂ ಕಡ್ಡಾಯವಾಗಿ ವಿಹಿತವಾಗಿರುವ ವ್ರತ. ಆಷಾಢಶುಕ್ಲ ಏಕಾದಶೀ (ಶಯನೈಕಾದಶೀ)ಯಿಂದ ಕಾರ್ತಿಕ ಶುಕ್ಲದ್ವಾದಶೀ(ಉತ್ಥಾನಪ್ರಬೋಧ ದ್ವಾದಶೀ)ವರೆಗಿನ ನಾಲ್ಕುತಿಂಗಳ ಕಾಲವು ಪ್ರಧಾನವಾಗಿ **'ಚಾತುರ್ಮಾಸ್ಯ'** ಎನ್ನಿಸುತ್ತದೆ. ಈ ಕಾಲದಲ್ಲಿ ಶ್ರೀಮಹಾವಿಷ್ಣುವು (ಯೋಗ)ನಿದ್ರೆಯಲ್ಲಿರುವನು.

ಚಾತುರ್ಮಾಸ್ಯವು ಯತಿಗಳಿಗೆ ಒಂದೆಡೆಯೇ ವಾಸಿಸಲು ವಿಹಿತವಾದ ಕಾಲ. ಕಾಲಕ್ರಮದಲ್ಲಿ 'ಮಾಸ' ಎಂಬುದಕ್ಕೆ 'ಪಕ್ಷ' ಎಂಬ ಅರ್ಥವನ್ನು ಆಶ್ರಯಿಸಿ ನಾಲ್ಕು 'ಪಕ್ಷ' (ಎಂದರೆ ಎರಡು ತಿಂಗಳುಗಳು) ಮಾತ್ರ ಚಾತುರ್ಮಾಸ್ಯಕ್ಕೆ ಕೂಡುವ ಸಂಪ್ರದಾಯವು ಸಕಲಮಾಧ್ವಮಠಗಳಲ್ಲೂ ಬಂದಿದೆ.

ಈ ಕಾಲದ ನಾಲ್ಕುತಿಂಗಳುಗಳಲ್ಲಿ ಕ್ರಮವಾಗಿ ಶಾಕ(ಶಾಕವ್ರತ), ಮೊಸರು ಮತ್ತು ಅದರಿಂದ ಮಾಡಿದ ಪದಾರ್ಥಗಳು (ದಧಿವ್ರತ), ಹಾಲು ಮತ್ತು ಅದರಿಂದ ಮಾಡಿದ ಪದಾರ್ಥಗಳು(ಕ್ಷೀರವ್ರತ), ಮತ್ತು ದ್ವಿದಲ ಮತ್ತು ಬಹುಬೀಜಗಳಿಂದ ಕೂಡಿದ ಸಸ್ಯ ಹಾಗೂ ಧಾನ್ಯಗಳು(ದ್ವಿದಲವ್ರತ)ಇವುಗಳನ್ನು ತ್ಯಜಿಸಲೇ ಬೇಕು. ಈ ವಿಧಿಯು ಯತಿಗಳಿಗೆ ಮಾತ್ರವಲ್ಲದೆ ಇತರ ಸಕಲಆಶ್ರಮದವರಿಗೂ, ಬ್ರಾಹ್ಮಣಾದಿ ಸಕಲವರ್ಣಗಳ ಸ್ತ್ರೀ ಪುರುಷರಿಗೂ ಕಡ್ಡಾಯವಾಗಿ ವಿಹಿತವಾಗಿದೆ.

ಶಾಕವ್ರತದ ಲೋಪವು ಭಗವಂತನಿಗೆ ಶಲ್ಯತಾಡನ ಮಾಡಿದ ಪಾಪಕ್ಕೂ, ದಧಿವ್ರತದ ಲೋಪವು ಗೋಮಾಂಸ ಭಕ್ಷಣದ ಪಾಪಕ್ಕೂ, ಕ್ಷೀರವ್ರತದ ಲೋಪವು ಸುರಾಪಾನದ ಪಾಪಕ್ಕೂ, ದ್ವಿದಲ(ಬಹುಬೀಜ)ಭಕ್ಷಣವು ಕೃಮಿಭೋಜನ ಪಾತಕಕ್ಕೂ ಸಮವಾಗಿವೆ; ಚಾತುರ್ಮಾಸ್ಯವ್ರತವನ್ನು ಆಚರಿಸದಿದ್ದಲ್ಲಿ ಭಯಂಕರವಾದ ದುರ್ಗತಿಯು ತಪ್ಪಿದ್ದಲ್ಲ ಎಂದು ಶಾಸ್ತ್ರಗಳು ಸಾರುತ್ತಿವೆ.

ಈ ನಾಲ್ಕು ಮಾಸಗಳಿಗೆ ಕ್ರಮವಾಗಿ ಶ್ರೀಧರ, ಹೃಷೀಕೇಶ, ಪದ್ಮನಾಭ ಮತ್ತು ದಾಮೋದರ ಎಂಬ ಭಗವದ್ರೂಪಗಳು ನಿಯಾಮಕರೂಪಗಳಾಗಿವೆ.

ಈ ವ್ರತಗಳಿಗೆಲ್ಲ ಆರಂಭ ಮತ್ತು ಸಮಾಪನ ಮಂತ್ರಗಳಿದ್ದು ಅವುಗಳನ್ನು ತಪ್ಪದೆ ಆಯಾ ಕಾಲದಲ್ಲಿ ಪಠಿಸಬೇಕು.

**ಚೌಲ, ಉಪನಯನ, ವಿವಾಹ, ಗೃಹಪ್ರವೇಶ, ದೇವತಾಪ್ರತಿಷ್ಠೆ ಮೊದಲಾದ ಕಾರ್ಯಗಳನ್ನು ಚಾತುರ್ಮಾಸ್ಯಕಾಲದಲ್ಲಿ ಆಚರಿಸಕೂಡದು. ಆಗ ಆರಂಭಿಸುವ ಇಂತಹ ಯಾವ ಕಾರ್ಯವೂ 'ಸಫಲ' ಎನ್ನಿಸುವುದಿಲ್ಲ; ಮಂಗಲದಾಯಕವೂ ಆಗುವುದಿಲ್ಲ:**

ಸಮಸ್ತಮಂಗಲಾನಾಂ ಚ ದೇವತಾ ಚ ಜನಾರ್ದನಃ ।
ತಸ್ಮಿಂಸ್ತು ಶಯನಂ ಯಾತೇ ನೋದ್ವಾಹಾದಿಕ್ರಿಯಾ ಭವೇತ್ ॥
ಚೌಲೋಪನಯನೇ ಚೈವ ವಿವಾಹಾದ್ಯಂ ತ್ಯಜೇದ್ಬುಧಃ ।
ಅಜ್ಞಾನಾದ್ಯದಿ ಕುರ್ವಂತಿ ಮೃತಿಸ್ತೇಷಾಂ ನ ಸಂಶಯಃ ।
ಕಲ್ಯಾಣದೇವತಾದೃಷ್ಟಿಹೀನಾನಾಂ ಚ ಕುತಃ ಸುಖಮ್ ॥ – ಸ್ಕಂದಪುರಾಣ

'ಎಲ್ಲಾ ಮಂಗಳಗಳಿಗೂ ಅಧಿದೇವತೆ ಶ್ರೀಹರಿ, ಆತ ಪವಡಿಸಿದಾಗ (ಎಂದರೆ ಚಾತುರ್ಮಾಸ್ಯಕಾಲದಲ್ಲಿ) ಚೌಲ, ಉಪನಯನ, ವಿವಾಹಾದಿ ಕಾರ್ಯಗಳನ್ನು ಮಾಡಕೂಡದು; ತಿಳಿಯದೆ ಅವುಗಳನ್ನು ನಡೆಸಿದರೂ ಅಂತಹವರು ಮೃತರಾಗುತ್ತಾರೆ. ಮಂಗಳದೇವತೆಯ ದೃಷ್ಟಿ ಬೀಳದಿದ್ದಾಗ ಶುಭವಾಗುವುದು ಹೇಗೆ ತಾನೇ ಸಾಧ್ಯ !' ಎಂಬುದು ಇದರ ಭಾವ.

ಚಾತುರ್ಮಾಸ್ಯಕಾಲದಲ್ಲಿ ಅಪೇಕ್ಷೆ ಅರ್ಹತೆ ಇದ್ದವರು ಘೃತ, ಲವಣ, ತಾಂಬೂಲ ಇತ್ಯಾದಿ ಅನೇಕದ್ರವ್ಯಗಳ ತ್ಯಾಗರೂಪವಾದ ವಿಶೇಷವ್ರತಗಳನ್ನು ಸಹ ಆಚರಿಸಬಹುದು. ಅಂತಹ ವಿಶೇಷವ್ರತಗಳಿಗೆ ಪ್ರತ್ಯೇಕ ಫಲಗಳುಂಟು.

ಧಾರಣಪಾರಣ, ಪರಾಕ, ಲಕ್ಷಬತ್ತಿ, ಲಕ್ಷಪ್ರದಕ್ಷಿಣ, ಲಕ್ಷನಮಸ್ಕಾರ, ಗೋಪದ್ಮ ಇತ್ಯಾದಿ ಇತರ ಅನೇಕವ್ರತಗಳನ್ನು ಸಹ ಸಾಮರ್ಥ್ಯವಿದ್ದವರು ಈ ಕಾಲದಲ್ಲಿ ಆಚರಿಸಿ ವಿಶೇಷಪುಣ್ಯಕ್ಕೆ ಭಾಗಿಗಳಾಗಬಹುದು. ಏಕಾದಶೀ, ಕೃಷ್ಣಜಯಂತೀ, ಶಾಕವ್ರತ ಮೊದಲಾದ ಕಡ್ಡಾಯ ವ್ರತಗಳನ್ನು ಮಾಡದೆ ಇವುಗಳನ್ನು ಮಾತ್ರ ಮಾಡುವುದು ಎಂದಿಗೂ ಸಫಲವೆನ್ನಿಸದು.

ಅನೇಕವಿಧವಾದ ರೋಗಗಳ ಪರಿಹಾರಕ್ಕೂ, ಆರೋಗ್ಯದ ಸಂರಕ್ಷಣೆಗೂ ಈ ಚಾತುರ್ಮಾಸ್ಯವ್ರತವು ತುಂಬಾ ಅವಶ್ಯವಾಗಿದೆ. ಇದರ ಅನುಷ್ಠಾನ ಆರೋಗ್ಯಕ್ಕೆ ಹಾನಿಕರ ಎಂಬ ಕೆಲವರ ವಿಚಾರಕ್ಕೆ ಯಾವುದೇ ಆಧಾರವೂ ಇಲ್ಲ; ಅದು ಕೇವಲ ಭ್ರಾಂತಿ ಮಾತ್ರ. ನಾಲ್ಕು ತಿಂಗಳ ಕಾಲ ಒಂದಲ್ಲ ಒಂದು ರೀತಿಯಲ್ಲಿ ರುಚಿಕರವೆನ್ನಿಸುವ ಪದಾರ್ಥಗಳನ್ನು ಭಗವತ್ಪ್ರೀತಿಗೆಂದು ತ್ಯಜಿಸುವಂತೆ ಮಾಡುವ ಈ ವ್ರತವು ಕ್ರಮವಾಗಿ ಚತುರ್ವೇದೋ-ಪಲಕ್ಷಿತವಾದ ಸಕಲಶಾಸ್ತ್ರಗಳ ಅರ್ಥಜ್ಞಾನಕ್ಕೂ, ಧರ್ಮಾದಿ ಚತುರ್ವಿಧ ಪುರುಷಾರ್ಥಗಳ ಸಂಪಾದನೆಗೂ ಯಥೋಚಿತವಾಗಿ ರಾಜಮಾರ್ಗವಾಗಿದೆ ಎಂಬುದು ಇದರ ಸಾರ್ಥಕ್ಯ.

## ಚಾತುರ್ಮಾಸ್ಯ ವ್ರತಾರಂಭ ವಿಧಿ

ಪಂಚಗವ್ಯಂ ಪ್ರಾಶಯಿತ್ವಾ ಶುದ್ಧಿಂ ಕೃತ್ವಾ ತನೋರ್ದೃಢಮ್ ।
ಪೂಜಯಿತ್ವಾ ಯಥಾನ್ಯಾಯಂ ದೇವದೇವಂ ಜನಾರ್ದನಮ್ ॥

ವ್ರತಾನಾಂ ವಕ್ಷ್ಯಮಾಣಾನಾಂ ಸಂಕಲ್ಪಂ ವಿಧಿವಚ್ಚರೇತ್ ।
ನೈಮಿತ್ತಿಕಾನಾಂ ಕಾಮ್ಯಾನಾಂ ನಿತ್ಯಾನಾಂ ಚ ತಥೈವ ಚ ॥ – ಸ್ಕಂದಪುರಾಣ

(ಆಷಾಢಶುಕ್ಲದಶಮಿಯಂದು ಪ್ರಾತಃಸ್ನಾನಾದಿಗಳನ್ನು ಪೂರೈಸಿ ದೇವಪೂಜೆಯನ್ನು ಮಾಡಿದಮೇಲೆ) ಪಂಚಗವ್ಯವನ್ನು ಪ್ರಾಶನಮಾಡಿ ದೇಹಶುದ್ಧಿಯನ್ನು ಹೊಂದಬೇಕು. ಅನಂತರ ತಾನು ಕೈಗೊಳ್ಳಲಿರುವ ನಿತ್ಯನೈಮಿತ್ತಿಕವ್ರತಗಳ ಬಗ್ಗೆ ಸಂಕಲ್ಪ ಮಾಡಬೇಕು.

## ಚಾತುರ್ಮಾಸ್ಯದ ಸಂಕಲ್ಪಮಂತ್ರಗಳು :

ಸುಪ್ತೇ ತ್ವಯಿ ಜಗನ್ನಾಥ ಜಗತ್ ಸುಪ್ತಂ ಭವೇದಿದಮ್ ।
ವಿಬುದ್ಧೇ ಚ ವಿಬುದ್ಧ್ಯೇತ ಪ್ರಸನ್ನೋ ಮೇ ಭವಾಚ್ಯುತ ॥
ಚತುರೋ ವಾರ್ಷಿಕಾನ್ ಮಾಸಾನ್ ದೇವದೇವ ಜಗತ್ಪತೇ ।
ನಿರ್ವಿಘ್ನಂ ಸಿದ್ಧಿಮಾಯಾತು ಪ್ರಸಾದಾತ್ ತವ ಕೇಶವ ॥
ಗೃಹೀತೇಽಸ್ಮಿನ್ ವ್ರತೇ ದೇವ ಪಂಚತ್ವಂ ಯದಿ ಮೇ ಭವೇತ್ ।
ತದಾ ಭವೇತ್ ಸುಸಂಪೂರ್ಣಂ ಪ್ರಸಾದಾತ್ ತೇ ಜನಾರ್ದನ ॥

## ಆಷಾಢಶುಕ್ಲದ್ವಾದಶೀಯಂದು ಪಠಿಸಬೇಕಾದ ಶಾಕವ್ರತಸಂಕಲ್ಪಮಂತ್ರ:

ಶಾಕವ್ರತಂ ಮಯಾ ದೇವ ಗೃಹೀತಂ ಪುರತಸ್ತವ ।
ನಿರ್ವಿಘ್ನಂ ಸಿದ್ಧಿಮಾಯಾತು ಪ್ರಸಾದಾತ್ ತೇ ರಮಾಪತೇ ॥
ವಾಸುದೇವ ಶುಭೇ ಮಾಸೇ ಶಾಕವ್ರತಮನುತ್ತಮಮ್ ।
ತ್ವತ್ಪ್ರೀತ್ಯರ್ಥಂ ಕರಿಷ್ಯೇಽಹಂ ನಿರ್ವಿಘ್ನಂ ಕುರು ಮಾಧವ ॥

## ಶಾಕವ್ರತಸಮರ್ಪಣ ಮಂತ್ರ (ಶ್ರಾವಣ ಶುಕ್ಲ ದ್ವಾದಶೀ):

ವಾಸುದೇವ ನಮಸ್ತುಭ್ಯಂ ಪ್ರಥಮೇ ಮಾಸಿ ಯತ್ಕೃತಮ್ ।
ಶಾಕವ್ರತಂ ಮಯಾ ತೇನ ಸಂತುಷ್ಟೋ ಭವ ಮಾಧವ ॥

ಶ್ರಾವಣಶುಕ್ಲ ಏಕಾದಶಿಯಂದು ಶಾಕಗಳನ್ನು ದಾನ ಮಾಡಿ ದ್ವಾದಶಿಯಂದು ಅವುಗಳನ್ನು ಶ್ರೀಹರಿಗೆ ಸಮರ್ಪಿಸಿ ಸ್ವೀಕರಿಸಬೇಕು ಎಂಬುದು ವಿಧಿ :

## ಶಾಕದಾನಮಂತ್ರ (ಶ್ರಾವಣ ಶುಕ್ಲ ದ್ವಾದಶೀ):

ಉಪಾಯನಮಿದಂ ದೇವ ವ್ರತಸಂಪೂರ್ತಿಹೇತವೇ ।
ಶಾಕಂ ತು ದ್ವಿಜವರ್ಯಾಯ ಸಹಿರಣ್ಯಂ ದದಾಮ್ಯಹಮ್ ॥

## ದಧಿವ್ರತ ಸಂಕಲ್ಪ ಮಂತ್ರ (ಶ್ರಾವಣ ಶುಕ್ಲ ದ್ವಾದಶೀ):

ದಧಿ ಭಾದ್ರಪದೇ ಮಾಸಿ ವರ್ಜಯಿಷ್ಯೇ ಸದಾ ಹರೇ ।
ಇಮಂ ಕರಿಷ್ಯೇ ನಿಯಮಂ ನಿರ್ವಿಘ್ನಂ ಕುರು ಕೇಶವ ॥
ಸಂಕರ್ಷಣಾರವಿಂದಾಕ್ಷ ಕರಿಷ್ಯೇಽಹಂ ದಧಿವ್ರತಮ್ ।
ದ್ವಿತೀಯೇ ಮಾಸಿ ದೇವೇಶ ನಿರ್ವಿಘ್ನಂ ಕುರು ಮೇ ಪ್ರಭೋ ॥

## ದಧಿವ್ರತ ಸಮರ್ಪಣಮಂತ್ರ (ಭಾದ್ರಪದ ಶುಕ್ಲ ದ್ವಾದಶೀ):

ಸಂಕರ್ಷಣ ನಮಸ್ತುಭ್ಯಂ ಶ್ರಾವಣೇ ಮತ್ಕೃತೇನ ಚ ।
ದಧಿವ್ರತೇನ ದೇವೇಶ ಪ್ರೀತೋ ಭವ ಜನಾರ್ದನ ॥

*****

# ಧಾರಣ-ಪಾರಣವ್ರತ

**ಆದೌ ಮಾಸಿ ತಥಾ ಚಾಂತೇ ಚಾತುರ್ಮಾಸ್ಯೇ ತ್ವಥಾಪಿ ವಾ ।**
**ಏಕಸ್ಮಿನ್ ಧಾರಣಂ ಕಾರ್ಯಂ ಪಾರಣಂ ಚ ತಥಾಽಪರೇ ॥**
**ಉಪವಾಸೋ ಧಾರಣಂ ಸ್ಯಾತ್ ಪಾರಣಂ ಭೋಜನಂ ಭವೇತ್ ।**
**ಅಷ್ಟೋತ್ತರಶತಂ ದದ್ಯಾದರ್ಘ್ಯಾನ್ ದೇವಾಯ ತನ್ಮನಾಃ ॥**
**ಸಮಾಪ್ತೇ ಮಾಸಿ ರಾಜೇಂದ್ರ ಕುರ್ಯಾದುದ್ಯಾಪನಂ ಬುಧಃ ॥**

**– ಭವಿಷ್ಯೋತ್ತರಪುರಾಣ**

ಚಾತುರ್ಮಾಸ್ಯದ ಮೊದಲ ಅಥವಾ(ಮತ್ತು) ಕೊನೆಯ ತಿಂಗಳಲ್ಲಿ ಅಥವಾ ನಾಲ್ಕೂ ತಿಂಗಳಲ್ಲಿ ಒಂದು ಉಪವಾಸ, ಮಾರನೇದಿನ ಪಾರಣವನ್ನು ಮಾಡುವ ವ್ರತವೇ 'ಧಾರಣ ಪಾರಣ ವ್ರತ'; ಭಗವಂತನಿಗೆ ನೂರೆಂಟು ಅರ್ಘ್ಯವನ್ನು ಸಹ ಈ ವ್ರತದಲ್ಲಿ ಕೊಡಬೇಕು; ಪ್ರತಿ ತಿಂಗಳೂ ಅಥವಾ ಒಟ್ಟಾಗಿ ಒಂದು ಬಾರಿ ಉದ್ಯಾಪನೆಯನ್ನು ಸಹ ಮಾಡಬೇಕು.

# ಲಕ್ಷಪ್ರದಕ್ಷಿಣವ್ರತ

**ಚಾತುರ್ಮಾಸ್ಯೇ ತು ಸಂಪ್ರಾಪ್ತೇ ಕುರ್ಯಾಲ್ಲಕ್ಷಪ್ರದಕ್ಷಿಣಮ್ ।**
**ಸ್ವಕೃತಂ ಪಾಪಮುಚ್ಚಾರ್ಯ ಪಶ್ಚಾತ್ತಾಪಪುರಃಸರಃ ॥**
**ಆಷಾಢ್ಯಾಂ ಚ ಸಮಾರಭ್ಯ ಕಾರ್ತಿಕ್ಯಾಂ ತು ಜಿತೇಂದ್ರಿಯಃ ।**
**ಲಕ್ಷಂ ಸಮಾಪ್ಯ ಪಶ್ಚಾತ್ತು ಕುರ್ಯಾದುದ್ಯಾಪನಂ ವ್ರತೀ ॥**

**– ವಿಷ್ಣುಧರ್ಮೋತ್ತರಪುರಾಣ**

**ಸರ್ವಪಾಪವಿನಾಶಾರ್ಥಂ ನಾರೀಭಿಃ ಪುರುಷೈರಪಿ ।**
**ಪ್ರದಕ್ಷಿಣಾಃ ಪ್ರಕರ್ತವ್ಯಾ ಯಾವದುದ್ಬೋಧಿನೀ ಭವೇತ್ ॥**
**ಲಕ್ಷಪ್ರದಕ್ಷಿಣಂ ಕೃತ್ವಾ ಅಂತೇ ಚೋದ್ಯಾಪನಂ ಚರೇತ್ ॥**

**– ಭವಿಷ್ಯೋತ್ತರಪುರಾಣ**

ಚಾತುರ್ಮಾಸ್ಯಕಾಲದಲ್ಲಿ ಈ ಲಕ್ಷಪ್ರದಕ್ಷಿಣವ್ರತವನ್ನು ಆಚರಿಸಬೇಕು. ಆಷಾಢಮಾಸ-ದಲ್ಲಿ ಪ್ರಾರಂಭಿಸಿ ಕಾರ್ತಿಕದವರೆಗೂ, ತಾನು ಮಾಡಿರುವ ಪಾಪಗಳನ್ನು ಪಶ್ಚಾತ್ತಾಪ-ಪೂರ್ವಕ ಹೇಳಿಕೊಂಡು, ಲಕ್ಷಪ್ರದಕ್ಷಿಣವನ್ನು ಪೂರೈಸಿ ಅನಂತರ ಉದ್ಯಾಪನ ಮಾಡಬೇಕು.

## ಪ್ರದಕ್ಷಿಣ ಮಂತ್ರಃ

**ಅನಂತಾವ್ಯಯವಿಷ್ಣೋ ಶ್ರೀಲಕ್ಷ್ಮೀನಾರಾಯಣ ಪ್ರಭೋ ।**
**ಜಗದೀಶ ನಮಸ್ತುಭ್ಯಂ ಪ್ರದಕ್ಷಿಣ ಪದೇ ಪದೇ ॥ – ಭವಿಷ್ಯೋತ್ತರಪುರಾಣ**

## ಉದ್ಯಾಪನವಿಧಿಃ

ಉಪವಾಸಃ ಪ್ರಕರ್ತವ್ಯೋ ಹ್ಯಧಿವಾಸನವಾಸರೇ ।
ಸೌವರ್ಣೀಂ ಪ್ರತಿಮಾಂ ಕೃತ್ವಾ ವಿಷ್ಣೋರಮಿತತೇಜಸಃ ।
ಗರುಡೇನ ಸಮಾಯುಕ್ತಾಂ ಸ್ಥಾಪಯೇತ್ಕಲಶೋಪರಿ ।
ಆಚಾರ್ಯಂ ವರಯಿತ್ವಾ ತು ಋತ್ವಿಜಶ್ಚ ನಿಮಂತ್ರಯೇತ್ ।
ತತಶ್ಚ ವಿಷ್ಣುಗಾಯತ್ರ್ಯಾ ತದ್ದಶಾಂಶೇನ ವಾಗ್ಯತಃ ।
ಪಾಯಸಂ ಜುಹುಯಾತ್ತದ್ವದಯುತಂ ತಿಲಸರ್ಪಿಷಾ ।
ಹುತ್ವಾ ಸ್ವಿಷ್ಟಕೃತಂ ಪಶ್ಚಾದ್ದದ್ಯಾದ್ದಾನಾನ್ಯನೇಕಶಃ ।
ಕಾರ್ಪಾಸಂ ಲವಣಂ ಚೈವ ಗಾಮೇಕಾಂ ಚ ಪಯಸ್ವಿನೀಮ್ ।
ಆಚಾರ್ಯಾಯ ಸಪೀಠಾಂ ತಾಂ ಪ್ರತಿಮಾಂ ಚ ನಿವೇದಯೇತ್ ।
ಬ್ರಾಹ್ಮಣಾನ್ ಭೋಜಯೇತ್ಪಶ್ಚಾತ್ಪಂಚವಿಂಶತಿಸಂಖ್ಯಕಾನ್ ॥

– ಭವಿಷ್ಯೋತ್ತರಪುರಾಣ

ಗರುಡಾರೂಢ ನಾರಾಯಣನ ಸುವರ್ಣಪ್ರತಿಮಾದಾನ, ವಿಷ್ಣುಗಾಯತ್ರಿಯಿಂದ ಪಾಯಸಹೋಮ, ಗೋದಾನ ಮೊದಲಾದ ಅನೇಕ ದಾನಗಳು ಹಾಗೂ ಇಪ್ಪತ್ತೈದು ಬ್ರಾಹ್ಮಣದಂಪತಿಗಳ ಭೋಜನ ಇವು ಉದ್ಯಾಪನದ ಮುಖ್ಯ ಕಾರ್ಯಗಳು.

## ಲಕ್ಷಪ್ರದಕ್ಷಿಣ ವ್ರತದ ಫಲ

ಬ್ರಹ್ಮಹತ್ಯಾದಿಪಾಪೇಷು ಸಂಕರೀಕರಣೇಷು ಚ ।
ಜಾತಿಭ್ರಂಶಕರೇಷ್ವೇವಮಭಕ್ಷ್ಯಭಕ್ಷಣೇಷು ಚ ॥
ಹರಿಣಾ ನಿರ್ಮಿತಂ ಪೂರ್ವಂ ವ್ರತಂ ಲಕ್ಷಪ್ರದಕ್ಷಿಣಮ್ ।
ಸರ್ವೇಷಾಮಪಿ ಪಾಪಾನಾಂ ಮೂಲಾದುತ್ಕೃಂತನಂ ಪರಮ್ ।
ಪಾಪಾಂಧಕಾರನಾಶಾಯ ಪಾಪೇಂಧನದವಾನಲಮ್ ॥

– ಭವಿಷ್ಯೋತ್ತರಪುರಾಣ

ಬ್ರಹ್ಮಹತ್ಯಾದಿ ಪಾಪಗಳು, ವರ್ಣಸಂಕರಾದಿ ದೋಷಗಳು, ಪಾತಿತ್ಯಕ್ಕೆ ಕಾರಣವಾಗುವ ಪಾಪಗಳು, ಅಭಕ್ಷ್ಯಭಕ್ಷ್ಯಣರೂಪ ಪಾಪಗಳು, ಮೊದಲಾದ ಸಕಲಪಾಪಗಳ ನಾಶಕ್ಕೆ ಸಾಧನವೆಂಬುದಾಗಿ ಈ ಲಕ್ಷಪ್ರದಕ್ಷಿಣವ್ರತವು ಮಹಾವಿಷ್ಣುವಿನಿಂದ ವಿಹಿತವಾಗಿದೆ; ಇದು ಪಾಪವೆಂಬ ಕತ್ತಲೆಯನ್ನು ಪರಿಹರಿಸುವ, ಪಾಪಗಳನ್ನೆಲ್ಲ ಭಸ್ಮವಾಗಿಸುವ ಅಪೂರ್ವ-ವ್ರತವಾಗಿದೆ.

ಏವಂ ಕೃತ್ವಾ ವ್ರತಮಿದಂ ಪವಿತ್ರಂ ಪಾಪನಾಶನಮ್ ।
ಪೂರ್ವಜನ್ಮಾರ್ಜಿತೈಃ ಪಾಪೈರಿಹ ಜನ್ಮಾರ್ಜಿತೈರಪಿ ॥
ಆಗಾಮಿಜನ್ಮಭಿಶ್ಚಾಪಿ ಮುಚ್ಯತೇ ನಾತ್ರ ಸಂಶಯಃ ॥ –ಭವಿಷ್ಯೋತ್ತರಪುರಾಣ

ಪವಿತ್ರವಾದ ಈ ವ್ರತದ ಅನುಷ್ಠಾನದಿಂದ, ಹಿಂದಿನ ಜನ್ಮಗಳಲ್ಲಿ ಮಾಡಿದ ಪಾಪಗಳೂ, ಈ ಜನ್ಮದಲ್ಲಿ ಮಾಡಿದ ಪಾಪಗಳೂ ಮತ್ತು ಮುಂದಿನ ಜನ್ಮದಲ್ಲಿ ಮಾಡುವ ಪಾಪಗಳೂ ಸಹ ನಿಶ್ಚಿತವಾಗಿಯೂ ಪರಿಹಾರವಾಗುತ್ತವೆ(ಮುಂದಿನ ಜನ್ಮದಲ್ಲಿ ಪಾಪಮಾಡುವ ಪ್ರಸಂಗವೇ ಒದಗುವುದಿಲ್ಲ).

******

# ಗೋಪದ್ಮವ್ರತ

**ಆಷಾಢಶುಕ್ಲಪಕ್ಷೇ ತು ಏಕಾದಶ್ಯಾಂ ವಿಶೇಷತಃ ।**
**ತದಾರಭ್ಯ ಚ ಕಾರ್ತಿಕ್ಯಾ ದ್ವಾದಶ್ಯಂತಂ ವ್ರತಂ ಚರೇತ್ ॥**
**ಗೋಷ್ಠೇऽಥವಾऽಪಿ ಗೋಸ್ಥಾನೇ ಗೋಮಯೇನೋಪಲಿಪ್ಯ ಚ ।**
**ತ್ರಯಸ್ತ್ರಿಂಶತ್ತು ಪದ್ಮಾನಿ ಗಂಧಪುಷ್ಪೈಃ ಪ್ರಪೂಜಯೇತ್ ॥**
**ತತ್ಸಂಖ್ಯಾಕಾನಿ ಚಾರ್ಘ್ಯಾಣಿ ನಮಸ್ಕಾರಪ್ರದಕ್ಷಿಣಾಃ ।**
**ತತ್ಸಂಖ್ಯಾನಿ ಹ್ಯಪೂಪಾನಿ ಬ್ರಾಹ್ಮಣಾಯ ನಿವೇದಯೇತ್ ॥–ಭವಿಷ್ಯೋತ್ತರಪುರಾಣ**

ಆಷಾಢಮಾಸದ ಶುಕ್ಲ ಪಕ್ಷದ ಏಕಾದಶಿಯಂದು ಪ್ರಾರಂಭಿಸಿ ಕಾರ್ತಿಕ ಶುಕ್ಲ ದ್ವಾದಶಿಯವರೆಗೆ ಈ ಗೋಪದ್ಮವ್ರತವನ್ನು ಆಚರಿಸಬೇಕು; ಪ್ರತಿನಿತ್ಯ ಗೋಷ್ಠ ಅಥವಾ ಗೋವುಗಳು ನೆಲೆಸಿರುವ ಸ್ಥಳಗಳಲ್ಲಿ ಗೋಮಯದಿಂದ ಸಾರಿಸಿ ಗೋವಿನ ಚಿತ್ರವನ್ನು ಬರೆದು ಅದರ ಮೇಲೆ ೩೩ ಸಂಖ್ಯೆಯ ಪದ್ಮಗಳನ್ನು ಬರೆದು ಗಂಧಪುಷ್ಪಗಳಿಂದ ಪೂಜಿಸಬೇಕು; ಅಷ್ಟೇ ಸಂಖ್ಯೆಯಲ್ಲಿ ಅರ್ಘ್ಯ, ಪ್ರದಕ್ಷಿಣ, ನಮಸ್ಕಾರಗಳನ್ನು ಮಾಡ-ಬೇಕು; ಅಷ್ಟೇ ಸಂಖ್ಯೆಯಲ್ಲಿ ಅಪೂಪಗಳನ್ನು ಬ್ರಾಹ್ಮಣರಿಗೆ ದಾನ ಮಾಡಬೇಕು.

## ಅರ್ಘ್ಯ ಮಂತ್ರಃ

**ಅಷ್ಟದ್ರವ್ಯಸಮಾಯುಕ್ತಂ ಸ್ವರ್ಣಪಾತ್ರಸ್ಥಿತಂ ಜಲಮ್ ।**
**ಅರ್ಘ್ಯಂ ಗೃಹಾಣ ದೇವೇಶ ಭಕ್ತಾನಾಮಭಯಪ್ರದ ॥**

## ವ್ರತದ ಅವಧಿ – ಫಲ ಇತ್ಯಾದಿ

**ಪಂಚವರ್ಷಮಿದಂ ಕಾರ್ಯಂ ಪಶ್ಚಾದುದ್ಯಾಪನಂ ಭವೇತ್ ।**
**ಏತದ್ವ್ರತಂ ನರಾ ನಾರ್ಯಃ ಕುರ್ಯುರಿಷ್ಟಂ ಲಭಂತಿ ವೈ ॥**
**(ವ್ರತಸ್ಯಾಸ್ಯ ಪ್ರಭಾವೇಣ ರಾಜ್ಯಸೌಭಾಗ್ಯಸಂಪದಃ ।**
**ಪುತ್ರಪೌತ್ರಾದಿಸೌಭಾಗ್ಯಂ ಭುಕ್ತ್ವಾ ಮೋಕ್ಷಮವಾಪ್ನುಯಾತ್ ॥)**

**– ಭವಿಷ್ಯೋತ್ತರಪುರಾಣ**

ಈ ವ್ರತವನ್ನು ಐದು ವರ್ಷಗಳ ಕಾಲ ಆಚರಿಸಿ ಅನಂತರ ಉದ್ಯಾಪನ ಮಾಡಬೇಕು; ಇದನ್ನು ಆಚರಿಸುವ ಸ್ತ್ರೀಪುರುಷರೆಲ್ಲರೂ ಪುತ್ರಪೌತ್ರಾದಿ ಅಭೀಷ್ಟವನ್ನು ಹೊಂದಿ ಕೊನೆಗೆ ಜ್ಞಾನದ್ವಾರಾ ಮೋಕ್ಷವನ್ನು ಪಡೆಯುವರು.

******

# ಶ್ರೀಮದಾಚಾರ್ಯರ ಕಾಲನಿರ್ಣಯದಲ್ಲಿ ಸೂರ್ಯಗ್ರಹಣದ ಪಾತ್ರ

**(ಹಿಂದಿನ ಸಂಚಿಕೆಯಿಂದ ಮುಂದುವರೆದುದು...)**

**– ಜಯಂತ ವ್ಯಾಸನಕೆರೆ**

ಕಳೆದ ಸಂಚಿಕೆಯಲ್ಲಿ ಇದೇ ಶೀರ್ಷಿಕೆಯಡಿಯಲ್ಲಿ ಕೇವಲ ಸೂರ್ಯಗ್ರಹಣದ ಮಾಹಿತಿಯಿಂದ ಶ್ರೀಮದಾಚಾರ್ಯರ ಕಾಲನಿರ್ಣಯವನ್ನು ನಿರವಕಾಶವಾಗಿ ಮಾಡ-ಲಾಗುವುದಿಲ್ಲವೆಂದು ಸಮರ್ಥಿಸಿ, ಆ ಕಾಲವು ಕ್ರಿ.ಶ. 1200–1280 ಎನ್ನುವುದಕ್ಕೆ ಸೂರ್ಯಗ್ರಹಣದ ಆಧಾರದ ಮೇಲೆಯೇ ಸಂಭಾವನೆಯೊಂದನ್ನು ಕೊಡಲಾಗಿತ್ತು. ಇದೇ ವಿಷಯವಾಗಿ ಇನ್ನೂ ಕೆಲವು ಸಂಭಾವನೆಗಳನ್ನು ಈ ಲೇಖನದಲ್ಲಿ ಕೊಡಲಾಗಿದೆ.

**ಸಂಭಾವನೆ : ಗ್ರಹಣದ ಸಮಯ**

ಸೂರ್ಯಗ್ರಹಣಪ್ರಸಂಗವು ಸುಮಧ್ವವಿಜಯದ ಅಂತಿಮಸರ್ಗದಲ್ಲಿ ಸುಮಾರು 15 ಶ್ಲೋಕಗಳಲ್ಲಿ ವರ್ಣಿತವಾಗಿದೆ. ಆ ಪ್ರಸಂಗದಲ್ಲಿ ಹೇಳಲಾದ ಐತರೇಯಶ್ರುತಿಯ ವ್ಯಾಖ್ಯಾನವು ಗ್ರಹಣ ಹಿಡಿದ ಸಮಯದಲ್ಲೇ ನಡೆದದ್ದು ಎಂಬುದಾಗಿ ಶ್ರೀರಾಘ-ವೇಂದ್ರಸ್ವಾಮಿಗಳ ಪೂರ್ವಾಶ್ರಮದ ಕೃತಿಯಾದ ಗೂಢಭಾವಪ್ರಕಾಶಿಕೆಯಿಂದ ತಿಳಿಯುತ್ತದೆ (ಹಿಂದಿನ ಸಂಚಿಕೆಯನ್ನು ನೋಡಿ). ಇದೇ ಪ್ರಮಾಣದಿಂದಲೇ ಶ್ರೀಮದಾ-ಚಾರ್ಯರು ಸಮುದ್ರಸ್ನಾನ ಮಾಡಿದ **ಬಳಿಕ** ವ್ಯಾಖ್ಯಾನ ಮಾಡಿದರೆಂಬುದೂ ತಿಳಿಯುತ್ತದೆ. ಇಷ್ಟರಿಂದ ಸೂರ್ಯಗ್ರಹಣದ ಪ್ರಸಂಗವನ್ನು ಹೀಗೆ ಕಲ್ಪಿಸಿಕೊಳ್ಳಬಹುದು :

- ಕಣ್ವತೀರ್ಥದಲ್ಲಿ ಮಿಂದ ಎಲ್ಲ ಜನರೊಂದಿಗೆ ಸಮುದ್ರದತ್ತ ಪಯಣ – ಶ್ಲೋಕ 10, 11.
- (ಗ್ರಹಣಸ್ಪರ್ಶನಿಮಿತ್ತ) ಸಮುದ್ರಸ್ನಾನ – ಗೂಢಭಾವಪ್ರಕಾಶಿಕಾ.
- ಸ್ವಸ್ವಯೋಗ್ಯತಾನುಸಾರ ಜನರು ಶ್ರೀಮದಾಚಾರ್ಯರನ್ನು ಕಂಡದ್ದು – ಶ್ಲೋಕ 12.
- (ಗ್ರಹಣಸಮಯದಲ್ಲಿ ಉಕ್ಕೇರಿದ) ಸಮುದ್ರದ ವರ್ಣನೆ – ಶ್ಲೋಕ 13, 14.
- ‘ಜಿತಸಿಂಧುರಾಜ’ರಾದ ಭಾಷ್ಯಕಾರರು – ಶ್ಲೋಕ 15.
- (ಗ್ರಹಣಸಮಯದಲ್ಲಿ) ಐತರೆಯಶ್ರುತಿಯ ಸುದೀರ್ಘ–ಸುಶ್ರಾವ್ಯ–ವ್ಯಾಖ್ಯಾನವೈಖರಿ – ಶ್ಲೋಕ 16, 17, 18 ಹಾಗೂ ಗೂಢಭಾವಪ್ರಕಾಶಿಕಾ.
- (ಗ್ರಹಣಮೋಕ್ಷನಿಮಿತ್ತ) ಸಮುದ್ರಸ್ನಾನ – ಶ್ಲೋಕ 19.
- ಸಮುದ್ರದ ಆರ್ಭಟಕ್ಕೆ ಉರುಳಿದ ಸಬಾಲವೃದ್ಧ ಜನಸ್ತೋಮ – ಶ್ಲೋಕ 20.
- ಶ್ರೀಮದಾಚಾರ್ಯರೂ ಹಾಗೆ ಉರುಳುವರೆಂಬ ಕುಹಕಿಗಳ ಕುತೂಹಲ – ಶ್ಲೋಕ 21.
- ಸಮುದ್ರದೊಂದಿಗೆ ಆ ಕುತೂಹಲವನ್ನೂ ತಣ್ಣಗಾಗಿಸಿದ ಶ್ರೀಮದಾಚಾರ್ಯರು –

ಶ್ಲೋಕ 22, 23, 24.

ಈ ಘಟನಾವಳಿಯನ್ನು ಮತ್ತೊಮ್ಮೆ ನೋಡಿ, ಮಗದೊಮ್ಮೆ ಕಲ್ಪಿಸಿಕೊಳ್ಳಿ. ಪ್ರಶ್ನೆ-ಯೊಂದು ತಾನೇ ಉದ್ಭವಿಸುತ್ತದೆ : ಅಂದು ಸಮುದ್ರಸ್ನಾನ ನಡೆದದ್ದು ಎರಡು ಬಾರಿ : ಮೊದಲನೆಯದು ಗ್ರಹಣಸ್ಪರ್ಶವಾದಾಗ, ಮತ್ತೊಂದು ಗ್ರಹಣಮೋಕ್ಷವಾದಾಗ. ಎರಡೂ ಬಾರಿ ಸಮುದ್ರವು ಸಂಕ್ಷೋಭೆಗೊಂಡಿತ್ತು. ಆದರೆ, ಎರಡನೆಯ ಬಾರಿ ಅಸಜ್ಜನರಿಗಿದ್ದ ದುಷ್ಕುತೂಹಲವು ಮೊದಲ ಸ್ನಾನದ ಸಂದರ್ಭದಲ್ಲಿ ಕಾಣುವುದೇ ಇಲ್ಲ ! ಸ್ಪರ್ಶಕಾಲದಲ್ಲಿ ಅವರ ಸ್ವಭಾವವೇನು ಸಾತ್ವಿಕವಾಗಿತ್ತೇ ? ಅಂತಹವರು ಸ್ಪರ್ಶಕಾಲದಲ್ಲಿ ಇರಲೇ ಇಲ್ಲ ; ಮೋಕ್ಷದ ವೇಳೆಗಷ್ಟೇ ಬಂದಿದ್ದರೆನ್ನುವುದೂ ಶ್ಲೋಕ 12ಕ್ಕೆ ವಿರುದ್ಧ. ಅಷ್ಟೇಕೆ? ಗ್ರಹಣ-ಮೋಕ್ಷನಿಮಿತ್ತ-ಸಮುದ್ರಸ್ನಾನ-ಸಂದರ್ಭಕ್ಕೆ ಐದಾರು ಶ್ಲೋಕಗಳನ್ನು ಮೀಸಲಿಟ್ಟ ಶ್ರೀನಾರಾಯಣಪಂಡಿತಾಚಾರ್ಯರು ಗ್ರಹಣಸ್ಪರ್ಶನಿಮಿತ್ತ-ಸಮುದ್ರಸ್ನಾನದ ವಿಚಾರ-ವನ್ನೇ ಎತ್ತುವುದಿಲ್ಲ!

ಈ ದಿವ್ಯಮೌನವನ್ನು ತಾಳಿರುವ ರಹಸ್ಯವೇನು?

ಒಂದು ಪ್ರಧಾನ ಸಾಧ್ಯತೆ ಹೀಗಿದೆ : ಅದೊಂದು **ಗ್ರಸ್ತೋದಯ** ಗ್ರಹಣ-ವಾಗಿರಬೇಕು. ಎಂದರೆ, ಗ್ರಹಣಸ್ಪರ್ಶ ಕಾಣುವುದಿಲ್ಲ; ಸೂರ್ಯಹುಟ್ಟುವ ವೇಳೆಗಾಗಲೇ ಗ್ರಹಣಸ್ಪರ್ಶವಾಗಿರುತ್ತದೆ. ಗ್ರಸ್ತೋದಯಗ್ರಹಣದಲ್ಲಿ ಪರ್ವಕಾಲ ಆರಂಭವಾಗುವುದು ಸೂರ್ಯೋದಯವಾದಾಗ. ಸ್ಪರ್ಶನಿಮಿತ್ತ ಸ್ನಾನವೂ ಆಗಲೇ. ಪಶ್ಚಿಮಸಮುದ್ರದಲ್ಲಿ ಸಾಮಾನ್ಯದಿನಗಳಲ್ಲೇ ಸೂರ್ಯೋದಯದ ವೇಳೆಗೆ ಇನ್ನೂ ಸಂಪೂರ್ಣ ಬೆಳಕು ಹರಿದಿರುವುದಿಲ್ಲ. ಮೇಲಾಗಿ ಆ ವೇಳೆಯಲ್ಲಿ ದೃಶ್ಯತ್ವವು ಮಳೆ-ಮಂಜು-ಮೋಡಗಳಿಗೆ ಹೆಚ್ಚು ಈಡಾಗುವುದು. ಸಾಲದೆಂಬಂತೆ ಗ್ರಹಣ ಬೇರೆ. ಹೀಗಾಗಿ ಜನಸಾಗರದ ನಡುವೆ **ಮಂದಬೆಳಕಿನ** ಕಾರಣದಿಂದ ಮಂದಮತಿಗಳಿಗೆ ಕಾತರವಿದ್ದರೂ ಪರೀಕ್ಷೆಗೆ ಸೂಕ್ತ ಅವಕಾಶ ದೊರಕಿರಲಾರದು.

''ಸಂಘಾತೈರಧಿಕಥ(ಫ)ನೈರಲಙ್ಕೃತಾಧ್ವಾ ಶಿಷ್ಯಾಣಾಂ ಯತಮನಸಾಮುತೇತ-ರೇಷಾಮ್ । ಯತ್ರಾಮಾ ವಸತಿ ತಿಥಾವಿನೇನ ಚಂದ್ರಸ್ತತ್ರಾಸೌ ಸಕಲಮತಿಃ ಸಸಾರ ಸಿಂಧುಮ್ ॥'' (ಶ್ಲೋಕ 10) ಎಂಬುವುದು ಶ್ರೀಮದಾಚಾರ್ಯರು ಕಣ್ವತೀರ್ಥದಿಂದ ಸಮುದ್ರಕ್ಕೆ ತೆರಳಿದ್ದನ್ನು ವರ್ಣಿಸುವ ಶ್ಲೋಕ. ಇದರ ಸಾಮಾನ್ಯಭಾವ 'ಸರ್ವಜ್ಞರಾದ ಶ್ರೀಮದಾಚಾರ್ಯರು ಯಾವ ತಿಥಿಯಲ್ಲಿ ಚಂದ್ರನು ಸೂರ್ಯನೊಂದಿಗೆ ವಾಸಿಸು-ತ್ತಾನೋ ಆ ತಿಥಿಯಂದು ವಾದಕಥೆಯಲ್ಲಿ ತೊಡಗಿದ್ದ ಸಂಭ್ರಮದಿಂದ ಕೂಡಿದ ಯತಿ-ಗೃಹಸ್ಥಾದಿ ಶಿಷ್ಯರ ಸಮೂಹಗಳೊಂದಿಗೆ ಮಾರ್ಗಕ್ಕೆ ಶೋಭೆನೀಡುವವರಾಗಿ ಸಮುದ್ರಕ್ಕೆ ತೆರಳಿದರು' ಎಂದು. ಆದರೆ ಅಂದಿನ ಗ್ರಹಣವು ಗ್ರಸ್ತೋದಯವೆಂದಿಟ್ಟುಕೊಂಡಲ್ಲಿ ಮಾತ್ರ ಪೂರ್ವೋತ್ತರಾರ್ಧಗಳಿಗೆ ಲಭಿಸುವ ವಿಶೇಷಸಂಗತಿಯೊಂದಿದೆ : ಗ್ರಸ್ತೋದಯದಂದು ಸೂರ್ಯೋದಯಕ್ಕೆ ಸರಿಯಾಗಿ ಸಮುದ್ರದಲ್ಲಿ ಸ್ನಾನ. ಎಂದರೆ ಕಣ್ವತೀರ್ಥದಿಂದ

ಸಮುದ್ರಕ್ಕೆ ತೆರಳುವ ಸಮಯದಲ್ಲಿ ಸೂರ್ಯನಿರಲಿಲ್ಲ. ಸೂರ್ಯನಿಲ್ಲದಿದ್ದಾಗ ಮಾರ್ಗಕ್ಕೆ ಚಂದ್ರನ ಬೆಳದಿಂಗಳೇ ಶೋಭೆ. ಆದರೆ ಅಮಾವಾಸ್ಯೆಯಂದು ಚಂದ್ರನು ಸೂರ್ಯ-ನೊಂದಿಗೇ ವಾಸಿಸುತ್ತಾನೆ. ಅರ್ಥಾತ್ ಚಂದ್ರನೂ ಸೂರ್ಯನೊಂದಿಗೇ ಮುಳುಗಿ ಸೂರ್ಯನೊಂದಿಗೇ ಹುಟ್ಟುತ್ತಾನೆ. ಆದ್ದರಿಂದ ಅಂದು ಮಾರ್ಗಕ್ಕೆ ಶೋಭೆ ತಂದದ್ದು ಚಂದ್ರನ ಚಂದ್ರಿಕೆಯಲ್ಲ; 'ಜಿತಚಂದ್ರಚಂದ್ರಿಕ'-ಭಾಷ್ಯಕಾರರಾದ ಶ್ರೀಮದಾಚಾರ್ಯರು ! ಹೀಗೆ ಸೂರ್ಯೋದಯಕ್ಕೂ ಮುಂಚಿನ ಕತ್ತಲೆಯ ವಾತಾವರಣದ ಮೂಲಕ ಅಂದು ಗ್ರಸ್ತೋದಯಗ್ರಹಣವಾಗಿತ್ತೆಂಬುದನ್ನು ಶ್ರೀನಾರಾಯಣಪಂಡಿತಾ- ಚಾರ್ಯರು ಸೂಚಿಸಿದ್ದಾರೆಂದು ಭಾಸವಾಗುತ್ತದೆ.

ಇಲ್ಲಿ, ಮಾರ್ಗಕ್ಕೆ ಚಂದ್ರನ ಬೆಳಕಿನ ಶೋಭೆಯು ಅಪ್ರಸಕ್ತವಲ್ಲ. ಏಕೆಂದರೆ, ಚಂದ್ರನ ಬೆಳಕನ್ನು ಮಾರ್ಗಕ್ಕೆ ಶೋಭೆಯೆಂದು ಕರೆಯುವುದು ಸುಪ್ರಸಿದ್ಧ ಲೋಕರೂಢಿ. ಇನ್ನು ವಿದ್ವದ್ರೂಢಿಗೆ ಶ್ರೀವಾದಿರಾಜಸ್ವಾಮಿಗಳ 'ವಿಕೀರ್ಣಪುಷ್ಪಾಂಬುದಲಂಬಿ**ಚಂದ್ರಮಹಃ-ಪತಾಕಾ**[1] ನವವಾರಿಸಿಕ್ತಾ । ಫಣೀಂದ್ರಕಂಠೋದರರತ್ನಕಾಂತಿವಿಚಿತ್ರಿತಾ ಸಾ ಗೃಹ-**ವೀಥಿಕಾ**ಽಽಸೀತ್ ॥' ಎಂಬ ಮಾತು (ರುಕ್ಮಿಣೀಶವಿಜಯ - 2.2) ಉದಾಹರಣೆ.

ಆದ್ದರಿಂದ, ಅಂದು ಗ್ರಸ್ತೋದಯಗ್ರಹಣವಾಗಿದ್ದರಿಂದಲೇ ಸ್ಪರ್ಶಕಾಲದ ಸನ್ನಿವೇಶ-ಗಳು ವರ್ಣಿತವಾಗಿಲ್ಲವೆನ್ನುವುದು ಯುಕ್ತಿಯುಕ್ತ. ಹಿಂದಿನ ಸಂಚಿಕೆಯಲ್ಲಿ ಕ್ರಿ.ಶ. 1260 ರಿಂದ 1320ರ ನಡುವೆ ಕಣ್ವತೀರ್ಥದಲ್ಲಿ ಕಂಡ ಸೂರ್ಯಗ್ರಹಣಗಳ ಪಟ್ಟಿಯನ್ನು ನಾಸಾ ಸಂಸ್ಥೆಯು ಪ್ರಕಟಿಸಿರುವ ಆಧಾರದ ಮೇಲೆ ಸವಿವರವಾಗಿ ನೀಡಲಾಗಿತ್ತು. ಅದರಂತೆ ಪ್ರಕೃತ ಕಾಲಾವಧಿಯಲ್ಲಿ ಕಣ್ವತೀರ್ಥದಲ್ಲಿ ಕಂಡ ಗ್ರಸ್ತೋದಯ-ಸೂರ್ಯಗ್ರಹಣಗಳೆಂದರೆ 0.942 ಪ್ರಮಾಣದ ಕ್ರಿ.ಶ. 1275ರ ಗ್ರಹಣ, 0.42 ಪ್ರಮಾಣದ 1282ರ ಗ್ರಹಣ ಹಾಗೂ 0.33 ಪ್ರಮಾಣದ 1289ರ ಗ್ರಹಣ. ಇವುಗಳಲ್ಲಿ ಅತಿಹೆಚ್ಚು ಪ್ರಮಾಣದ್ದೂ, ಬದರಿಕಾಶ್ರಮಪ್ರವೇಶಕಾಲಕ್ಕೆ ಸರಿಹೊಂದುವಂತಹುದೂ ಆದ ಗ್ರಹಣವೆಂದರೆ 1275ರ ಗ್ರಹಣವೇ ಹೊರತು, ಅಲ್ಪಪ್ರಮಾಣದ ಕೇತುಗ್ರಸ್ತವಾದ ಉಳಿದೆರಡು ಗ್ರಹಣಗಳಲ್ಲ. ಅದರಲ್ಲೂ 1289ರ ಗ್ರಹಣದಂದು ಸೂರ್ಯೋದಯವಾದ ಮೇಲೆ 10 ನಿಮಿಷಗಳೂ ಗ್ರಹಣ ಉಳಿದಿರುವುದಿಲ್ಲ. ಸ್ನಾನ-ಸಂಕಲ್ಪಗಳಲ್ಲಿಯೇ ಪುಣ್ಯಕಾಲ ಕಳೆದಾಗ ಐತರೇಯ- ಶ್ರುತಿಯ ಸುದೀರ್ಘ ವ್ಯಾಖ್ಯಾನ ಹೇಗೆ ಸಾಧ್ಯ ? ಇದಕ್ಕೆ ವಿಲಕ್ಷಣವಾಗಿ ಕ್ರಿ.ಶ. 1275ರ ಜೂನ್ 25 ರಂದು ಭಾರತೀಯ ಕಾಲಮಾನದಲ್ಲಿ ಗ್ರಹಣಸ್ಪರ್ಶ 05:49 ಕ್ಕೆ. ಸೂರ್ಯೋದಯ 06:10 ಕ್ಕೆ, ಹಾಗೂ ಗ್ರಹಣಮೋಕ್ಷ 07:39 ಕ್ಕೆ. ಅಂದು ಪೂರ್ಣ ಸೂರ್ಯಗ್ರಹಣ ಕಂಡ ಭೂಪ್ರದೇಶದಿಂದ ಕಣ್ವತೀರ್ಥವಿರುವುದು ಕೇವಲ 200 ಕಿ.ಮಿ.; ಎಂದರೆ, ಅದೊಂದು ಉತ್ತಮಪ್ರಮಾಣದ - ಸುಧೀರ್ಘ - ರಾಹುಗ್ರಸ್ತ - ಗ್ರಸ್ತೋದಯ

---

1. ... ಚಂದ್ರಕಿರಣಸ್ಯ ಪತಾಕಾಕಾರತ್ವಾದಿತಿ ಭಾವಃ । ಪತಾ**ಕಾಲಜ್ಞ್ಯತೇತ್ಯ**ರ್ಥಃ ।

– ಶ್ರೀನಾರಾಯಣಾಚಾರ್ಯರ ವ್ಯಾಖ್ಯಾನ

– ಸೂರ್ಯಗ್ರಹಣ ! ಜೂನ್ 25 ರಂದು ಮೋಡಮುಸುಕಿದ ವಾತಾವರಣವು ಆಶ್ಚರ್ಯವೂ ಅಲ್ಲ.

ತಾತ್ಪರ್ಯ : ಅಂದು ಕಂಡ ಸೂರ್ಯಗ್ರಹಣವು ಗ್ರಸ್ತೋದಯವೆನ್ನುವುದಕ್ಕೆ ನೇರ ಪ್ರಮಾಣವಿಲ್ಲದಿದ್ದರೂ ಇಲ್ಲಿ ನೀಡಿರುವ ಸಾಂದರ್ಭಿಕಕಾರಣಗಳಿಂದ ಗ್ರಸ್ತೋದಯವಲ್ಲದ ಅನೇಕ ಗ್ರಹಣಗಳಿಗಿಂತ ಗ್ರಸ್ತೋದಯವಾದ 1275ರ ಜೂನ್ 25 ರಂದು ಸಂಭವಿಸಿದ ಗ್ರಹಣವು ಅತ್ಯಂತ ಸಂಭಾವಿತ.

## ಸಂಭಾವನೆ : ಗ್ರಹಣದ ಸುತ್ತಮುತ್ತ

ಗ್ರಹಣವೇ ಒಂದು ವಿಶೇಷ ! ಸೂರ್ಯಗ್ರಹಣದ ಅವ್ಯವಹಿತ ಹಿಂದಿನ ಅಥವಾ ಮುಂದಿನ ಹುಣ್ಣಿಮೆಯಂದು ಚಂದ್ರಗ್ರಹಣವೂ ಸಂಭವಿಸಿದರೆ ಇನ್ನೂ ವಿಶೇಷ !! ಅದರಲ್ಲೂ , ಹಿಂದಿನ **ಹಾಗೂ** ಮುಂದಿನ ಎರಡೂ ಹುಣ್ಣಿಮೆಗಳು ಚಂದ್ರಗ್ರಹಣ–ವಾದರಂತೂ ಭಾರೀ ವಿಶೇಷ !!! 1275ರಲ್ಲಿ ಸಂಭವಿಸಿದ್ದು ಇಂತಹ ಒಂದು **ತ್ರಿವಳಿಗ್ರಹಣ.** 1275ರ ಜೂನ್ 09 ರಂದು ಚಂದ್ರಗ್ರಹಣ, ಜೂನ್ 25 ರಂದು ಸೂರ್ಯಗ್ರಹಣ, ಜುಲೈ 09 ರಂದು ಮತ್ತೊಂದು ಚಂದ್ರಗ್ರಹಣ. ಈ ಮೂರೂ ಗ್ರಹಣಗಳು ಕಣ್ವತೀರ್ಥದಲ್ಲಿ (ಹಾಗೂ 'ಅಕ್ಕಪಕ್ಕ'ದ ಪ್ರದೇಶಗಳಲ್ಲಿ) **ಕಂಡಿವೆ.**

ಹಿಂದಿನ ಸಂಚಿಕೆಯಲ್ಲಿರುವ ಗ್ರಹಣಗಳ ಸಾಲಿನಲ್ಲಿ ಕ್ರಿ.ಶ. 1275ರ ಗ್ರಹಣವಲ್ಲದೇ 0.33 ಪ್ರಮಾಣದ 1289ರ ಗ್ರಹಣ, 0.39 ಪ್ರಮಾಣದ 1293ರ ಗ್ರಹಣ(?) ಹಾಗೂ 0.21 ಪ್ರಮಾಣದ 1300ರ ಗ್ರಹಣ ಕೂಡ ತ್ರಿವಳಿಗ್ರಹಣಗಳಾಗಿ ಕಣ್ವತೀರ್ಥಪ್ರಾಂತ್ಯದಲ್ಲಿ ಕಂಡಿವೆ. ಆದರೆ 0.942 ಪ್ರಮಾಣದ 1275ರ ಗ್ರಹಣಕ್ಕೆ ಕೇತುಗ್ರಸ್ತವಾದ ಆ ಪೇಲವ ಪ್ರಮಾಣದ ಗ್ರಹಣಗಳು ಯಾವ ಸರಿಸಾಟಿಯೂ ಅಲ್ಲ, ಮಿಗಿಲಾಗಿ, ಹಿಂದಿನ ಸಂಭಾವನೆಯಲ್ಲಿದ್ದಂತೆ, ಆ ಗ್ರಹಣಗಳಿಗೂ, ಸಾಧಿಸಬೇಕಾಗಿರುವ ಬದರಿಕಾಶ್ರಮಪ್ರವೇಶಕಾಲಕ್ಕೂ ನಡುವೆ ಮಹದಂತರ.

ಸೂರ್ಯಚಂದ್ರಗ್ರಹಣಗಳಂತೆ, ನಾಸಾ ಸಂಸ್ಥೆಯು 'ಶುಕ್ರಗ್ರಹಕೃತ–ಸೂರ್ಯಗ್ರಹಣ' ದ (transit of Venus) ಬಗ್ಗೆಯೂ ವಿವರಗಳನ್ನು ನೀಡಿದೆ. ಸಾಮಾನ್ಯವಾಗಿ ಇದು ಎಂಟುವರ್ಷದ ಅಂತರದಲ್ಲಿ ಜೋಡಿಯಾಗಿ ಕಾಣುವುದು. ಅಂತಹ ಜೋಡಿಗಳಿಗೆ ಶತಮಾನಕ್ಕೂ ಹೆಚ್ಚು ಅಂತರವಿರುತ್ತದೆ. ಉದಾಹರಣೆಗೆ : ಕ್ರಿ.ಶ. ಡಿಸೆಂಬರ್ 1874 ಹಾಗೂ ಡಿಸೆಂಬರ್ 1882ರ ಜೋಡಿಯ ಅನಂತರದ ಜೋಡಿ ಜೂನ್ 2004 ಹಾಗೂ ಜೂನ್ 2012ರ ಜೋಡಿ. ಇದಾದನಂತರದ ಜೋಡಿ ಡಿಸೆಂಬರ್ 2117 ಹಾಗೂ ಡಿಸೆಂಬರ್ 2125ರದ್ದು.

ಇಂತಹ ವಿರಳವಾದ ಖಗೋಳದ ಘಟನೆಯು 1275ರ ಮೇ 26ರಂದು (ಅಮಾವಾಸ್ಯೆ) ಸೂರ್ಯೋದಯವಾದ ಮೇಲೆ ಸುಮಾರು 100 ನಿಮಿಷಗಳ ಕಾಲ ಕಣ್ವತೀರ್ಥದಲ್ಲಿ ಕಂಡಿದೆ !!!! ಎಂದರೆ ಆ ಅಮಾವಾಸ್ಯೆ ಶುಕ್ರಗ್ರಹಕೃತ**ಗ್ರಸ್ತೋದಯ–**ಸೂರ್ಯಗ್ರಹಣ. ಅನಂತರದ ಹುಣ್ಣಿಮೆ ಚಂದ್ರಗ್ರಹಣ. ಅನಂತರದ ಅಮಾವಾಸ್ಯೆ ಚಂ

ದೃಕ್ಕೃತಗ್ರಸ್ತೋದಯಸೂರ್ಯಗ್ರಹಣ. ಅನಂತರದ ಹುಣ್ಣಿಮೆ ಮತ್ತೊಂದು ಚಂದ್ರಗ್ರಹಣ. ಈ ರೀತಿಯ ಗ್ರಹಣಗಳ ಸರಣಿಯು ಅಂದು 1275ರಲ್ಲಿ ನಡೆದ ಮೇಲೆ ಇಂದಿನವರೆಗೂ ಜಗತ್ತಿನಲ್ಲೇ ನಡೆದಿಲ್ಲ. ಸುಮಧ್ವವಿಜಯದಲ್ಲಿ ಉಲ್ಲೇಖಿಸಿದ್ದಾರೆಂದಮೇಲೆ ಆ ಸೂರ್ಯಗ್ರಹಣಕ್ಕೆ ಇಷ್ಟಾದರೂ ಹಿನ್ನೆಲೆ–ಮುನ್ನೆಲೆಗಳು ಇರಲೇಬೇಕಲ್ಲವೇ ?!

**ಸಂಭಾವನೆ : ಗ್ರಹಣಾನಂತರ ಸಂಚಾರ**

ಅಂದು (1275, ಜೂನ್ 25) ಜ್ಯೇಷ್ಠಮಾಸದ ಅಮಾವಾಸ್ಯೆ ; ಎಂದರೆ ಚಾತು–ರ್ಮಾಸ್ಯವಲ್ಲ. ಶ್ರೀಮದಾಚಾರ್ಯರು ಕಣ್ವತೀರ್ಥದಲ್ಲಿ ಚಾತುರ್ಮಾಸ್ಯ ಕೈಗೊಂಡಿದ್ದ–ರೆನ್ನುವುದಕ್ಕೆ ಪ್ರಮಾಣವಿದೆಯಾದರೂ ಆ ಗ್ರಹಣಪ್ರಸಂಗವು ಚಾತುರ್ಮಾಸ್ಯದಲ್ಲಿಯೇ ನಡೆಯಿತೆನ್ನುವುದಕ್ಕೆ ಪ್ರಮಾಣವಿಲ್ಲ. ಬದಲಾಗಿ ಚಾತುರ್ಮಾಸ್ಯದಲ್ಲಿ ನಡೆಯಲಿಲ್ಲವೆಂದೇ ಹೇಳಬೇಕಾಗುತ್ತದೆ :

ಗೂಢಭಾವಪ್ರಕಾಶಿಕೆಯಲ್ಲಿ ''ಉಪರಾಗೇ ಸಮುದ್ರೇ ಸ್ನಾತ್ವಾ ಗಮನಸಮಯೇ ತತ್ರ ಸ್ವಸ್ಯ ಲಘಿಮಾದ್ಯೈಶ್ವರ್ಯಮತ್ಯಧಿಕಶಾರೀರಬಲಂ ಚ ಪ್ರಕಾಶಿತವಾನಿತ್ಯುತ್ತರಾರ್ಧತಾತ್ಪರ್ಯಾರ್ಥಃ'' ಎಂಬುದಾಗಿದೆ – ಎಂದರೆ, ಸಮುದ್ರದಲ್ಲಿ ಗ್ರಹಣವನ್ನು ಮುಗಿಸಿಕೊಂಡು ಹಿಂತಿರುಗುವಾಗಲೇ ಗಂಡವಾಟಪ್ರಸಂಗ, ವಟುವನ್ನೇರಿ ನೃಸಿಂಹದೇವಾಲಯದಲ್ಲಿ ಸುತ್ತಿದ ಪ್ರಸಂಗ, ಮುಂತಾದವು ನಡೆದದ್ದು ಎಂದು. ಆ ನೃಸಿಂಹದೇವಾಲಯವು ಯಾವುದೆಂಬುದರಲ್ಲಿ ಒಂದೊಪ್ಪಿಗೆ ಇಲ್ಲದಿದ್ದರೂ ಹೆಚ್ಚಿನ ಪ್ರತೀತಿಯಿರುವುದು ಅದು ಕಾಂತಾವರದಲ್ಲಿ ಅಥವಾ ಬಂಟ್ವಾಳದ ಸಮೀಪವಿರುವ ಪಾಣೆ ಮಂಗಳೂರಿನ ಬಳಿ ನಾರ್ಶ್ಯಗ್ರಾಮದಲ್ಲಿ[1] ಇರುವುದೆಂಬುದಾಗಿ. ಕಾಂತಾವರದ ಬಳಿ ಪಲಿಮಾರುಮಠಕ್ಕೆ ಸೇರಿದ ನರಸಿಂಹದೇವರ ಪ್ರತೀಕವಿರುವ ಮಠವೂ ಒಂದಿದೆ.[2] ಆದರೆ ಕಾಂತಾವರವಿರುವುದು ಕಣ್ವತೀರ್ಥದಿಂದ ಸುಮಾರು 60–70 ಕಿ.ಮಿ. ದೂರದಲ್ಲಿ ; ನಾರ್ಶ್ಯಗ್ರಾಮವು ಸುಮಾರು 25–30 ಕಿ.ಮಿ. ದೂರದಲ್ಲಿ. ಆ ಗ್ರಹಣವು ಚಾತುರ್ಮಾಸ್ಯದ ಕೊನೆಯ ಅಮಾವಾಸ್ಯೆಯಂದಾಗಿದ್ದರೂ ಚಾತುರ್ಮಾಸ್ಯಪರಿಸಮಾಪ್ತಿಗೆ ಅಲ್ಲಿಂದ ಹತ್ತಕ್ಕೂ ಹೆಚ್ಚು ದಿನಗಳು ಬೇಕು. ಎಂದರೆ, ಸಮುದ್ರದಿಂದ ಹಿಂತಿರುಗುವಾಗಲೇ (ಕಣ್ವತೀರ್ಥದಿಂದ) ಕಾಂತಾವರಕ್ಕೆ /ನಾರ್ಶ್ಯಗ್ರಾಮಕ್ಕೆ ತೆರಳಿದ್ದರೆ ಚಾತುರ್ಮಾಸ್ಯವ್ರತದ ಉಲ್ಲಂಘನೆಯಾದೀತು ! ಕಣ್ವತೀರ್ಥದಿಂದ ಈ ಎರಡೂ ಪ್ರದೇಶಗಳಿಗೂ ನೇತ್ರಾವತೀ ನದಿಯನ್ನು ದಾಟಿಯೇ ಹೋಗಬೇಕು. ಇದಲ್ಲದೇ, ಗೂಢಭಾವಪ್ರಕಾಶಿಕೆಯಲ್ಲಿ ''ಯಃ ಶ್ರೀಮಧ್ವಃ **ಸಪದಿ** ಪಾರಂತೀಶಾಭಿನಂದೀ'' ಎಂಬುದಾಗಿ ಪಾರಂತೀದೇವಾಲಯಕ್ಕೂ ಈ ಘಟನೆಗಳು ನಡೆದ ತತ್ಕ್ಷಣವೇ ತೆರಳಿದ್ದೆಂಬುದಾಗಿದೆ.

---

1. ಶ್ರೀ ಪಾವೂರು ರಾಮಚಂದ್ರ ಅಮ್ಮಣ್ಣಾಯ, ತುಳುನಾಡಿನಲ್ಲಿ ಮಧ್ವಪರ್ಯಟನೆ, 2000.
2. ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ, ಸುಮಧ್ವವಿಜಯ (ಅನುವಾದ ಸಮೇತ), ಆರನೆಯ ಆವೃತ್ತಿ, ಐತರೇಯ ಪ್ರಕಾಶನ, 2011.

ವಟುವಿನ ಪ್ರಸಂಗ ಕಾಂತಾವರದಲ್ಲಿ ನಡೆದದ್ದು ಎಂದು ಮುಂತಾದ ಪ್ರತೀತಿಗಳು ಅಂದಿನ ಗ್ರಹಣವು ಚಾತುರ್ಮಾಸ್ಯದಲ್ಲಿ ನಡೆದದ್ದಲ್ಲವೆಂದು ತಿಳಿಸುತ್ತವೆ. ಕಣ್ವತೀರ್ಥದಿಂದ ದೂರದ ಸ್ಥಳದಲ್ಲಿ ನಡೆದದ್ದೆಂದಾದರೂ ಇದೇ ಪ್ರಮೇಯವು ಸಿದ್ಧವಾಗುತ್ತದೆ. ಒಂದು ವೇಳೆ ಆ ಪ್ರಸಂಗಗಳು ಕಣ್ವತೀರ್ಥಕ್ಕೆ ಸಮೀಪವಿರುವ ಸ್ಥಳದಲ್ಲೇ ನಡೆದದ್ದೆಂದಾದರೆ ಅಂತಹ ಪ್ರಸಂಗಗಳು ಗ್ರಹಣ ನಡೆದದ್ದು ಚಾತುರ್ಮಾಸ್ಯದಲ್ಲೋ ಅಲ್ಲವೋ ಎನ್ನುವುದರ ಬಗ್ಗೆ ಮೌನವಹಿಸುತ್ತವೆ. ಅಲ್ಲದೇ, ಆಗ ಗ್ರಹಣ ನಡೆದ **ದಿನವೇ** ಗ್ರಹಣದನಂತರ ಗಂಡವಾಟಾದಿ ಪ್ರಸಂಗಗಳೂ ನಡೆದವು ಎಂಬ ಭಾವ ಗೂಢಭಾವಪ್ರಕಾಶಿಕೆಯ ವಾಕ್ಯಕ್ಕೆ ಪ್ರಾಪ್ತವಾಗುವುದರಿಂದ ದಿನದ ಪೂರ್ವಾರ್ಧದಲ್ಲಿಯೇ ಗ್ರಹಣವು ಮುಕ್ತಾಯಗೊಂಡಿತ್ತು ಎನ್ನಬೇಕಾಗುವುದು.

ತಾತ್ಪರ್ಯ : ಚಾತುರ್ಮಾಸ್ಯದಲ್ಲಿ ಕಂಡ (ಅಥವಾ ಮಧ್ಯಾಹ್ನದ ಮೇಲೆ ಕಂಡ) ಅನೇಕ ಗ್ರಹಣಗಳಿಗಿಂತ ಜ್ಯೇಷ್ಠಮಾಸದಲ್ಲಿ ಸಂಭವಿಸಿದ (ಹಾಗೂ ಮುಂಜಾನೆಯೇ ಮುಕ್ತಾಯಗೊಂಡ) ಕ್ರಿ.ಶ. 1275 ರ ಗ್ರಹಣವೇ ಹೆಚ್ಚು ಸಂಭಾವಿತ.

ಮುಖ್ಯತಾತ್ಪರ್ಯ : 1) ಕಣ್ವತೀರ್ಥದಲ್ಲಿ ಕಂಡ 2) ಗ್ರಸ್ತೋದಯವಾದ 3) 'ಮಿತ್ರಗ್ರಹಣ'ಗಳೊಂದಿಗೆ ಕೂಡಿದ 4) ಚಾತುರ್ಮಾಸ್ಯದಲ್ಲಿ ಬಾರದ 5) ಮುಂಜಾನೆಯೇ ಮುಕ್ತಾಯಗೊಂಡ 6) ರಾಹುಗ್ರಸ್ತವಾದ 7) ಉತ್ತಮಪ್ರಮಾಣದ 8) ಸುದೀರ್ಘವಾದ 9) ಪ್ರಸಕ್ತ ಕಾಲಾವಧಿಯಲ್ಲಿರುವ ಸೂರ್ಯಗ್ರಹಣವೆಂದರೆ ಅದು ಕ್ರಿ.ಶ. **1275 ರ ಜೂನ್ 25** ರಂದು ಸಂಭವಿಸಿದ್ದು. ಈ ಪರಿಯ ಸೌಭಾಗ್ಯ ಬೇರಾವ ಗ್ರಹಣದಲ್ಲೂ ಕಾಣುವುದಿಲ್ಲ.

### ಗ್ರಹಣ ನಡೆದಾಗ ಶ್ರೀಮದಾಚಾರ್ಯರ ವಯಸ್ಸು

ಇನ್ನು, ಆ ಗ್ರಹಣಕ್ಕೂ ಬದರಿಕಾಶ್ರಮಗಮನಕ್ಕೂ ಹೆಚ್ಚು ಅಂತರವಿರಲಿಲ್ಲವೆನ್ನುವುದಕ್ಕೆ ನಾಲ್ಕು ಪ್ರಮುಖಕಾರಣಗಳು :

1) ಆ ಪ್ರಸಂಗವು ಸುಮಧ್ವವಿಜಯದ ಅಂತಿಮಸರ್ಗದಲ್ಲಿರುವುದು.

2) ಸಮುದ್ರದ ಹೊಡೆತಕ್ಕೆ ಜಗದ್ಗುರುಗಳು ಬಿದ್ದಾರೆಂಬ ಅಜ್ಞಾನಿಗಳ ಭ್ರಾಂತಿಯು ಆಗ ಶ್ರೀಮದಾಚಾರ್ಯರು ಅವತರಿಸಿ 75 ವರ್ಷಗಳು ಕಳೆದಿದ್ದರೆ ಹೆಚ್ಚು ಸಂಗತ-ವಾಗುತ್ತದೆಯೇ ಹೊರತು 37 ವರ್ಷ ಕಳೆದಿದ್ದರಲ್ಲ.

3) ಬಾಲಕ-ವಾಸುದೇವನಾಗಿದ್ದಾಗಲೇ ಹಾಲುಮೊಸರಿನ ಪಾತ್ರೆಗಳ ಮೇಲೆ ಬಂಡೆಕಲ್ಲುಗಳನ್ನು ಎತ್ತಿಟ್ಟ ದಾಖಲೆಯನ್ನು ಪಾಜಕಕ್ಷೇತ್ರದಲ್ಲಿ ಇಂದಿಗೂ ಕಾಣಬಹುದು. ಕಳಸಗ್ರಾಮದಲ್ಲಿ ಭೀಮನ ಕಲ್ಲನ್ನು ಎತ್ತಿಟ್ಟದ್ದೂ ಅತ್ಯಧಿಕಶಾರೀರಬಲವನ್ನು ಪ್ರದರ್ಶಿಸುವ ಇಂಥದ್ದೇ ವೃತ್ತಾಂತ. ಒಂದೇ ವಿಷಯವನ್ನು ಪ್ರತಿಪಾದಿಸುವಂತೆ ತೋರುವ ಈ ಎರಡು ವೃತ್ತಾಂತಗಳಲ್ಲಿ ''ಅಪೂರ್ವತಾ'' ದೊರಕುವುದು ಎರಡನೆಯ ವೃತ್ತಾಂತವು ಬದರಿಕಾಶ್ರಮ ಪ್ರವೇಶಕ್ಕೆ ಹತ್ತಿರವಿದ್ದಾಗಲೇ. ಆಗ ಬಾಲ್ಯದ ವೃತ್ತಾಂತಮಾತ್ರದಿಂದ ತಿಳಿಯದ

ಶ್ರೀಮದಾಚಾರ್ಯರ ಅಜರತ್ವ ಈ ವೃತ್ತಾಂತದಿಂದ ತಿಳಿಯುವುದು. ಭೀಮರೂಪದಿಂದ ಬದರಿಯಲ್ಲಿ ಭೀಮನ ಬಂಡೆಯನ್ನು ಎತ್ತಿಟ್ಟದ್ದೂ ಸ್ವರ್ಗಾರೋಹಣದ ಸಮಯದಲ್ಲೇ ಎಂಬುವುದೂ ಗಮನಾರ್ಹ. ಭೀಮನ ಕಲ್ಲಿನ ಪ್ರಸಂಗದ **ಅನಂತರ** ನಿರೂಪಿತವಾಗಿರುವುದು ಗ್ರಹಣದ ಪ್ರಸಂಗ.

4) ''ಇತೀರಯನ್ ಪಂಚದಶೈಷ **ಯೂನಃ** ...'' ಎಂದಿರುವುದರಿಂದ ಹತ್ತನೆಯ ಸರ್ಗದಲ್ಲಿಯೇ ಆಗಲೇ ಶ್ರೀಮದಾಚಾರ್ಯರು ಲೋಕದೃಷ್ಟಿಯಲ್ಲಿ ಯುವವಯಸ್ಸನ್ನು ದಾಟಿದ್ದರೆಂಬುವುದನ್ನೂ ಗಮನಿಸಬೇಕು.

ಆದ್ದರಿಂದ, ಹಿಂದೆ ವಿವರಿಸಿದಂತೆ ಅಂದಿನ ಗ್ರಹಣವು ಕ್ರಿ.ಶ. 1275 ಜೂನ್ 25ರದ್ದಾದಲ್ಲಿ ಆ ಗ್ರಹಣಕ್ಕೂ ಬದರಿಕಾಶ್ರಮಗಮನಕ್ಕೂ ಹೆಚ್ಚು ಅಂತರ ಇರಲಾರದಾದ್ದರಿಂದ ಶ್ರೀಮದಾಚಾರ್ಯರೇ ಹೇಳಿಕೊಂಡಿರುವ ತಮ್ಮ ಅವತಾರಕಾಲವು ಕ್ರಿ.ಶ. **1200** ಎಂಬುವುದಕ್ಕೆ ಸಂಕೋಚಮಾಡುವ ಆವಶ್ಯಕತೆಯಿಲ್ಲವೆನ್ನುವ ವಾದವು ಸೂರ್ಯಗ್ರಹಣದ ಪ್ರಸಂಗದಿಂದ ಬಲಿಷ್ಠವಾಗುತ್ತದೆ.

ಈ ಲೇಖನಕ್ಕೆ ಉಪಯುಕ್ತವಾದಂತಹ ಆಕರಗ್ರಂಥಗಳು ಬೆಂಗಳೂರಿನ ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ಗ್ರಂಥಾಗಾರದಿಂದ ಲಭಿಸಿವೆ. ಈ ಲೇಖನಕ್ಕೆ ನಾನಾರೀತಿಯಲ್ಲಿ ನೆರವಾದವರು ಶ್ರೀಯುತರಾದ - ಆರ್. ಸುದರ್ಶನ, ಶ್ರೀಧರ ಉಪಾಧ್ಯಾಯ, ಟಿ.ಎನ್. ಪ್ರಾಣೇಶ್, ಕೆ.ಎಸ್. ಶ್ರೀರಾಮ್ ಹಾಗೂ ವಿ. ಸುವೀರ - ಇವರೆಲ್ಲರಿಗೂ ಕೃತಜ್ಞನಾಗಿದ್ದೇನೆ. ಈ ಲೇಖನವು ಇನ್ನೂ ಹೆಚ್ಚಿನ ಸಂಶೋಧನೆಯನ್ನು ಪ್ರಚೋದಿಸುವುದೆಂದು ಆಶಿಸುತ್ತೇನೆ.

*****

# ''ಚತುಃಸಹಸ್ರೇ ತ್ರಿಶತೋತ್ತರೇ ಗತೇ ...''

**- ಸುದರ್ಶನ**

ಶ್ರೀಮಧ್ವಾಚಾರ್ಯರು ತಮ್ಮ ಅವತಾರಕಾಲದ ಬಗ್ಗೆ ತಮ್ಮ ಮಹಾಭಾರತತಾತ್ಪರ್ಯ-ನಿರ್ಣಯದಲ್ಲಿ ಈ ಕೆಳಗಿನ ವಾಕ್ಯದಲ್ಲಿ ತಿಳಿಸಿರುವರು:

**ಚತುಃಸಹಸ್ರೇ ತ್ರಿಶತೋತ್ತರೇ ಗತೇ ಸಂವತ್ಸರಾಣಾಂ ತು ಕಲೌ ಪೃಥಿವ್ಯಾಮ್ ।**
**ಜಾತಃ ಪುನರ್ವಿಪ್ರತನುಃ ಸ ಭೀಮೋ ದೈತ್ಯೈರ್ನಿಗೂಢಂ ಹರಿತತ್ತ್ವಮಾಹ ॥ (೩೨.೧೨೫)**

ಶ್ರೀಮದಾಚಾರ್ಯರ ಕಾಲದ ಬಗ್ಗೆ ಎಲ್ಲ ವಿದ್ವಾಂಸರು ಈ ಮೇಲಿನ ಶ್ಲೋಕವನ್ನು ಬಹುಮುಖ್ಯಪ್ರಮಾಣವನ್ನಾಗಿ ಸ್ವೀಕರಿಸಿರುವರು. ಇದರಂತೆ ಕಲಿಯುಗ ಪ್ರಾರಂಭವಾಗಿ ೪೩೦೦ ವರ್ಷಗಳು ಕಳೆಯುತ್ತಿರಲು ಶ್ರೀಮದಾಚಾರ್ಯರ ಅವತಾರವಾಯಿತು. ಕಲಿಯುಗದ ೪೩೦೦ ವರ್ಷಗಳು ಎಂದರೆ ಕ್ರಿ.ಶ. ೧೧೯೯/೧೨೦೦ ಎಂದಾಗುತ್ತದೆ. ಆದರೆ ಕೆಲವು ವಿದ್ವಾಂಸರು ೪೩೦೦ ಎಂಬುದನ್ನು ಯಥಾವತ್ತಾಗಿ ಸ್ವೀಕರಿಸದೆ ಅಂದಾಜು ಸಂಖ್ಯೆ(ರೌಂಡ್ ಫಿಗರ್) ಎಂದು ಪರಿಗಣಿಸಿ, ತಮ್ಮದೇ ಆದ ಕೆಲವು ಕಾರಣ/ಆಧಾರ-

ಗಳನ್ನು ಮುಂದಿಟ್ಟು ಶ್ರೀಮದಾಚಾರ್ಯರ ಕಾಲವನ್ನು ಕ್ರಿ.ಶ. ೧೧೯೯/೧೨೦೦ಕ್ಕಿಂತ ಕೆಲವು ವರ್ಷಗಳ ಮೊದಲು ಅಥವಾ ಅನಂತರ ಎಂದು ಪರಿಗಣಿಸಿರುವರು.

ವಿಶೇಷವೆಂದರೆ ಈ ೪೩೦೦ ಎಂಬ ಸಂಖ್ಯೆಯನ್ನು ಶ್ರೀಮದಾಚಾರ್ಯರು ಬೇರೆರೆಡು ಸ್ಥಳಗಳಲ್ಲೂ ಪ್ರಯೋಗಿಸಿರುವರು : ''**.... ಶೇಷಾ ಯಾಸ್ಯಂತಿ ತಚ್ಛೇಷಾ ಅಷ್ಟಾವಿಂಶೇ ಕಲೌ ಯುಗೇ । ಗತೇ ಚತುಃಸಹಸ್ರಾಬ್ದೇ ತಮೋಗಾಸ್ತ್ರಿಶತೋತ್ತರೇ ॥** (೯.೯೯,೧೦೦).

ಇದು ಬ್ರಹ್ಮದೇವರು ಶ್ರೀಹರಿಯನ್ನು ಕುರಿತು ಹೇಳಿದ ವಚನ. ಈ ಶ್ಲೋಕದ ತಾತ್ಪರ್ಯ ಇಷ್ಟು; ರಾಮಾವತಾರಕಾಲದಲ್ಲಿ ಭಗವಂತನನ್ನು ದ್ವೇಷಿಸಿದ ರಾಕ್ಷಸರು ಅಂಧಂತಮಸ್ಸನ್ನು ಹೊಂದಿದರು; ಉಳಿದ ಕೆಲವು ರಾಕ್ಷಸರು ಶ್ರೀಹರಿಯು ಕೃಷ್ಣನಾಗಿ ಅವತರಿಸಿದಾಗ ಅಂಧಂತಮಸ್ಸನ್ನು ಹೊಂದುವರು; ಅಲ್ಲೂ ಉಳಿದವರು ೨೮ ನೆಯ ಕಲಿಯುಗದ ೪೩೦೦ ವರ್ಷಗಳು ಕಳೆದ ಬಳಿಕ (ಮಧ್ವಾವತಾರವಾದಾಗ) ಹೊಂದುವರು. ಹಾಗೆಯೇ,

**ಕರ್ಮಕ್ಷಯಾದೇವ ಸುರೇತರಾಸ್ತು ಪುಣ್ಯಕ್ಷಯಂ ಪ್ರಾಪ್ಯ ಭುವಿ ಪ್ರಜಾತಾಃ ॥**
**ಚತುಃಸಹಸ್ರಂ ತ್ರಿಶತೋತ್ತರಂ ತೇ ಸಂವತ್ಸರಾಣಾಮನುಭೂಯ ದಿವ್ಯಾನ್ ।**
**ಭೋಗಾನ್ ನರತ್ವೇಪಿ ಸದೇಶ್ವರೋಹಮಸಜ್ಜಗಚ್ಚೇತಿ ಧಿಯಾಪ್ನುವಂಸ್ತಮಃ ॥** (೩೨.೧೨೧)

ಈ ಮೇಲಿನ ಶ್ರೀಮದಾಚಾರ್ಯರ ವಾಕ್ಯವು ೯ನೇ ಅಧ್ಯಾಯದಲ್ಲಿ ಬಂದ ಬ್ರಹ್ಮದೇವರ ಮಾತಿನ ಅಭಿಪ್ರಾಯವೇ ಆಗಿದೆ. ಇದರಂತೆ ಕೃಷ್ಣಾವತಾರದಲ್ಲೂ ಅಂಧಂತಮಸ್ಸನ್ನು ಹೊಂದದೇ ಉಳಿದ ದುಷ್ಟರು ಕಲಿಯುಗದ ೪೩೦೦ ವರ್ಷಗಳು ಕಳೆದ ಮೇಲೆ – ಅಂದರೆ ಶ್ರೀಮದಾಚಾರ್ಯರ ಅವತಾರವಾದಾಗ – ಹೊಂದುವರು ಎಂದು.

ಶ್ರೀವಾದಿರಾಜಸ್ವಾಮಿಗಳ ಭಾವಪ್ರಕಾಶಿಕೆಯಲ್ಲೂ – ''**ಕೃಷ್ಣಾವತಾರೇಽಪಿ ಹನನಾನಂತರಂ ತಮೋಗಮನಾದವಶಿಷ್ಟಾಃ ಮಣಿಮದಾದ್ಯಾಃ ಅಷ್ಟಾವಿಂಶೇ ಕಲೌ ಯುಗೇ ತ್ರಿಶತೋತ್ತರೇ ಚತುಃಸಹಸ್ರಾಬ್ದೇ ಗತೇ ಸತಿ ತಮೋಗಾ ಭವಿಷ್ಯಂತೀತಿ ಯೋಜನಾ**'' (೯.೧೦೦) ಹಾಗೂ ''**ಸುರೇತರಾಸ್ತು ಸಂವತ್ಸರಾಣಾಂ ತ್ರಿಶತೋತ್ತರಂ ಚತುಃಸಹಸ್ರಂ ದಿವ್ಯಾನ್ ಭೋಗಾನನುಭೂಯ ....**'' (೩೨.೧೨೧) ಎಂಬುದಾಗಿ ಮೂಲದಲ್ಲಿರುವ ೪೩೦೦ ಎಂಬುದನ್ನು ಯಥಾವತ್ತಾಗಿ ಸ್ವೀಕರಿಸಿರಿಸಲಾಗಿದೆ. ಶ್ರೀಜನಾರ್ದನಭಟ್ಟರ ಪದಾರ್ಥದೀಪಿಕಾವ್ಯಾಖ್ಯಾನವೂ ಇದೇ ತೆರನಾಗಿರುವುದು ಗಮನಾರ್ಹ.

ಆದ್ದರಿಂದ ಮೂಲ(ಮಹಾಭಾರತತಾತ್ಪರ್ಯನಿರ್ಣಯ)ದಲ್ಲಿ ಹಾಗೂ ಪ್ರಾಚೀನ ವ್ಯಾಖ್ಯಾನಗಳಲ್ಲಿ ವ್ಯಾಪಕವಾಗಿ ಬಳಸಿರುವ ೪೩೦೦ ಎಂಬ ಸಂಖ್ಯೆಯನ್ನು ಕೇವಲ ಅಂದಾಜುರೂಪದ ಸಂಖ್ಯೆಯೆಂದು ಪರಿಗಣಿಸಿ ಅದರ ಮಹತ್ತ್ವವನ್ನು ತಳ್ಳಿಹಾಕುವಂತಿಲ್ಲ. ಸತ್ಯಲೋಕಾಧಿಪತಿಗಳಾದ ಬ್ರಹ್ಮ–ವಾಯುಗಳಿಬ್ಬರಿಂದಲೂ ಉಕ್ತವಾದ ಮಾತನ್ನು ಯಥಾವತ್ತಾಗಿ ಸ್ವೀಕರಿಸುವುದರಲ್ಲಿಯೇ ಔಚಿತ್ಯ ಎದ್ದು ಕಾಣುತ್ತದೆ. ''ಸಂಶಯಚ್ಛಿದಂ'' ಎಂಬ ಪ್ರಶಸ್ತಿಯುಳ್ಳ ಗ್ರಂಥದ ಮಾತಿನಲ್ಲಿ ಸಂಶಯಕ್ಕೆ ಅವಕಾಶವಾದರೂ ಎಲ್ಲಿದೆ?

ಇವೆಲ್ಲ ಅಂಶಗಳನ್ನು ಗಮನಿಸಿದಾಗ ಶ್ರೀಮದಾಚಾರ್ಯರ ಅವತಾರವಾದದ್ದು ಕಲಿಯುಗ ಪ್ರಾರಂಭವಾಗಿ ೪೩೦೦ ವರ್ಷಗಳ ನಂತರ – ಎಂದರೆ ಕ್ರಿ.ಶ. ೧೨೦೦ ರಲ್ಲಿ – ಎಂಬುದೇ ಹೆಚ್ಚು ಸಂಭಾವಿತ.

# ಶ್ರೀವಿಜಯೀಂದ್ರರ ಗ್ರಂಥಗಳು

## (೧೭.೦೬.೧೨ ರಂದು ಶ್ರೀವಿಜಯೀಂದ್ರತೀರ್ಥರ ಆರಾಧನಾ ನಿಮಿತ್ತ ಲೇಖನ)

**ಲೇಖಕರು : ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ**

ಶ್ರೀವಿಜಯೀಂದ್ರತೀರ್ಥರು ದ್ವೈತವೇದಾಂತದ ರಸಋಷಿಗಳಲ್ಲಿ ಒಬ್ಬರು. ಮುನಿತ್ರಯ-ರೆಂದು ಖ್ಯಾತರಾದ ಭಾಷ್ಯಕಾರ ಶ್ರೀಮದಾನಂದತೀರ್ಥಭಗವತ್ಪಾದರು, ಟೀಕಾಕಾರ ಶ್ರೀಜಯತೀರ್ಥರು ಹಾಗೂ ವಾದಗ್ರಂಥಕಾರ ಶ್ರೀವ್ಯಾಸತೀರ್ಥರ ಅನಂತರದ ಅಸಾಮಾನ್ಯ ಮಾಹಾತ್ಮ್ಯೆಯ ಮಹನೀಯರಲ್ಲಿ ಶ್ರೀವಾದಿರಾಜತೀರ್ಥರು, ಶ್ರೀವಿಜಯೀಂದ್ರ ತೀರ್ಥರು, ಶ್ರೀರಘೂತ್ತಮತೀರ್ಥರು ಮೊದಲಾದ ಜ್ಞಾನಿವರೇಣ್ಯರು ಪ್ರಮುಖರು. ತಮ್ಮ ಜೀವಿತಕಾಲ-ದಲ್ಲಿಯೇ ಅತ್ಯಪೂರ್ವಮಹಿಮೆಗಳನ್ನು ತೋರಿಸಿದ ಮಹಿಮಾಪುರುಷರು. ಶ್ರೀಮನ್ಮಧ್ವಾ-ಚಾರ್ಯರ ಅನಂತರ ಶ್ರೀವಾದಿರಾಜ ತೀರ್ಥರು ಮತ್ತು ವಿಜಯೀಂದ್ರತೀರ್ಥರು ಎಂಬದು ವಿಶೇಷ. ಬಗೆ ಬಗೆಯ ವಿಶೇಷಕಲೆಗಳಲ್ಲಿ ವಿಭಿನ್ನಸಂಸ್ಕೃತಿಯ ಜನಗಳೊಂದಿಗೆ ಸ್ಪರ್ಧಿಸಿ ಮಧ್ವಸಿದ್ಧಾಂತದ ವಿಜಯದುಂದುಭಿಯನ್ನು ಮೊಳಗಿಸಿದ ವಿಶಿಷ್ಟಮಹನೀಯರು ಎಂಬುದು ಶ್ರೀವಿಜಯೀಂದ್ರತೀರ್ಥರ ಹಿರಿಮೆ.

ಶ್ರೀವಿಜಯೀಂದ್ರತೀರ್ಥರು ತಮ್ಮ ಮಹಾಮಹಿಮೆಗಳಂತೆ ಮಹತ್ತರವಾದ ಕೃತಿರತ್ನ-ಗಳಿಂದಲೂ ವಿಶೇಷವಾಗಿ ಪ್ರಸಿದ್ಧರಾಗಿದ್ದಾರೆ. ಒಟ್ಟು ೧೦೪ ಗ್ರಂಥಗಳನ್ನು ಬರೆದ ವಿಶಿಷ್ಟದಾಖಲೆ ಅವರದು. ಅದರಂತೆ ಶ್ರೀಸುಧೀಂದ್ರರು ಹಾಗೂ ಶ್ರೀರಾಘವೇಂದ್ರರಂಥಹ ಶಿಷ್ಯಪ್ರಶಿಷ್ಯರ ಮೂಲಕ ಒಂದು ಪರಂಪರೆಯನ್ನು ತೀರಾ ಅನನ್ಯವಾಗಿ ಬೆಳಗಿದ ಮಹತ್ತ್ವ ಅವರದು. ಅವರ ಚರಿತ್ರೆಯ ಅಧ್ಯಯನ ಆ ಕಾಲದ ತಾತ್ವಿಕ ಪರಿಸರದ ಮೇಲೂ ವಿಶೇಷಬೆಳಕನ್ನು ಚೆಲ್ಲುತ್ತದೆ. ತಮ್ಮ ಗುರುಗಳಾದ ಶ್ರೀವ್ಯಾಸರಾಜರಂತೆ ರಾಜಮಹಾರಾಜರಿಗೆ ಅತ್ಯಂತ ನಿಕಟವರ್ತಿಗಳಾಗಿದ್ದು ಸಮಸ್ತ ಜನಾಂಗಕ್ಕೆ ತಾತ್ವಿಕ ಚಿಂತನೆಯ ಮಹತ್ವವನ್ನು ತಿಳಿಸಿದ ಅಸಾಮಾನ್ಯಸಾಧನೆ ಅವರದು.

ಶ್ರೀವಿಜಯೀಂದ್ರರು ದ್ವೈತವೇದಾಂತದ ಇತಿಹಾಸದಲ್ಲಿ ಅಗ್ರಶ್ರೇಣಿಯ ಗ್ರಂಥಕಾರರೆಂದು ವಿಖ್ಯಾತರಾಗಿರುವ ಮಹನೀಯರು. ತಪಸ್ಸು, ವಿದ್ಯೆ, ವಿರಕ್ತಿಗಳ ತ್ರಿವೇಣೀಸಂಗಮವಾಗಿದ್ದ ಅವರು, ತಮ್ಮ ಸುದೀರ್ಘವಾದ ಜೀವಿತಾವಧಿಯಲ್ಲಿ ಸಾಧಿಸಿದ ಕಾರ್ಯಗಳು ತುಂಬ ಮಹತ್ತರವಾದವು. ಗ್ರಂಥರಚನೆ, ವಾದಿಜಯ ಹಾಗೂ ಆರ್ತರಕ್ಷಣೆಗಳ ಮೂಲಕ ಅವರು ಶ್ರೀಮನ್ಮಧ್ವಸಿದ್ಧಾಂತವನ್ನು ಪ್ರಸಾರಗೊಳಿಸಿದ ರೀತಿ ತುಂಬಾ ಅಪೂರ್ವವಾದದು. ಶ್ರೀಸುಧೀಂದ್ರರು ಮತ್ತು ಶ್ರೀರಾಘವೇಂದ್ರರಂತಹ ಶಿಷ್ಯಪ್ರಶಿಷ್ಯರನ್ನು ತಾತ್ತ್ವಿಕಲೋಕಕ್ಕೆ ನೀಡಿದ ಹಿರಿಮೆಯೂ ಅವರದೇ. ಶೈವ ಮತ್ತು ಅದ್ವೈತಗಳ ವಾದಿಗಳೊಂದಿಗೆ, ವಿಶಿಷ್ಟಾದ್ವೈತಿಗಳನ್ನೂ ಪ್ರಖರವಾಗಿ ವಿಮರ್ಶಿಸಿದ್ದು ಅವರ ಹಿರಿಮೆ. ಚತುಃ ಷಷ್ಟಿಕಲಾಕೋವಿದರೆಂಬ ಅಸಾಮಾನ್ಯವಾದ ಪ್ರಸಿದ್ಧಿ ಪಡೆದ ಹಿರಿಮೆಯೂ ಇವರದು. ಗ್ರಂಥರಚನೆಯಲ್ಲಿ ಸಂಖ್ಯೆಯ ದೃಷ್ಟಿಯಿಂದ ದ್ವೈತವಾಙ್ಮಯದ ಇತಿಹಾಸದಲ್ಲಿ ಇವರದೇ ಅಗ್ರಸ್ಥಾನ. ರಾಜಮಹಾರಾಜರುಗಳಿಂದ ರತ್ನಾಭಿಷೇಕದ ಗೌರವ ಮೊದಲಾದವುಗಳನ್ನು ಪಡೆದಿದ್ದ ವೈಶಿಷ್ಟ್ಯವೂ ಇವರದು.

# ತಪ್ತಮುದ್ರಾಧಾರಣೆಯ ಮಹತ್ತ್ವ

## (೩೦.೦೬.೧೨ರಂದು ಪ್ರಥಮೈಕಾದಶೀ-ತಪ್ತಮುದ್ರಾಧಾರಣ ನಿಮಿತ್ತ ಲೇಖನ)

**ಲೇಖಕರು : ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ**

ಮೋಕ್ಷವು ಪರಮಪುರುಷಾರ್ಥವಾಗಿದ್ದು, ಭಗವತ್ಪ್ರಸಾದವು ಅದಕ್ಕೆ ಪ್ರಧಾನ ಸಾಧನವಾಗಿದೆ; ಭಗವಂತನ ಪರಮಪ್ರಸಾದಕ್ಕೆ ಪರಮಭಕ್ತಿಯೂ, ಅದಕ್ಕೆ ಭಗವದಪರೋಕ್ಷಜ್ಞಾನವೂ ಸಾಧನವಾಗಿವೆ. ಅಪರೋಕ್ಷಜ್ಞಾನಕ್ಕೆ ಸಾಧನವಾಗುವ ಕರ್ಮಯೋಗವು ದಾನ, ತೀರ್ಥ ಮೊದಲಾಗಿ ಅನೇಕ ತೆರನಾಗಿದ್ದು, ಅವುಗಳಲ್ಲಿ 'ತಪ್ತಮುದ್ರಾಧಾರಣೆ'ಯು ಅಪಾರಪ್ರಾಮುಖ್ಯಪಡೆದ ಒಂದು ಅಪೂರ್ವಸಾಧನ.

ವಿಷ್ಣುಭಕ್ತಿಯು ಸಕಲಸದ್ಗುಣಗಳಿಗೂ ಹೃದಯಸ್ಥಾನೀಯವಾಗಿದ್ದು ವೈಷ್ಣವರ ಅಸಾಧಾರಣ ಲಕ್ಷಣವೆನ್ನಿಸಿದೆ. ವೈಷ್ಣವತ್ವಕ್ಕೆ ದ್ಯೋತಕವಾದ ಅತ್ಯಂತ ಪ್ರಮುಖ ಬಾಹ್ಯಲಕ್ಷಣವೆಂಬುದು 'ತಪ್ತಮುದ್ರಾಧಾರಣ'ದ ಹಿರಿಮೆ. ವೈಷ್ಣವರಾದ ಸಕಲ ವರ್ಣದವರಿಗೂ ಕಡ್ಡಾಯವೆಂಬುದಾಗಿ ಇದನ್ನು ಶಾಸ್ತ್ರಗಳು ವಿಧಿಸಿವೆ. ಪ್ರತಿದಿನದ ಗೋಪೀಚಂದನದ ಊರ್ಧ್ವಪುಂಡ್ರಧಾರಣೆ, ಪಂಚಮುದ್ರಾಧಾರಣೆಯಂತೆ ಅತ್ಯಂತ ಮಹತ್ತ್ವಪೂರ್ಣವಾದ ಮತ್ತೊಂದು ಬಾಹ್ಯಸಂಸ್ಕಾರವಾಗಿ ಈ ತಪ್ತಮುದ್ರಾ-ಧಾರಣೆಯು ವಿಹಿತವಾಗಿದೆ.

ವೈಷ್ಣವರಿಗೆ ವಿಹಿತವಾದ ಪಂಚಸಂಸ್ಕಾರಗಳಲ್ಲಿ 'ತಾಪ'ವೆಂಬ ಸಂಸ್ಕಾರವು ಈ 'ತಪ್ತಮುದ್ರಾಧಾರಣೆ'ಯೇ ಆಗಿದೆ. ಜಾತಕರ್ಮ, ಚೌಲ, ಉಪನಯನ, ಮಂತ್ರೋಪದೇಶ ಮೊದಲಾದ ಸಕಲಕಾರ್ಯಗಳಲ್ಲೂ ತಪ್ತಮುದ್ರಾಧಾರಣೆಗೆ ವಿಶಿಷ್ಟಸ್ಥಾನವಿದೆ. ಅನಿವಾರ್ಯವಲ್ಲದ ಹೊರತು ಇದಿಲ್ಲದೆ ಉಪನಯನಾದಿ- ಗಳನ್ನು ಮಾಡುವಂತಯೇ ಇಲ್ಲ ಎಂಬುದು ಶಾಸ್ತ್ರಗಳ ಘೋಷಣೆ. ಪ್ರತಿವರ್ಷವೂ ಶಯನೈಕಾದಶೀ (ಆಷಾಢ ಶುಕ್ಲ ಏಕಾದಶೀ), ಶ್ರವಣದ್ವಾದಶೀ (ಉಪವಾಸ), ಭಾದ್ರಪದಶುಕ್ಲ ಏಕಾದಶೀ, ಕಾರ್ತಿಕಶುಕ್ಲ ಏಕಾದಶೀ, ಉಪಾಕರ್ಮ ಮೊದಲಾದ ವಿಶೇಷಪರ್ವಕಾಲಗಳಲ್ಲಿ ತಪ್ತಮುದ್ರಾಧಾರಣೆಯು ವಿಹಿತವಾಗಿದೆ. ಇಂತಹ (ತಪ್ತ)ಸುದರ್ಶನಧಾರಣೆಯು ಸು-ದರ್ಶನ (ನಿರ್ಮಲ-ತತ್ತ್ವಜ್ಞಾನ) ಪ್ರಾಪ್ತಿಯ ಅಪೂರ್ವಸಾಧನ ಎಂಬುದರಲ್ಲಿ ಅಪಾರ ಔಚಿತ್ಯವೂ ಇದೆ. ಸಾಂಸಾರಿಕತಾಪತ್ರಯಗಳ ನಿವಾರಣೆಗೂ ಸಹ ತಪ್ತಮುದ್ರಾಧಾರಣೆಯು ಅವಶ್ಯ ಎಂಬುದು 'ಉಷ್ಣಂ ಉಷ್ಣೇನ ಶೀತಲಂ' ಎಂಬ ಪ್ರಸಿದ್ಧ ಲೋಕನ್ಯಾಯದಿಂದಲೂ ಸಹ ಸಿದ್ಧವಾಗುತ್ತದೆ. ಶ್ರೀಕೃಷ್ಣ ಮುದ್ರೆ ಧರಿಸದವರಿಗೆ ದ್ವಾರಕೆಯ ಪ್ರವೇಶಕ್ಕೆ ಅವಕಾಶವಿಲ್ಲ ಎಂದು ನಿಬಂಧನೆಯನ್ನು ವಿಧಿಸಿದ್ದ ಉಲ್ಲೇಖ ಹರಿವಂಶದಲ್ಲಿದೆ. ಇದರಿಂದ ಸ-ಮುದ್ರರಷ್ಟೇ ಭವಸಮುದ್ರವನ್ನು ದಾಟಬಲ್ಲರು; ಅ-ಮುದ್ರರಲ್ಲ ಎಂಬ ವಿಶೇಷಾಂಶ ಸೂಚಿತವಾಗಿದೆ ಎಂದು ತಿಳಿಯಬಹುದು.

ತಪ್ತಮುದ್ರಾಧಾರಣೆಯ ಮಹತ್ತ್ವವು ಋಗಾದಿವೇದಗಳಲ್ಲೂ, ಪದ್ಮ ಮೊದಲಾದ ಪುರಾಣ- ಗಳಲ್ಲೂ, ಮಹಾಭಾರತಾದಿ ಇತಿಹಾಸಗಳಲ್ಲೂ ಬಂದಿದೆ. ಶ್ರೀಮದಾ-ಚಾರ್ಯರು ತಪ್ತಮುದ್ರೆಗಳನ್ನು ತಮ್ಮ ಶಿಷ್ಯರಿಗೆ ಅನುಗ್ರಹಿಸಿದ ವಿವರ ಸುಮಧ್ವವಿಜಯದಲ್ಲಿ ಉಕ್ತವಾಗಿದೆ :

**ಸಜ್ಜನಾನ್ ಸಹ ಮಹಾ(ಽಽ)ದರೇಣ ನೄನ್ ಪಾಪಿನಾಂ ಪ್ರಕೃತಿತೋಽಪ್ರಿಯಾಕೃತಿ।**
**ದಾರುಣಾಘಗಣದಾರಣಂ ಸ್ಮ ಸ ಗ್ರಾಹಯತ್ಯಪಿ ಸುದರ್ಶನದ್ವಯಮ್ ॥(೯/೩೯)**

(ಶ್ರೀಮಧ್ವಾಚಾರ್ಯರು ಪಾಪಿಗಳಿಗೆ ಸ್ವಾಭಾವಿಕವಾಗಿಯೇ ಅಪ್ರಿಯನೋಟದ, ದಾರುಣವಾದ ಪಾಪಗಣವನ್ನು ಸೀಳಿಹಾಕುವಂತಹ ಎರಡು ಸುದರ್ಶನಗಳನ್ನು ಮಹಾ-ಶಂಖದ ಸಮೇತವಾಗಿ ತುಂಬಾ ಆದರದಿಂದ ಸಜ್ಜನರಿಗೆ ತೊಡಿಸಿದರು).

ಅನಂತರವೂ ಕಾಲಕಾಲಕ್ಕೆ ಶ್ರೀವಾದಿರಾಜಸ್ವಾಮಿಗಳು (ಚಕ್ರಸ್ತುತಿ), ಶ್ರೀವಿಜಯೀಂದ್ರ-ಸ್ವಾಮಿಗಳು (ತಪ್ತಚಕ್ರಮೀಮಾಂಸಾ), ಶ್ರೀಸತ್ಯಾಭಿನವತೀರ್ಥರು (ರಾಮಾಮೃತಮಹಾರ್ಣವ ಮತ್ತು ಅದರ ಟೀಕೆ), ಶ್ರೀಕುಂಡಲಗಿರಿ ಆಚಾರ್ಯರು (ತಪ್ತಮುದ್ರಾಧಾರಣಸಮರ್ಥನಮ್), ಶ್ರೀಛಲಾರಿ ನರಸಿಂಹಾಚಾರ್ಯರು (ಸ್ಮೃತ್ಯರ್ಥಸಾಗರ), ಶ್ರೀಛಲಾರಿಶೇಷಾಚಾರ್ಯರು (ನಿರ್ಣಯರತ್ನ), ಶ್ರೀಕೃಷ್ಣಾಚಾರ್ಯರು (ಸ್ಮೃತಿಮುಕ್ತಾವಲಿ) ಮೊದಲಾದ ಮಹನೀಯರು ತಮ್ಮ ಗ್ರಂಥಗಳಲ್ಲಿ ತಪ್ತಮುದ್ರಾಧಾರಣೆಯ ಮಹತ್ತ್ವವನ್ನು ಅನೇಕ ರೀತಿಯಲ್ಲಿ ಸಮರ್ಥಿಸಿದ್ದಾರೆ. 'ತಪ್ತಚಕ್ರಭೂಷಣ'ವೆಂಬ ಕೃತಿಯಲ್ಲಿ ಎಲ್ಲಾ ಪ್ರಾಚೀನಕೃತಿಗಳಲ್ಲಿನ ಪ್ರಮಾಣಗಳ ಸಂಕಲನವು ದೊರೆಯುತ್ತದೆ[೧].

ಶ್ರೀವಾದಿರಾಜಸ್ವಾಮಿಗಳ ಯುಕ್ತಿಮಲ್ಲಿಕೆಯ ಫಲಸೌರಭದಲ್ಲಿ ಒಟ್ಟು ೭೨ಶ್ಲೋಕಗಳಲ್ಲಿ ತಪ್ತಮುದ್ರಾಧಾರಣದ ಮಹತ್ತ್ವ ಮತ್ತು ವಿಧಿ ವಿಧಾನಗಳು ವಿವರವಾಗಿ ನಿರೂಪಿತವಾಗಿವೆ; ಅವರ ೭೬ಶ್ಲೋಕಗಳ ಚಕ್ರಸ್ತುತಿಯೂ ಸಹ ಒಂದು ಅಪೂರ್ವರೀತಿಯ ತಪ್ತಮುದ್ರೆಯ ವಿವರಣೆಯಾಗಿದೆ. ಶ್ರುತಿಗಳಲ್ಲಿ ಬಂದಿರುವ ತಪ್ತಧಾರಣೆಯ ಮಹತ್ತ್ವವನ್ನು ಉದ್ಗ್ರಂಥವೊಂದರಲ್ಲಿ ಪುರಾಣಗ್ರಂಥಗಳ ಆಧಾರದೊಂದಿಗೆ ವಿವರಿಸಿದ ಪ್ರಪ್ರಥಮ ಉದ್ಗ್ರಂಥಕಾರರು ಎಂಬುದು ಶ್ರೀವಾದಿರಾಜಸ್ವಾಮಿಗಳ ಹಿರಿಮೆ. ಶ್ರೀಸುರೋತ್ತಮತೀರ್ಥರ ಯುಕ್ತಿಮಲ್ಲಿಕಾ ವ್ಯಾಖ್ಯಾನದಲ್ಲೂ ಸಹ ಅನೇಕ ಉಪಯುಕ್ತ ವಿವರಗಳು ಸಂಕಲಿತವಾಗಿವೆ. ಯುಕ್ತಿಮಲ್ಲಿಕೆ(೫/೬೫೦)ಯಲ್ಲಿ ಶ್ರೀವಾದಿರಾಜರು ತಮ್ಮ ಚಕ್ರಸ್ತುತಿಯನ್ನು ಸಹ ಉಲ್ಲೇಖಿಸಿರುವರು. ತಪ್ತಚಕ್ರಮೀಮಾಂಸೆಯ ಬಗ್ಗೆ ಪ್ರಥಮಬಾರಿಗೆ ಪ್ರತ್ಯೇಕ ಗ್ರಂಥವೊಂದನ್ನೇ ರಚಿಸಿದವರು ಶ್ರೀವಿಜಯೀಂದ್ರ ಸ್ವಾಮಿಗಳು. ಅನೇಕ

---

೧. ವಿಸ್ತರಸ್ತು ಶ್ರೀಮದ್ವಿಜಯೀಂದ್ರತೀರ್ಥಶ್ರೀಪಾದಕೃತಚಕ್ರಮೀಮಾಂಸಾಯಾ ದ್ರಷ್ಟವ್ಯಃ । ಏವಂ ಸ್ಮೃತಿಮುಕ್ತಾವಲ್ಯಾಂ ಪ್ರಾಚೀನಬಹುಗ್ರಂಥೇಷ್ವಪಿ ವಿಚಾರಃ ಕೃತ ಇತಿ ನಾಸ್ಮಾಭಿರತೀವಯತ್ನಃ ಕೃತಃ ॥ – ತಪ್ತಚಕ್ರಭೂಷಣ

ಆಕ್ಷೇಪಗಳಿಗೆ ಸಮರ್ಪಕ ಉತ್ತರಗಳನ್ನು ವಿವರವಾಗಿ ಈ ಗ್ರಂಥವು ಒದಗಿಸುತ್ತದೆ. ಶ್ರೀಸತ್ಯಾಭಿನವತೀರ್ಥರ ರಾಮಾಮೃತಮಹಾರ್ಣವದಲ್ಲಿ ಒಟ್ಟು ೭೨ ಶ್ಲೋಕಗಳಲ್ಲಿ ತಪ್ತಚಕ್ರಮಾಹಾತ್ಮ್ಯ ಮತ್ತು ಅದರ ವಿಧಿವಿಧಾನಗಳು ನಿರೂಪಿತವಾಗಿವೆ; ಅದಕ್ಕೆ ಅವರೇ ರಚಿಸಿರುವ ಟೀಕೆಯಂತೂ ತಪ್ತಮುದ್ರಾಧಾರಣದ ಬಗ್ಗೆ ಹೊಸ ಬೆಳಕನ್ನೇ ಚೆಲ್ಲುತ್ತದೆ.

**ಈ ಎಲ್ಲಾ ಗ್ರಂಥಗಳಲ್ಲಿನ ತಪ್ತಮುದ್ರೆಗೆ ಸಂಬಂಧಿಸಿದ ಮುಖ್ಯವಿಚಾರಗಳನ್ನೆಲ್ಲ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ:**

**೧. ತಪ್ತಮುದ್ರಾಧಾರಣೆಯು ಸಕಲವರ್ಣದವರಿಗೂ, ಸಕಲ ಆಶ್ರಮದವರಿಗೂ, ಸ್ತ್ರೀಯರಿಗೂ ಕಡ್ಡಾಯ.**

**೨. ಜಾತಕರ್ಮಾದಿ ಸಕಲಸಂಸ್ಕಾರಗಳಲ್ಲೂ ತಪ್ತಮುದ್ರಾಧಾರಣೆಯು ವಿಹಿತ.**

**೩. ಪ್ರತಿವರ್ಷದಲ್ಲೂ ಪ್ರಥಮೈಕಾದಶೀ ಮೊದಲಾದ ದಿನಗಳಲ್ಲಿ ಇದು ವಿಶೇಷ ಕರ್ತವ್ಯ.**

**೪. ಪರಮಹಂಸರಾದ ಪೀಠಾಧೀಶರು ಮಾತ್ರವೇ ತಪ್ತಮುದ್ರೆಗಳನ್ನು ಕೊಡುವ ಅಧಿಕಾರ ಹೊಂದಿರುವರು.**

**೫. ಗೃಹಸ್ಥರಿಗೆ ಎಂದೂ ಇದನ್ನು ಕೊಡುವ ಅಧಿಕಾರವಿಲ್ಲ.**

**೬. ಪೀಠಾಧೀಶರಲ್ಲಿ ಸ್ವತಃ ಶ್ರೀಮದಾಚಾರ್ಯರೇ ಸನ್ನಿಹಿತರಾಗಿದ್ದು ತಪ್ತಮುದ್ರೆ-ಗಳನ್ನೀಯುವರು.**

**- ಮೊದಲಾದವು ಈ ಗ್ರಂಥಗಳಲ್ಲಿ ಬಂದಿರುವ ಮುಖ್ಯಾಂಶಗಳು.**

ಸುದರ್ಶನಚಕ್ರಕ್ಕೆ ಮಹಾಲಕ್ಷ್ಮಿಯ ದುರ್ಗಾರೂಪ ಅಭಿಮಾನಿದೇವತೆ; ಅದು ತಮೋಗುಣದ ಅಭಿಮಾನಿದೇವತೆ. ಶಂಖಕ್ಕೆ ಮಹಾಲಕ್ಷ್ಮಿಯ ಶ್ರೀರೂಪ ಅಭಿಮಾನಿ-ದೇವತೆ. ಶ್ರೀರೂಪವು ಸತ್ವಗುಣದ ಅಭಿಮಾನಿದೇವತೆ. ಇದರಿಂದ ಚಕ್ರವು ತಮೋಗುಣದ ಪ್ರಭಾವವನ್ನು ಆ ಮೂಲಕ ಅಜ್ಞಾನ,ಮಿಥ್ಯಾಜ್ಞಾನಗಳನ್ನು ತೊಡೆದು ಹಾಕುವ ಸಂಕೇತ; ಶಂಖವು ಸತ್ತ್ವಗುಣವನ್ನು ಆ ಮೂಲಕ ತತ್ತ್ವಜ್ಞಾನವನ್ನು ಬೆಳಗುವುದರ ಸಂಕೇತ. ಎಂದರೆ ಚಕ್ರಶಂಖಗಳ ಧಾರಣೆ ಮಿಥ್ಯಾಜ್ಞಾನ ಅಳಿದು ತತ್ತ್ವಜ್ಞಾನ ಅರಳುವುದಕ್ಕೆ ಸೂಚಕ. ತಪ್ತಚಕ್ರಶಂಖಗಳ ಧಾರಣೆಯು ಹೀಗೆ ಅಧ್ಯಾತ್ಮಿಕಸಾಧನೆಗೆ ಅತ್ಯಂತ ಮುಖ್ಯವಾದ ಸಂಸ್ಕಾರವಾಗಿದೆ.

ತಪ್ತಮುದ್ರೆಗಳ ಸ್ವೀಕಾರ ತತ್ಕಾಲಕ್ಕೆ ಸ್ವಲ್ಪ ನೋವು ನೀಡುವುದು ನಿಜ. ವೈದ್ಯನು ನೀಡುವ ಇಂಜಕ್ಷನ್ ಮಾಡುವ ಶಸ್ತ್ರಚಿಕಿತ್ಸೆಗಳು ನೋವುಂಟು ಮಾಡಿದರೂ ಅದರ ಪರಿಣಾಮ ರೋಗಪರಿಹಾರವಾಗಿರುವಂತೆ, ತಪ್ತಮುದ್ರಾಧಾರಣೆಯ ನೋವೂ ಸಹ ಭವರೋಗನಿವಾರಣೆಗೆ ಸಾಧನವಾಗಿದೆ. ಕಾಳೀಯನ ಮೇಲೆ ಮೂಡಿದ ಕೃಷ್ಣನ ಹೆಜ್ಜೆಗಳು ಆಗ ಅವನಿಗೆ ನೋವುಂಟು ಮಾಡಿದರೂ, ಮೂಡಿದ ಅವುಗಳ ಗುರುತು ಅದಕ್ಕೆ ಗರುಡನ ಭಯವನ್ನು ಶಾಶ್ವತವಾಗಿ ಪರಿಹರಿಸಿದ ನಿದರ್ಶನವೂ ಸಹ ತಪ್ತಮುದ್ರೆಗಳ ಧಾರಣೆಯ ಮಹತ್ತ್ವವನ್ನು ಸೂಚಿಸುವಂತಿದೆ.

ಬಿಡಿಸನ್ಯಾಸಿಗಳಿಗೂ ಸಹ ತಪ್ತಮುದ್ರಾಧಿಕಾರವನ್ನು ಶಾಸ್ತ್ರಗಳು ಕೊಟ್ಟಿಲ್ಲ. ವೈಷ್ಣವ ಪರಂಪರೆಯಲ್ಲಿ ಸಂಪ್ರತಿಪನ್ನರಾದ ನಿಜವಾದ ಯಾವ ಗೃಹಸ್ಥವಿದ್ವಾಂಸರೂ ಸಹ ತಪ್ತಮುದ್ರೆಗಳನ್ನು ತಾವೇ ಹಾಕಿಕೊಂಡ ಅಥವಾ ಶಿಷ್ಯರಿಗೆ ತಾವೇ ಕೊಟ್ಟ ಉಲ್ಲೇಖ ಎಲ್ಲೂ ಕಂಡುಬರುವುದಿಲ್ಲ; ಗೃಹಸ್ಥರಿಗೆ ತಪ್ತಮುದ್ರಾಧಿಕಾರವಿಲ್ಲವೆಂಬುದು ಇದರಿಂದಲೂ ಸಿದ್ಧವಾಗುತ್ತದೆ.

'ವಿಹಿತರೀತಿಯಲ್ಲಿ ಗುರುಗಳಿಂದ ತಪ್ತಮುದ್ರೆಗಳನ್ನು ಸ್ವೀಕರಿಸದವನು ಎಂತಹ ವಿದ್ವಾಂಸನಾಗಿದ್ದರೂ, ವೇದಶಾಸ್ತ್ರಾದಿಗಳ ಪಾಠಪ್ರವಚನ ಮೊದಲಾದ ಸತ್ಕಾರ್ಯಗಳಿಗೆ ಅರ್ಹನಾಗುವುದಿಲ್ಲ' ಎಂಬ ಶ್ರೀವಾದಿರಾಜಸ್ವಾಮಿಗಳ ಮಾತು ಇಲ್ಲಿ ಸ್ಮರಣೀಯವಾಗಿದೆ (ಯುಕ್ತಿಮಲ್ಲಿಕಾ ೫/೬೦೦).

ತಪ್ತಮುದ್ರಾಧಾರಣೆಯು ಅವಶ್ಯವಿಧಿಯಾಗಿರುವಂತೆ ಅದು ವಿಹಿತರೀತಿಯಲ್ಲಿ ಯೋಗ್ಯ ಪೀಠಾಧೀಶರಿಂದಲೇ ಆಗಬೇಕು ಎಂಬ ಅಂಶವು ಸಹ ಅಷ್ಟೇ ಮುಖ್ಯ ಎಂಬುದು ಇಷ್ಟೆಲ್ಲ ವಿಚಾರದಿಂದ ಸ್ಫುಟಪಡುತ್ತದೆ.

*****

## ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ನಿರ್ದೇಶಕರ ಕಾರ್ಯಕ್ರಮಗಳು

**ಸ್ಥಳ : ಶ್ರೀವ್ಯಾಸಮಧ್ವಸಭಾಂಗಣ, ಹನುಮಂತನಗರ, ಬೆಂಗಳೂರು**

**೧೭.೦೬.೨೦೧೨ ಭಾನುವಾರ ಪ್ರವಚನ ಸಂಜೆ ೬.೪೫ಕ್ಕೆ**

**ವಿಷಯ : ಶ್ರೀವಿಜಯೀಂದ್ರತೀರ್ಥರು**

*****

**೩೦.೦೬.೨೦೧೨ ಶನಿವಾರ ಪ್ರವಚನ ಸಂಜೆ ೬.೪೫ಕ್ಕೆ**

**ವಿಷಯ : ಪ್ರಥಮೈಕಾದಶೀ ಹಾಗೂ ಚಾತುರ್ಮಾಸ್ಯ ನಿಮಿತ್ತ**

*****

**೦೮.೦೭.೨೦೧೨ ಭಾನುವಾರ ಪ್ರವಚನ ಸಂಜೆ ೬.೪೫ಕ್ಕೆ**

**ವಿಷಯ : ಶ್ರೀಜಯತೀರ್ಥರು**

*****

## ದೂರದರ್ಶನದಲ್ಲಿ ಪ್ರವಚನ ಕಾರ್ಯಕ್ರಮ

2012 ಜೂನ್ ತಿಂಗಳ 12, 19, 26 ರಂದು ಬೆಳಿಗ್ಗೆ 6.30ರಿಂದ 6.45ರ ವರೆಗೆ ಡಿಡಿ ಚಂದನ ವಾಹಿನಿಯ ''ಮಾರ್ಗದರ್ಶನ'' ಕಾರ್ಯಕ್ರಮದಲ್ಲಿ ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯರ ಪ್ರವಚನವು ಪ್ರಸಾರವಾಗಲಿದೆ.

# ಶ್ರೀಕನಕದಾಸರ ಹರಿಭಕ್ತಿಸಾರ

**ಅನುವಾದ – ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ**

(ಹಿಂದಿನ ಸಂಚಿಕೆಯಿಂದ)

**ಚಿತ್ರಕೂಟನಿವಾಸ ವಿಶ್ವಾ-**
**ಮಿತ್ರಕ್ರತುಸಂರಕ್ಷ ಶಶಿರವಿ-**
**ನೇತ್ರ ಭವ್ಯಚರಿತ್ರ ಸದ್ಗುಣಗಾತ್ರ ಸತ್ಪಾತ್ರ ।**
**ಧಾತ್ರಿಜಾಂತಕ ಕಪಟನಾಟಕ-**
**ಸೂತ್ರ ಪರಮಪವಿತ್ರ ಫಲ್ಗುಣ-**
**ಮಿತ್ರ ವಾಕ್ಯವಿಚಿತ್ರ ರಕ್ಷಿಸು ನಮ್ಮನನವರತ ॥೯॥**

ಚಿತ್ರಕೂಟದಲ್ಲಿ ನೆಲೆಸಿದಂತಹ, ವಿಶ್ವಾಮಿತ್ರಮುನಿಗಳ ಯಜ್ಞವನ್ನು ಸಂರಕ್ಷಣೆ ಮಾಡಿದ, ಸೂರ್ಯಚಂದ್ರರು ನೆಲೆಸಿದ ಕಣ್ಣುಗಳ, ಮಂಗಳಕರವಾದ ಜೀವನದ, ಸದ್ಗುಣಗಳನ್ನೇ ಆಕೃತಿಯನ್ನಾಗಿವುಳ್ಳ, ಉತ್ತಮವಾದ ಅರ್ಹತೆಯನ್ನು ಹೊಂದಿದ, ಭೂಮಿಪುತ್ರನಾದ ನರಕಾಸುರನನ್ನು ಸಂಹರಿಸಿದ, ಕಪಟನಾಟಕಸೂತ್ರಧಾರಿಯಾದ, ಪರಮಪವಿತ್ರನಾದ, ಅರ್ಜುನನಿಗೆ ಹಿತೈಷಿಯಾದ. ಚಿತ್ರವಿಚಿತ್ರ ಮಾತುಗಳನ್ನಾಡುವ ಶ್ರೀಹರಿಯೇ ನೀನು ನಮ್ಮನ್ನು ಸದಾ ರಕ್ಷಿಸು.

ವಿ. : ಶ್ರೀಹರಿಯ ಶ್ರೀಕೃಷ್ಣ ರಾಮರೂಪದ ಸ್ತೋತ್ರ ಇದರಲ್ಲೂ ಮುಂದುವರೆದಿದೆ.

೧. **ಚಿತ್ರಕೂಟನಿವಾಸ** : ಶ್ರೀರಾಮನು ಸೀತಾ ಲಕ್ಷ್ಮಣ ಸಮೇತನಾಗಿ ವನವಾಸಕ್ಕೆ ದಂಡಕಾರಣ್ಯಕೆ ತೆರಳುತ್ತಾ ಮಾರ್ಗಮಧ್ಯದಲ್ಲಿ ಕೆಲವು ದಿನಗಳ ಕಾಲ ಚಿತ್ರಕೂಟದಲ್ಲಿ ನೆಲೆಸಿದ್ದನು. ಭರತನು ಶ್ರೀರಾಮನನ್ನು ಅಯೋಧ್ಯಗೆ ಮರಳಿ ಕರೆತರಲೆಂದು ಸಂದರ್ಶಿಸಿದ್ದು, ಶ್ರೀರಾಮನ ಪಾದುಕೆಗಳನ್ನು ಪಡೆದದ್ದು ಈ ಸ್ಥಳದಲ್ಲಿಯೇ. ಶ್ರೀರಾಮನ ಆದೇಶದಂತೆ ಲಕ್ಷ್ಮಣನು ಪರ್ಣಕುಟಿಯೊಂದನ್ನು ಇಲ್ಲಿ ನಿರ್ಮಿಸಿದ ವಿವರವು ವಾಲ್ಮೀಕಿ ರಾಮಾಯಣದಲ್ಲಿದೆ. ಶ್ರೀರಾಮನು ಸ್ವತಃ ಸದಾನಂದ ಭರಿತನಾದ ಸಾಕ್ಷಾತ್ ಶ್ರೀಹರಿಯೇ ಆದ್ದರಿಂದ ಇಲ್ಲಿಯೂ ಅಂತೆಯೆ ಪರಮಾನಂದದಿಂದಲೇ ನೆಲೆಸಿದ್ದನು ಎಂಬ ವಿಶೇಷ ವಿವರ ಮಹಾಭಾರತತಾತ್ಪರ್ಯನಿರ್ಣಯದಲ್ಲಿದೆ: **ಕತಿಪಯದಿನಾನ್ಯತ್ರ ಮೋದನ್ನುವಾಸ.**

೨. **ವಿಶ್ವಾಮಿತ್ರಕ್ರತುಸಂರಕ್ಷ** : ವಿಶ್ವಾಮಿತ್ರ ಮುನಿಗಳು ಲೋಕಕಲ್ಯಾಣಕ್ಕೆಂದು ಸಿದ್ಧಾಶ್ರಮ ಎಂಬಲ್ಲಿ ಹಮ್ಮಿಕೊಂಡಿದ್ದ ಯಜ್ಞವನ್ನು ಮಾರೀಚ, ಸುಬಾಹುಗಳ ನೇತೃತ್ವದಲ್ಲಿ ಅಸುರರು ಹಾಳುಮಾಡುತ್ತಿದ್ದಾಗ, ಅದರ ರಕ್ಷಣೆಗಾಗಿ ವಿಶ್ವಾಮಿತ್ರರು ಶ್ರೀರಾಮನನ್ನು ಕರೆತಂದು, ಆ ಅಸುರರ ವಿಘ್ನವನ್ನು ತಪ್ಪಿಸಿ, ಯಜ್ಞವನ್ನು ಪೂರೈಸಿದರು. ಮಾರೀಚನಿಗೆ

ಬ್ರಹ್ಮದೇವರ ವರ, ಸುಬಾಹುವಿಗೆ ಶಿವನ ವರ; ಹೀಗೆ ಬ್ರಹ್ಮರುದ್ರರ ವರದಿಂದಾಗಿ ಇತರರಿಂದ ಅವಧ್ಯರಾಗಿದ್ದ ಅವರ ಯುದ್ಧವನ್ನು ತಪ್ಪಿಸಿದ ಶ್ರೀರಾಮ ಸಾಕ್ಷಾತ್ ಸರ್ವೋತ್ತಮನಾದ ಶ್ರೀಹರಿ ಎಂದು ಸ್ಫುಟಪಡುವುದು.

೩. **ಶಶಿರವಿನೇತ್ರ** : ಶ್ರೀಹರಿಯ ಕಣ್ಣುಗಳನ್ನು ಆಶ್ರಯಿಸಿ, ಸೂರ್ಯಚಂದ್ರರು ನೆಲೆಸಿದ್ದು, ಆದರಿಂದಾಗಿಯೇ ಅವರಿಗೆ ಬೆಳಕು ಕೊಡುವ ಸಾಮರ್ಥ್ಯ ಲಭಿಸಿರುವುದು ಶಾಸ್ತ್ರದಲ್ಲಿ ಪ್ರಸಿದ್ಧ :

**ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಮ್ ।**
**ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್॥(ಭಗವದ್ಗೀತೆ ೧೫/೧೨)**

ವಿಶ್ವರೂಪದರ್ಶನಕಾಲದಲ್ಲಿ ಇದನ್ನು ಸಾಕ್ಷಾತ್ಕರಿಸಿಕೊಂಡ ವಿವರ ಗೀತೆಯಲ್ಲಿದೆ : **ಶಶಿಸೂರ್ಯನೇತ್ರಮ್** (೧೧/೧೯). ಹೀಗೆ ಲೋಕವನ್ನೇ ಬೆಳಗುವ ಸೂರ್ಯಚಂದ್ರರಿಗೆ ಅವರಲ್ಲಿದ್ದು ಆ ಸಾಮರ್ಥ್ಯ ನೀಡುವ ಶ್ರೀಹರಿ ಸರ್ವೋತ್ತಮ ಎಂಬುದು ಇದರ ಭಾವ.

೪. **ಭವ್ಯಚರಿತ್ರ** : ಚರಿತ್ರ ಎಂಬುದು ಜೀವನದ ಪರಿಶುದ್ಧಿಯನ್ನು ತಿಳಿಸುವ ಪದ. ಶ್ರೀರಾಘವೇಂದ್ರಸ್ವಾಮಿಗಳ ಶ್ರೀರಾಮಚಾರಿತ್ರಮಂಜರೀ, ಶ್ರೀಕೃಷ್ಣಚಾರಿತ್ರಮಂಜರೀ ಕೃತಿಗಳನ್ನು ಇಲ್ಲಿ ಗಮನಿಸಬಹುದು. ಶ್ರೀಹರಿಯ ಅವತಾರಗಳೂ ಸಹ ಮೂಲರೂಪದಂತೆ ಪರಿಪೂರ್ಣವಾಗಿ ಮಂಗಲಸ್ವರೂಪವುಳ್ಳವುಗಳು ಎಂಬುದು ಈ ಪದದ ಭಾವ. ಇದರಿಂದ ಮೇಲ್ನೋಟಕ್ಕೆ ಸಂದೇಹಾಸ್ಪದವೆಂದು ತೋರುವ ವಾಲಿವಧೆ, ಸೀತಾಪರಿತ್ಯಾಗ, ಶಂಬೂಕವಧೆ ಮೊದಲಾದ ಪ್ರಸಂಗಗಳು ಸಹ ಶ್ರೀರಾಮನ ಪಾವಿತ್ರ್ಯವನ್ನು ಚಿತ್ರಿಸುವ ಪ್ರಸಂಗಗಳೇ ಆಗಿವೆ ಎಂಬ ವಿಶೇಷಾಂಶ ದೃಢಪಡುವುದು.

೫. **ಸದ್ಗುಣಗಾತ್ರ** : ಶ್ರೀಹರಿಯ ಮೂಲರೂಪದಂತೆ ಅವತಾರರೂಪಗಳೂ ಸಹ ಜ್ಞಾನಾನಂದಮಯವಾದ ಸದ್ಗುಣಸ್ವರೂಪದ ಆಕೃತಿಯನ್ನು ಹೊಂದಿವೆ ಎಂಬ ವಿಶೇಷಾಂಶ ಇದರಿಂದ ಸೂಚಿತ. ಇದು ಸಹ ಶ್ರೀಹರಿಗೆ ಸರ್ವಥಾ ಪ್ರಾಕೃತದೇಹವಿಲ್ಲ ಎಂಬ ಪ್ರಮೇಯವನ್ನು ತಿಳಿಸುವ ಅಪೂರ್ವವಾದ ಪದ.

೬. **ಸತ್ಪಾತ್ರ** : ಸತ್ ಎಂದರೆ ಉತ್ತಮ ಎಂದರ್ಥ(**ಸಚ್ಛಬ್ದಃ ಉತ್ತಮಂ ಬ್ರೂಯಾತ್**). ಶ್ರೀಹರಿಯಂತೆ ಉತ್ತಮವಾದ ಅರ್ಹತೆಯನ್ನು ಸರ್ವರೀತಿಯಲ್ಲೂ ಪಡೆದ ಮತ್ತೊಬ್ಬ ದೇವತೆ ಇಲ್ಲ ಎಂದು ಇದರ ಭಾವ. ಪಾತ್ರರಿಗೆ ದಾನಾದಿಗಳನ್ನು ಸಮರ್ಪಿಸುವುದು ವಿಹಿತ. ಶ್ರೀಹರಿಯು ಹೀಗೆ ಸತ್ಪಾತ್ರನಾದ್ದರಿಂದ ಅವನಿಗೆ ಸಕಲ ಪದಾರ್ಥಗಳು ಸರ್ವಾತ್ಮನಾ ಸಮರ್ಪಿತವಾಗಲೇಬೇಕು ಎಂಬ ತತ್ವವೂ ಸೂಚಿತ : **ಕಾಯೇನ ವಾಚಾ ಮನಸೇಂದ್ರಿಯೈರ್ವಾ ಬುದ್ಧ್ಯಾತ್ಮನಾ ವಾಽನುಸೃತಸ್ವಭಾವಃ । ಕರೋತಿ ಯದ್ಯತ್ ಸಕಲಂ ಪರಸ್ಮೈ ನಾರಾಯಣೇತಿ ಸಮರ್ಪಯೇತ್ ತತ್**. ಸತ್ ಎಂದರೆ ವಾಯು ಎಂಬುದು ಮತ್ತೊಂದು ಅರ್ಥ : **ಸದಿತಿ ಪ್ರಾಣಃ**. ಮುಖ್ಯಪ್ರಾಣನಿಗೆ ಪಾತ್ರೆಯಂತೆ ಆಧಾರನಾದವನು ಶ್ರೀಹರಿ ಎಂಬುದು ಇದರ ಅರ್ಥ. ಶ್ರೀಕೃಷ್ಣರಾಮರೂಪಗಳು ಹನುಮಂತ ಹಾಗೂ ಭೀಮಸೇನ ಎಂಬ ಮುಖ್ಯಪ್ರಾಣನ ರೂಪಗಳಿಂದ ವಿಶೇಷವಾಗಿ

ಆರಾಧಿತ ಎಂಬುದು ಸುಪ್ರಸಿದ್ಧವಾದ ವಿವರ. ಜೀವೋತ್ತಮರಾದ ಮುಖ್ಯಪ್ರಾಣನಿಗೆ ಆಸರೆಯಾದ ಶ್ರೀಹರಿ ಸರ್ವೋತ್ತಮ ಎಂದರ್ಥ: **ಪ್ರಾಣಸ್ಯ ಪ್ರಾಣಃ.**

೭. **ಧಾತ್ರಿಜಾಂತಕ** : ಧಾತ್ರಿ ಎಂದರೆ ಭೂಮಿ; ಧಾತ್ರಿಜ ಎಂದರೆ ಭೂಮಿಪುತ್ರನಾದ ನರಕಾಸುರ. ಬ್ರಹ್ಮವರದಿಂದ ಅವಧ್ಯನಾಗಿದ್ದ ಅವನನ್ನು ಶ್ರೀಕೃಷ್ಣ ಅನಾಯಾಸದಿಂದ ಸಂಹರಿಸಿದ ವಿವರ ಶ್ರೀಮದ್ಭಾಗವತಾದಿಗಳಲ್ಲಿ ಬಂದಿದೆ.

೮. **ಕಪಟನಾಟಕಸೂತ್ರ** : ಕಪಟ ಎಂದು ತೋರುವ ವರ್ತನೆಯಿಂದ ಅಸುರರನ್ನು ಸದೆಬಡಿಯುವವನು ಶ್ರೀಹರಿ ಎಂದರ್ಥ. ಶ್ರೀಹರಿಯ ವರ್ತನೆ ಕಪಟ ಎಂಬುದು ಇದರ ಭಾವ. ಕಪಟಿಗಳಿಗಾಗಿ ಕಪಟವನ್ನು ತೋರುವುದು ಶಾಸ್ತ್ರವಿಹಿತವಾದ ಮಾರ್ಗ : **ನಿಕೃತ್ಯಾ ನಿಕೃತಿಂ ಹನ್ಯಾತ್.** ಮತ್ತೊಂದು ರೀತಿಯಲ್ಲಿ ತಾನು ಅಸುರರಿಗೆ ತೋರುವುದು ಕಪಟ ಮಾತ್ರ, ವಸ್ತುಸ್ಥಿತಿಯನ್ನಲ್ಲ ಎಂಬ ಅರ್ಥವೂ ಇದಕ್ಕೆ ಉಂಟು.

೯. **ಪರಮಪವಿತ್ರ** : ಶ್ರೀಹರಿಯು ಪವಿತ್ರವಸ್ತುಗಳಲ್ಲಿಯೂ ಅತ್ಯಂತ ಪವಿತ್ರನಾದವನು ಮಾತ್ರವಲ್ಲದೆ, ಪ್ರತಿಯೊಂದು ಪವಿತ್ರ ವಸ್ತುವಿಗೂ ಸಹ ಪಾವಿತ್ರ್ಯವನ್ನು ನೀಡುವವನು ಎಂದರ್ಥ: **ಪವಿತ್ರಾಣಾಂ ಪವಿತ್ರಂ ಯೋ ಮಂಗಲಾನಾಂ ಚ ಮಂಗಲಮ್.** ಪವಿತ್ರ ಎಂಬುದಕ್ಕೆ **ಪವಿವತ್ ತ್ರಾತಿ** ಎಂಬ ವ್ಯುತ್ಪತ್ತಿಯಿಂದ ವಜ್ರಾಯುಧದಂತೆ ರಕ್ಷಣೆ ನೀಡುವವನು ಎಂಬ ಅರ್ಥ ಲಭಿಸುವುದು. ತನ್ನ ಭಕ್ತರನ್ನು ಶ್ರೀಹರಿ ವಜ್ರಕವಚದಂತೆ ಸಂರಕ್ಷಿಸುವನು ಎಂಬ ಭಾವ ಇದರಿಂದ ಸೂಚಿತ.

೧೦. **ಫಲ್ಗುಣಮಿತ್ರ** : ಫಲ್ಗುಣ ಎಂದರೆ ಅರ್ಜುನ; ಶ್ರೀಕೃಷ್ಣ ಅವತರಿಸಿದ ವರ್ಷದ ಫಾಲ್ಗುಣಮಾಸದಲ್ಲಿ ಜನಿಸಿದ್ದರಿಂದ ಅರ್ಜುನನಿಗೆ ಫಲ್ಗುಣ ಎಂದು ಹೆಸರು. ಮಿತ್ರ ಎಂದರೆ ಸ್ನೇಹಿತ ಎಂಬುದು ಲೋಕರೂಢಿಯ ಅರ್ಥ. ಆಪತ್ತುಗಳನ್ನು ಅರಿತು ಸಂರಕ್ಷಿಸುವ ಹಿತೈಷಿ ಎಂಬುದು ಶಾಸ್ತ್ರಗಳಲ್ಲಿ ಬಂದಿರುವ ಅರ್ಥ: **ಮಿನೋತಿ ತ್ರಾಯತೇ ಚೇತಿ ಮಿತ್ರಮಿತ್ಯಭಿಧೀಯತೇ.** ಶ್ರೀಹರಿಯು ಸಕಲಭಕ್ತರಿಗೂ ಸಹ ಅನಾದಿಕಾಲದಿಂದಲೂ ಮಿತ್ರನೇ ಆಗಿರುವನು. ಮುಖ್ಯಪ್ರಾಣನಿಗೆ ಮಾತ್ರ ವಿಶೇಷ ಮಿತ್ರ : **ಮಮಾಭ್ಯಧಿಕ-ಮಿತ್ರಾಯ ನಮೋ ನಾರಾಯಣಾಯ ತೇ - (**ಈಶಾವಾಸ್ಯಭಾಷ್ಯ**).** ಅರ್ಜುನನಲ್ಲಿ ವೀರನಾಮಕ ವಾಯುದೇವರ ಆವೇಶ ಇದ್ದದ್ದರಿಂದಾಗಿ ಅವನಿಗೆ ಶ್ರೀಕೃಷ್ಣ ಸಾರಥಿ ಮೊದಲಾದ ಅನೇಕ ಬಗೆಯಲ್ಲಿ ವಿಶೇಷ ರಕ್ಷಣೆ ನೀಡಿದ್ದ ಎಂಬುದು ಇದರ ಭಾವ.

೧೧. **ವಾಕ್ಯವಿಚಿತ್ರ** : ಶ್ರೀರಾಮನ ಪ್ರತಿಯೊಂದು ಮಾತೂ ಸಹ ವಿಚಿತ್ರ ಬಗೆಯಲ್ಲಿ ಅರ್ಥದಲ್ಲಿ ತೆರೆದುಕೊಳ್ಳುವುದು ಎಂಬುದು ಇದರ ಭಾವ. ಶ್ರೀರಾಮ ಸಾಕ್ಷಾತ್ ಭಗವಂತನಾದ್ದರಿಂದ ಅವನ ಮಾತುಗಳಿಗೆ ವೇದಕ್ಕೂ ಮಿಗಿಲಾದ ಅರ್ಥಗಳು ಸಮುಚಿತ ಎಂಬ ಸೂಚನೆ ಇದರಲ್ಲಿದೆ. ವ್ಯಾಸರೂಪದಿಂದಂತೂ ಶ್ರೀಹರಿ ಮಾಡಿರುವ ಜ್ಞಾನಕಾರ್ಯ ''ವ್ಯಾಸೋಚ್ಛಿಷ್ಟಂ ಜಗತ್ಸರ್ವಂ'' ಎಂಬ ಮಾತಿನಲ್ಲಿ ಸುಪ್ರಸಿದ್ಧ.

**- ಮುಂದುವರೆಯುವುದು**

*****

# ಮಾಸದ ವಿಶೇಷಗಳು

## ಜ್ಯೇಷ್ಠಮಾಸ ಕೃಷ್ಣಪಕ್ಷ

೧೧.೦೬.೧೨ : ಶುಕ್ರೋದಯ
೧೪.೦೬.೧೨ : **ದಶಮೀ, ಮಿಥುನ ಸಂಕ್ರಮಣ**
**೧೫.೦೬.೧೨ : ಸರ್ವರಿಗೂ ಏಕಾದಶೀ(ಯೋಗಿನೀ)**
**೧೬.೦೬.೧೨ : ದ್ವಾದಶೀ,** ಷಡಶೀತಿಪರ್ವ ಪುಣ್ಯಕಾಲ
೧೯.೦೬.೧೨ : (ಮಣ್ಣೆತ್ತಿನ)ಅಮಾವಾಸ್ಯೆ, ವಿಷ್ಣುಪಂಚಕವ್ರತ, ಅನ್ವಾಧಾನ

## ಆಷಾಢಮಾಸ ಶುಕ್ಲಪಕ್ಷ (ಮಾಸನಿಯಾಮಕ : ವೃಷಾಕಪಿ-ವಾಮನ)

೨೯.೦೬.೧೨ : ದಶಮೀ, ಚಾತುರ್ಮಾಸ್ಯ ವ್ರತಾರಂಭ, ಚಾಕ್ಷುಷ ಮನ್ವಾದಿ,
**ಧಾರಣ-ಪಾರಣ ವ್ರತ ಆರಂಭ**
**೩೦.೦೬.೧೨ : ಸರ್ವರಿಗೂ ಏಕಾದಶೀ(ಶಯನೀ), ಶಾಕವ್ರತಾರಂಭ**
**೦೧.೦೭.೧೨ : ಅಲ್ಪದ್ವಾದಶೀ (ಬೆಳಿಗ್ಗೆ ೭.೧೬ರ ಒಳಗೆ),**
**ಗೋಪದ್ಮ ವ್ರತಾರಂಭ**
**೦೩.೦೭.೧೨ : ವ್ಯಾಸ ಪೌರ್ಣಿಮಾ, ವಿಷ್ಣುಪಂಚಕವ್ರತ,ಅನ್ವಾಧಾನ**

## ಆಷಾಢಮಾಸ ಕೃಷ್ಣಪಕ್ಷ

೦೬.೦೭.೧೨ : ವಿಷ್ಣುಪಂಚಕವ್ರತ
೧೩.೦೭.೧೨ : ದಶಮೀ
**೧೪.೦೭.೧೨ : ಸರ್ವರಿಗೂ ಏಕಾದಶೀ (ಕಾಮಿಕಾ)**
**೧೫.೦೭.೧೨ : ಅತಿರಿಕ್ತ ಏಕಾದಶೀ ಉಪವಾಸ (ಕೆಲವು ಮಠಗಳಿಗೆ ಮಾತ್ರ ;**
**ವಿವರಗಳು ಮುಂದಿನ ಸಂಚಿಕೆಯಲ್ಲಿ)**
೧೬.೦೭.೧೨ : ಕಲಾಮಾತ್ರಸಾಧನೀ, ದಕ್ಷಿಣಾಯನಪರ್ವಪುಣ್ಯಕಾಲ
೧೮.೦೭.೧೨ : ಅಮಾವಾಸ್ಯೆ , ಅನ್ವಾಧಾನ
೧೯.೦೭.೧೨ : **ದೀಪಸ್ತಂಭಗೌರೀವ್ರತ,** ವಿಷ್ಣುಪಂಚಕವ್ರತ

## ಶ್ರಾವಣಮಾಸ ಶುಕ್ಲಪಕ್ಷ (ಮಾಸನಿಯಾಮಕ : ಧನ್ಯಾ-ಶ್ರೀಧರ)

೨೦.೦೭.೧೨ : ಚಂದ್ರದರ್ಶನ
೨೨.೦೭.೧೨ : ನಾಗಚತುರ್ಥೀ
೨೩.೦೭.೧೨ : ನಾಗರಪಂಚಮೀ

೨೪.೦೭.೧೨ : ಕಲ್ಕಿಜಯಂತೀ, ಮಂಗಳಗೌರೀವ್ರತ
೨೭.೦೭.೧೨ : ವರಮಹಾಲಕ್ಷ್ಮೀವ್ರತ
೨೮.೦೭.೧೨ : **ದಶಮೀ**
**೨೯.೦೭.೧೨ : ಸರ್ವರಿಗೂ ಏಕಾದಶೀ(ಪುತ್ರದಾ)ದಧಿವ್ರತಾರಂಭ**
**೩೦.೦೭.೧೨ : ದ್ವಾದಶೀ, ಶ್ರೀವಿಷ್ಣುವಿಗೆ ಪವಿತ್ರಾರೋಪಣ**
೩೧.೦೭.೧೨ : ಮಂಗಳಗೌರೀವ್ರತ

## ಗುರುಗಳ ಪುಣ್ಯದಿನಗಳು

೧೩.೦೬.೧೨ : ಶ್ರೀಸತ್ಯಧೀರತೀರ್ಥರು (ಉ.ಮ), ಆತಕೂರ
೧೫.೦೬.೧೨ : ಶ್ರೀವಿದ್ಯಾಪತಿತೀರ್ಥರು(ಉ.ಮ), ರಾಯವೇಲೂರು
೧೭.೦೬.೧೨ : ಶ್ರೀವಿಜಯೀಂದ್ರತೀರ್ಥರು(ರಾ.ಮ), ಕುಂಭಕೋಣ
೨೨.೦೬.೧೨ : ಶ್ರೀಸುಶೀಲೇಂದ್ರತೀರ್ಥರು(ರಾ.ಮ.),ಹೊಸರಿತ್ತಿ
೨೩.೦೬.೧೨ : ಶೇಷಚಂದ್ರಿಕಾಚಾರ್ಯರು(ವ್ಯಾ.ಮ.), ತಿರುಮಕೂಡಲು
೨೫.೦೬.೧೨ : ಶ್ರೀವರದೇಂದ್ರತೀರ್ಥರು(ರಾ.ಮ.), ಪುಣೆ
೨೮.೦೬.೧೨ : ಶ್ರೀಸತ್ಯಾಧಿರಾಜತೀರ್ಥರು(ಉ.ಮ.),ರಾಯವೇಲೂರು
ಶ್ರೀವಿದ್ಯಾಸಿಂಧುತೀರ್ಥರು(ವ್ಯಾ.ಮ.),ಸೋಸಲೆ
೦೨.೦೭.೧೨ : ಶ್ರೀಸತ್ಯಸಂಕಲ್ಪತೀರ್ಥರು(ಉ.ಮ), ಮೈಸೂರು
೦೮.೦೭.೧೨ : ಶ್ರೀಮಜ್ಜಯತೀರ್ಥರು, ಮಳಖೇಡ
೧೯.೦೭.೧೨ : ಶ್ರೀಸತ್ಯಾಧೀಶತೀರ್ಥರು(ಉ.ಮ) ರಾಜಮಹೇಂದ್ರೀ

*****

**ಏಪ್ರಿಲ್ ರಕ್ಷಾಪುಟ-೩ : ಶ್ರೀಪಂಚಮುಖಿಪ್ರಾಣದೇವರು, ಕುಂಭಕೋಣಕ್ಷೇತ್ರ**
ಚಿತ್ರ : ಡಾ॥ಎಸ್.ಹನುಮಂತಜೋಯಿಸ್, ಶಿವಮೊಗ್ಗ

ಶ್ರೀಕುಂಭಕೋಣಕ್ಷೇತ್ರದಲ್ಲಿನ ಶ್ರೀಸಾರಂಗಪಾಣಿದೇವಾಲಯದಲ್ಲಿರುವ ಅಪ-ರೂಪದ ವಿಗ್ರಹ ಇದಾಗಿದೆ. ರಾಜರಾಜಚೋಳನ ಕಾಲದ ವಿಗ್ರಹ ಎಂದು ಪ್ರತೀತಿ.

**ಮೇ ರಕ್ಷಾಪುಟ-೧ : ಶ್ರೀಭೂಸಮೇತ ಶ್ರೀವಿಷ್ಣು, ಮುಕ್ತಿನಾಥಕ್ಷೇತ್ರ , ನೇಪಾಳ**
ಚಿತ್ರ : ಶ್ರೀನಾಗರಾಜರಾವ್, ಬೆಂಗಳೂರು

**ಜೂನ್ ರಕ್ಷಾಪುಟ-೧ : ಸೌಮ್ಯ ಕೇಶವ, ನಾಗಮಂಗಲ,**
ಚಿತ್ರ : ಡಾ॥ಎಸ್.ಹನುಮಂತಜೋಯಿಸ್, ಶಿವಮೊಗ್ಗ

ಮಂಡ್ಯಜಿಲ್ಲೆಯ ನಾಗಮಂಗಲದಲ್ಲಿರುವ ವಿಗ್ರಹ, ೧೨ನೇ ಶತಮಾನದ ಹೊಯ್ಸಳ ಶೈಲಿಯ ನಿರ್ಮಾಣದ ದೇವಾಲಯ ಇಲ್ಲಿದೆ. ಕಪ್ಪುಶಿಲೆಯ ಈ ವಿಗ್ರಹದ ಎತ್ತರ ಸುಮಾರು ೩.೫ ಅಡಿ. ಇದರ ಪಕ್ಕದಲ್ಲಿ ಶ್ರೀಯೋಗನರಸಿಂಹ ದೇವಸ್ಥಾನವೊಂದಿದೆ.

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

'Pajaka', # 89/24, III Cross, Mount Joy Road, Hanumanthanagar, Bangalore - 560 019.
Website: www.vyasamadhwa.org Ph:26602802 Email: info@vyasamadhwa.org

## ಸಂಸ್ಥೆಯ ಪ್ರಮುಖ ಯೋಜನೆಗಳು

೧. ಪ್ರಾಚೀನ ಸಂಸ್ಕೃತ ಹಸ್ತಪ್ರತಿಗ್ರಂಥಗಳನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂರಕ್ಷಿಸುವುದು; ಈಗಾಗಲೇ ೨೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿ, ತನ್ನ 'ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ'ದಲ್ಲಿ ಸಂರಕ್ಷಿಸುತ್ತಿದೆ.

೨. ಶ್ರೀವ್ಯಾಸಮಧ್ವರ ಕೃತಿಗಳ ಅನುವಾದ ಹಾಗೂ ವಿವರಣೆಗಳನ್ನೊಳಗೊಂಡ ಕೃತಿಗಳನ್ನು, ಹರಿದಾಸಸಾಹಿತ್ಯವನ್ನು ಪ್ರಕಾಶನಪಡಿಸುವುದು (ಐತರೇಯಪ್ರಕಾಶನ); ಈಗಾಗಲೇ ೩೦೦೦೦ ಪುಟಗಳಿಗೂ ಮೀರಿದ ಸಾಹಿತ್ಯವನ್ನು ಸಂಸ್ಕೃತ, ಕನ್ನಡ, ಆಂಗ್ಲ ಹಾಗೂ ತೆಲುಗು ಭಾಷೆಗಳಲ್ಲಿ ಪ್ರಕಾಶನ ಪಡಿಸಲಾಗಿದೆ.

೩. 'ಶ್ರೀರಾಘವೇಂದ್ರ ವೇದಾಂತಪಾಠಶಾಲಾ' ಎಂಬ ಸಂಸ್ಥೆಯನ್ನೂ ಪ್ರಾರಂಭಿಸಿ, ಪ್ರತಿನಿತ್ಯ ಸರ್ವ-ಮೂಲಗ್ರಂಥಗಳ ಪಾಠ-ಪ್ರವಚನ, ಸ್ತೋತ್ರಪಾಠ ಇತ್ಯಾದಿಗಳನ್ನು ಅನೇಕ ವರ್ಷಗಳಿಂದ ನಿರಂತರ ನಡೆಸುತ್ತಾ ಬಂದಿದೆ.

೪. 'ಶ್ರೀವ್ಯಾಸಮಧ್ವಸೇವಾಪುರಸ್ಕಾರ ಯೋಜನೆ': ಶ್ರೀವ್ಯಾಸಮಧ್ವರ ಸೇವೆ ಸಲ್ಲಿಸಿದ ವೃದ್ಧ ವಿದ್ವಾಂಸರಿಗೆ ಪ್ರತಿತಿಂಗಳು ಮಾಸಿಕ ಗೌರವಧನವನ್ನು ಆಜೀವ ಸಲ್ಲಿಸುವುದು; ಪ್ರಕೃತ ೨೬ ವಿದ್ವಾಂಸರಿಗೆ ರೂ. ೧೦೦೦/-ಗಳನ್ನು ಸಲ್ಲಿಸುತ್ತಿದೆ.

೫. ಶ್ರೀವ್ಯಾಸಮಧ್ವರ ಕೃತಿಗಳನ್ನು ಅಧ್ಯಯನ ಮಾಡುತ್ತ, ಲೌಕಿಕ ವಿದ್ಯೆಯ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕಸಹಾಯ ನೀಡುವುದು.

೬. ಪ್ರತಿವರ್ಷ ಒಬ್ಬ ಶ್ರೇಷ್ಠ ಹಿರಿಯವಿದ್ವಾಂಸರಿಗೆ ರೂ. ೧೨,೦೦೦/-ಗಳ 'ಶ್ರೀವ್ಯಾಸಮಧ್ವಸೇವಾಪ್ರಶಸ್ತಿ'.

೭. ಮಹಾಭಾರತತಾತ್ಪರ್ಯನಿರ್ಣಯವನ್ನು ಪೂರ್ಣಕಂಠಪಾಠ ಒಪ್ಪಿಸುವ ವಿದ್ಯಾರ್ಥಿಗೆ ರೂ.೨೫,೦೦೦/- ಪ್ರಶಸ್ತಿ, ಸುಮಧ್ವವಿಜಯವನ್ನು ಒಪ್ಪಿಸುವ ವಿದ್ಯಾರ್ಥಿಗೆ 'ಶ್ರೀಮಧ್ವಪ್ರಿಯ' ಪ್ರಶಸ್ತಿ, ಹಾಗೂ ಹರಿಕಥಾಮೃತಸಾರವನ್ನು ಒಪ್ಪಿಸುವ ವಿದ್ಯಾರ್ಥಿನಿಗೆ 'ದಾಸಪ್ರಿಯ' ಪ್ರಶಸ್ತಿಪ್ರದಾನ.

೮. ಶ್ರೀವ್ಯಾಸಮಧ್ವರನ್ನು ಹಾಗೂ ಅವರ ಕೃತಿಗಳನ್ನು ಕುರಿತ ಸಂಶೋಧನಕೃತಿಗಳ ಪ್ರಕಾಶನಕ್ಕೆ ಆರ್ಥಿಕ ಸಹಾಯ.

೯. ಯುವಜನತೆಯಲ್ಲಿ ತಾತ್ತ್ವಿಕಜಾಗೃತಿಯನ್ನು ಉಂಟು ಮಾಡಲು ಕಾಲಕಾಲಕ್ಕೆ ಶ್ರೀವ್ಯಾಸಮಧ್ವರ ತತ್ತ್ವಗಳ ಬಗ್ಗೆ ಕಾರ್ಯಾಗಾರಗಳನ್ನು, ವಿಚಾರಸಂಕಿರಣಗಳನ್ನು ಮತ್ತು ವಿದ್ವದ್ಗೋಷ್ಠಿಗಳನ್ನು ಏರ್ಪಡಿಸುವುದು.

ಅಪಾರವೆಚ್ಚದ ಈ ಎಲ್ಲ ಯೋಜನೆಗಳಿಗಾಗಿ ಪ್ರತಿಷ್ಠಾನವು ಯಾವುದೇ ರೀತಿಯ ದೇಣಿಗೆಯನ್ನು ಆಸ್ತಿಕಜನತೆಯಿಂದ ಸ್ವಾಗತಿಸುತ್ತದೆ. ರೂ.೧೫,೦೦೦/- ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತದ ದೇಣಿಗೆಯನ್ನು ನೀಡುವವರಿಗೆ ಸರ್ವಮೂಲಗ್ರಂಥಗಳು, ಮಹಾಭಾರತತಾತ್ಪರ್ಯನಿರ್ಣಯ ಹಾಗೂ ಹರಿಕಥಾಮೃತಸಾರಗಳ ಅನುವಾದಗಳು ಸೇರಿದಂತೆ ಪ್ರತಿಷ್ಠಾನದ ಪ್ರಕಾಶನದಲ್ಲಿ ಲಭ್ಯವಿರುವ ಎಲ್ಲಾ ಗ್ರಂಥಗಳನ್ನು ಉಚಿತವಾಗಿ ನೀಡಲಾಗುವುದು.

### ವಿಶೇಷ ಸೂಚನೆ :

೧. ದೇಣಿಗೆಗಳನ್ನು ''ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ(ರಿ.)'', ಬೆಂಗಳೂರು - ಈ ಹೆಸರಿಗೆ ನಗದು/ಚೆಕ್/ಡ್ರಾಫ್ಟ್ ಮೂಲಕ ಸಲ್ಲಿಸಿ ಅಧಿಕೃತ ರಸೀತಿಯನ್ನು ಪಡೆಯತಕ್ಕದ್ದು.

೨. **80G** ಅನ್ವಯ ಆದಾಯ ತೆರಿಗೆ ವಿನಾಯಿತಿಯನ್ನು ಬಯಸುವವರು ನಮ್ಮ ಪ್ರತಿಷ್ಠಾನಕ್ಕೆ **''Sri Vyasa Madhwa Research Foundation (R)''** ಎಂಬ ಹೆಸರಿಗೆ ದೇಣಿಗೆ ನೀಡಬಹುದು.